ಸೋಮವಾರ, ಆಗಸ್ಟ್ 4, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶೀಘ್ರ ಬುಲೆಟ್ ರೈಲು

ಭಾರತದ ಮೊದಲ ಬುಲೆಟ್ ರೈಲು ಶೀಘ್ರವೇ ಆರಂಭವಾಗಲಿದ್ದು, ಇದರಿಂದಾಗಿ ಮುಂಬೈ–ಅಹಮದಾಬಾದ್ ನಡುವಣ ಪ್ರಯಾಣ ಅವಧಿ 2 ಗಂಟೆ 7 ನಿಮಿಷಕ್ಕೆ ಇಳಿಕೆಯಾಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ



ತಂತ್ರಾಂಶಗಳ ಅವಲಂಬನೆ

ದೇಶದ ಪ್ರತಿ ಮೂವರಲ್ಲಿ ಒಬ್ಬರು ಆಹಾರ ಮತ್ತು ಇತರ ವಸ್ತುಗಳ ಆಯ್ಕೆಯ ನಿರ್ಧಾರಕ್ಕೆ ಚಾಟ್‌ಜಿಪಿಟಿ, ಗೂಗಲ್‌ನಂತಹ ತಂತ್ರಾಂಶಗಳನ್ನು ಅವಲಂಬಿಸಿದ್ದಾರೆ ಎಂದು ಸಮೀಕ್ಷಾ ವರದಿಯೊಂದು ತಿಳಿಸಿದೆ



ಚಿಟಿಕೆ ಸುದ್ದಿ

ಮಂಜರಾಬಾದ್ ಕೋಟೆಯಲ್ಲಿ ಗೋಡೆ ಕುಸಿತ



ಸಕಲೇಶಪುರ ತಾಲ್ಲೂಕಿನ ಮಂಜರಾಬಾದ್ ಕೋಟೆಯ ಒಂದು ಭಾಗದ ಗೋಡೆ ಕುಸಿದಿದೆ

ಸಕಲೇಶಪುರ (ಹಾಸನ ಜಿಲ್ಲೆ): ಭಾರಿ ಮಳೆಯಿಂದಾಗಿ ತಾಲ್ಲೂಕಿನ ಮಂಜರಾಬಾದ್ ಕೋಟೆಯ ಒಂದು ಭಾಗದ ಗೋಡೆ ಶನಿವಾರ ತಡರಾತ್ರಿ ಕುಸಿದಿದೆ.

ಕೋಟೆಯ ಸೈನಿಕರು, ವಿಶ್ರಾಂತಿ ಪಡೆಯುತ್ತಿದ್ದರು ಎಂದು ಹೇಳಲಾಗುವ ಪ್ರದೇಶ ಕುಸಿದಿದೆ. ಮುಂಜಾನೆ ಕಾವಲುಗಾರ ಸಿಬ್ಬಂದಿ ಕೆಲಸಕ್ಕೆ ಬಂದ ಸಂದರ್ಭದಲ್ಲಿ ಗುರುತಿಸಿದ್ದಾರೆ. ನಕ್ಷತ್ರ ಆಕಾರದ ಮಂಜರಾಬಾದ್ ಕೋಟೆ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಕೋಟೆಯನ್ನು ಟಿಪ್ಪು ಸುಲ್ತಾನ್ ಆಡಳಿತದ ಅವಧಿಯಲ್ಲಿ 1785ರಲ್ಲಿ ನಿರ್ಮಾಣ ಆರಂಭಿಸಿ, 1792ರಲ್ಲಿ ಪೂರ್ಣಗೊಳಿಸಲಾಗಿತ್ತು. 1956ರಿಂದ ಪುರಾತತ್ವ ಇಲಾಖೆ ಸಂರಕ್ಷಣೆ ಹೊಣೆ ಹೊತ್ತಿದೆ.

'ರಾಜ್ಯ ಬಿಜೆಪಿ ಅಧ್ಯಕ್ಷ ಚುನಾವಣೆ ಶೀಘ್ರ'

ಧಾರವಾಡ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ಶೀಘ್ರದಲ್ಲಿಯೇ ಆರಂಭವಾಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇಲ್ಲಿ ಭಾನುವಾರ ತಿಳಿಸಿದರು.



ಪ್ರಲ್ಹಾದ ಜೋಶಿ

ತಾಲ್ಲೂಕಿನ ಹೆಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದ ರಾಷ್ಟ್ರೀಯ ನಾಯಕರು ಎಲ್ಲರ ಜೊತೆ ಚರ್ಚಿಸಿ, ಚುನಾವಣೆ ಪ್ರಕ್ರಿಯೆ ನಡೆಸುತ್ತಾರೆ' ಎಂದರು.

'ಬಿ.ವೈ.ವಿಜಯೇಂದ್ರ ಅವರನ್ನೇ ಅಧ್ಯಕ್ಷರಾಗಿ ಮಾಡಬೇಕು ಎಂದು ಒಂದು ಗುಂಪಿನ ಒತ್ತಾಯ ಇದೆ ಎಂಬ ಮಾತಿಗೆ ಪ್ರತಿಕ್ರಿಯಿಸಿ, ವಿಜಯೇಂದ್ರ ಹಾಗೂ ಸೋಮಣ್ಣ ನಾನೇ ಅಧ್ಯಕ್ಷ ಆಗಬೇಕು ಎಂದು ಹೇಳಿಲ್ಲ ಎಂದು ಹೇಳಿದರು.

ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ ರಚನೆ

ಬೆಂಗಳೂರು: ರಾಜ್ಯದ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆಯನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.



ಈ ಕಾರ್ಯಪಡೆಯು ಡಿಜಿ–ಐಜಿಪಿ ಅವರ ನಿಗಾದಲ್ಲಿ ಕೆಲಸ ಮಾಡಲಿದೆ. ಅಲ್ಲದೆ, ಈ ಕಾರ್ಯಪಡೆಯು ತನ್ನ ವರದಿಯನ್ನು ಸೈಬರ್ ಕಮಾಂಡ್ ಡಿಜಿ ಅವರಿಗೆ ನೀಡಬೇಕು ಎಂದು ಸೂಚಿಸಲಾಗಿದೆ.

ಕಾರ್ಯಪಡೆಯ ಸಮರ್ಪಕ ಕಾರ್ಯನಿರ್ವಹಣೆಗಾಗಿ 10 ಹುದ್ದೆಗಳನ್ನು ಸೃಜಿಸಲಾಗುತ್ತದೆ. ಈ ಹುದ್ದೆಗಳ ಪೈಕಿ ಪೊಲೀಸ್ ಅಧೀಕ್ಷಕ, ಸಹಾಯಕ ಪೊಲೀಸ್ ಆಯುಕ್ತರ ತಲಾ ಒಂದು ಹುದ್ದೆ, ಸಹಾಯಕ ಆಡಳಿತಾಧಿಕಾರಿ, ಶಾಖಾ ಅಧೀಕ್ಷಕ, ಕಿರಿಯ ಸಹಾಯಕ, ಪ್ರಥಮ ದರ್ಜೆ ಸಹಾಯಕ, ಶೀಘ್ರ ಲಿಪಿಗಾರ ಮತ್ತು ದಲಾಯತ್ ತಲಾ 1 ಹುದ್ದೆ ಸೃಜಿಸಲು ನಿರ್ದೇಶಿಸಲಾಗಿದೆ.

ಉಳಿದಂತೆ ನಕ್ಸಲ್ ನಿಗ್ರಹ ಪಡೆಯಿಂದ ಇಬ್ಬರು ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ನಾಲ್ವರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು, 20 ಹೆಡ್ ಕಾನ್‌ಸ್ಟೆಬಲ್‌ಗಳು ಮತ್ತು 30 ಕಾನ್‌ಸ್ಟೆಬಲ್‌ಗಳನ್ನು ವರ್ಗಾಯಿಸಲು ಸೂಚಿಸಲಾಗಿದೆ.

ನರ್ಸಿಂಗ್ ಪದವೀಧರರಿಗೆ ವಿದೇಶಿ ಉದ್ಯೋಗ

ಜರ್ಮನಿಯಲ್ಲಿ ನರ್ಸ್‌ಗಳಿಗೆ ಬೇಡಿಕೆ
• 5,000 ಮಂದಿಗೆ ಜರ್ಮನ್ ಭಾಷೆ ತರಬೇತಿ

• ಎ.ಎಂ.ಸುರೇಶ

ಬೆಂಗಳೂರು: ರಾಜ್ಯದಲ್ಲಿನ ನರ್ಸಿಂಗ್ ಪದವೀಧರರಿಗೆ ವಿದೇಶಗಳಲ್ಲಿ 'ಉದ್ಯೋಗ ಭಾಗ್ಯ' ದೊರೆಯುತ್ತಿದ್ದು, ನರ್ಸಿಂಗ್ ಕೋರ್ಸ್ ಪೂರ್ಣಗೊಳಿಸಿರುವ ಐದು ಸಾವಿರ ಮಂದಿಗೆ ಈ ವರ್ಷ ಜರ್ಮನಿ, ಇಟಲಿ, ಸ್ಪ್ಯಾನಿಷ್, ಇಟಲಿ ಭಾಷೆಗಳಲ್ಲಿ ಸಂವಹನ ಕುರಿತ ತರಬೇತಿ ನೀಡಲು ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮುಂದಾಗಿದೆ.

ಜರ್ಮನಿ, ಜಪಾನ್ ಸೇರಿದಂತೆ ವಿದೇಶಗಳಲ್ಲಿ ನರ್ಸ್‌ಗಳಿಗೆ ಭಾರಿ ಬೇಡಿಕೆ ಇದೆ. ಇದನ್ನು ಮನಗಂಡು ಪದವೀಧರರಿಗೆ ಸೂಕ್ತ ತರಬೇತಿ ನೀಡುವ ಸಂಬಂಧ ಜರ್ಮನಿಯ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ತರಬೇತಿ ಪೂರ್ಣಗೊಂಡ ಬಳಿಕ ಅಲ್ಲಿನ ಸರ್ಕಾರವೇ ಉದ್ಯೋಗಕ್ಕೂ ವ್ಯವಸ್ಥೆ ಮಾಡಲಿದೆ ಎಂದು ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

'ನರ್ಸಿಂಗ್ ಕೋರ್ಸ್ ಮಾಡಿದವರಿಗೆ ವೃತ್ತಿಗೆ ಸಂಬಂಧಿಸಿದ ಕೌಶಲ ಇರುತ್ತದೆ. ಆದರೆ, ವಿದೇಶಿ ಭಾಷೆಗಳಲ್ಲಿ ಸಂವಹನ ನಡೆಸಲು ಬೇಕಾದ ಕೌಶಲ ಇಲ್ಲ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕೌಶಲ ಅಭಿವೃದ್ಧಿ ನಿಗಮದ ಮೂಲಕ ತರಬೇತಿ ನೀಡಲಾಗುತ್ತದೆ. ಕಳೆದ ವರ್ಷ ತರಬೇತಿ ಪಡೆದ 900 ಮಂದಿಗೆ ಉದ್ಯೋಗ ಸಿಕ್ಕಿದೆ. ಮುಂದಿನ ವರ್ಷ 10 ಸಾವಿರ ಮಂದಿಗೆ ತರಬೇತಿ ನೀಡುವ ಉದ್ದೇಶವಿದೆ. ತರಬೇತಿ ನಂತರ ಜರ್ಮನಿ ಸರ್ಕಾರದವರೇ ಸರ್ಟಿಫಿಕೇಟ್ ನೀಡುತ್ತಾರೆ. ಆರಂಭದಲ್ಲಿ ಅವರೇ ತರಬೇತಿ ನೀಡುತ್ತಾರೆ, ಕ್ರಮೇಣ ನಾವೇ ತರಬೇತಿ ಆರಂಭಿಸುತ್ತೇವೆ' ಎಂದು ವಿವರಿಸಿದರು.

'ಜರ್ಮನಿ ಭಾಷೆಯ ಬಗ್ಗೆ ಈಗಾಗಲೇ ತರಬೇತಿ ಶುರುವಾಗಿದೆ. ಈ ವರ್ಷ ಜಪಾನ್, ಇಟಲಿ ಭಾಷೆಗಳಲ್ಲೂ ಶುರು ಮಾಡುತ್ತೇವೆ. ಈ ಮೂಲಕ ರಾಜ್ಯದ ನರ್ಸಿಂಗ್ ಪದವೀಧರರಿಗೆ ವಿದೇಶಗಳಲ್ಲೂ ಉದ್ಯೋಗಾವಕಾಶ ಕಲ್ಪಿಸಿಕೊಡಲು ಮುಂದಾಗಿದ್ದೇವೆ. ಬೇಡಿಕೆ ಆಧರಿಸಿ ಮುಂದಿನ ದಿನಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಇದೇ ರೀತಿ ಸಂವಹನ ಕುರಿತ ತರಬೇತಿ ನೀಡುವ ಉದ್ದೇಶವನ್ನು ಇಲಾಖೆ ಹೊಂದಿದೆ' ಎನ್ನುತ್ತಾರೆ ಮೀನಾ.

'ಪ್ರತಿ ವರ್ಷ ಸುಮಾರು 40 ಸಾವಿರ ಮಂದಿ ನರ್ಸಿಂಗ್ ಪದವಿ ಪಡೆದು ಹೊರಬರುತ್ತಾರೆ. ಅವರಲ್ಲಿ ಎಲ್ಲರಿಗೂ ರಾಜ್ಯದಲ್ಲಿಯೇ ಉದ್ಯೋಗ, ಉತ್ತಮ ವೇತನ ಸಿಗುವುದಿಲ್ಲ. ಹೊರ ದೇಶಗಳಲ್ಲಿ ಒಳ್ಳೆಯ ಅವಕಾಶಗಳು ಇವೆ, ಇದನ್ನು ಮನಗಂಡು ಅವರಿಗೆ ತರಬೇತಿ ನೀಡುವ ಮೂಲಕ ಉದ್ಯೋಗ ಪಡೆಯಲು ನೆರವಾಗುತ್ತಿದ್ದು ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ' ಎಂದು ಅವರು ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- ಕೌಶಲ ಅಭಿವೃದ್ಧಿ ನಿಗಮದಿಂದ ತರಬೇತಿ
- ವಿದೇಶಿ ಭಾಷೆಗಳಲ್ಲಿ ಸಂವಹನ, ಸಂಸ್ಕೃತಿ ಬಗ್ಗೆ ಪರಿಚಯ
- ಕಳೆದ ವರ್ಷ 900 ಮಂದಿಗೆ ಜರ್ಮನಿಯಲ್ಲಿ ಉದ್ಯೋಗ

ಯುವನಿಧಿ ಸೌಲಭ್ಯ ಪಡೆದ ಏಳು ಸಾವಿರ ಮಂದಿಗೆ ಕಳೆದ ವರ್ಷ ತರಬೇತಿ ನೀಡಲಾಗಿದೆ. ಈ ವರ್ಷ 15 ಸಾವಿರ ಮಂದಿಗೆ ತರಬೇತಿ ನೀಡುವ ಮೂಲಕ ಉದ್ಯೋಗಾವಕಾಶ ಪಡೆಯಲು ನೆರವಾಗಲಿದ್ದೇವೆ
ಮನೋಜ್‌ಕುಮಾರ್ ಮೀನಾ, ಕಾರ್ಯದರ್ಶಿ, ಕೌಶಲ ಅಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇಲಾಖೆ

ಇಂಗ್ಲಿಷ್‌ನಲ್ಲಿ ಸಂವಹನ ತರಬೇತಿ

ರಾಜ್ಯದಲ್ಲಿನ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) 72 ಸಾವಿರ ವಿದ್ಯಾರ್ಥಿಗಳು ಇದ್ದು, ಈ ವರ್ಷ ಸುಮಾರು 20 ಸಾವಿರ ವಿದ್ಯಾರ್ಥಿಗಳಿಗೆ ಸಂವಹನ ಮತ್ತು ಇಂಗ್ಲಿಷ್ ಭಾಷೆಯ ಬಗ್ಗೆ ತರಬೇತಿ ನೀಡುವ ಮೂಲಕ ಉದ್ಯೋಗಾವಕಾಶಕ್ಕೆ ನೆರವಾಗಲು ಇಲಾಖೆ ಮುಂದಾಗಿದೆ.

ಐಟಿಐಗಳಲ್ಲಿ ಹೊಸ ಟ್ರೇಡ್‌ಗಳನ್ನು ಪರಿಚಯಿಸುವುದಲ್ಲದೇ, ಶೇ 50ರಷ್ಟು ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಲು ನಿರ್ಧರಿಸಲಾಗಿದೆ. ಜಿಲ್ಲೆಗೆ ಒಂದು ಕ್ಲಸ್ಟರ್‌ಗಳನ್ನು ಗುರುತಿಸಿ, ಅಲ್ಲಿ ಪ್ರಾಯೋಗಿಕವಾಗಿ ಕಲಿಸಲಾಗುತ್ತದೆ. ಇದರಿಂದ ಕೌಶಲ ವೃದ್ಧಿಯಾಗಲಿದ್ದು, ಮುಂದೆ ಉದ್ಯೋಗದಲ್ಲಿ ತೊಡಗಿಕೊಳ್ಳಲು ಅನುಕೂಲವಾಗಲಿದೆ ಎಂದು ಮನೋಜ್‌ಕುಮಾರ್ ಮೀನಾ ತಿಳಿಸಿದರು.

ಮಾರುಕಟ್ಟೆಯಲ್ಲಿನ ಉದ್ಯೋಗಾವಕಾಶಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ, ಪ್ರಾಯೋಗಿಕ ತರಬೇತಿ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಕೈಗಾರಿಕಾ ಸಂಸ್ಥೆಗಳೊಂದಿಗೆ ಚರ್ಚೆ ನಡೆಸಿ, ಬದಲಾವಣೆಗಳನ್ನು ತರಲಾಗಿದೆ. ವಿದೇಶಗಳಲ್ಲಿನ ಉದ್ಯೋಗಾವಕಾಶ ಗಮನದಲ್ಲಿಟ್ಟುಕೊಂಡು, ಅಲ್ಲಿನ ಭಾಷೆಗಳಲ್ಲಿ ಸಂಹವನ ನಡೆಸಲು ಬೇಕಾದ ತರಬೇತಿಯನ್ನು ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ ನೀಡಲಿದೆ ಎಂದು ಅವರು ತಿಳಿಸಿದರು.

150 ಐಟಿಐಗಳ ಉನ್ನತೀಕರಣ

ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಿಂದ (ಎಡಿಬಿ) ₹1,300 ಕೋಟಿ ಸಾಲ ಪಡೆದು ರಾಜ್ಯದಲ್ಲಿನ 150 ಐಟಿಐಗಳಿಗೆ ಸುಸಜ್ಜಿತವಾದ ಕಟ್ಟಡ, ವಸತಿ ನಿಲಯ, ಪ್ರಾಯೋಗಿಕ ಕಲಿಕೆಗೆ ಬೇಕಾದ ಹೊಸ ಮಷಿನ್‌ಗಳ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ.

ಇದರ ರೂಪುರೇಷೆ ಸಿದ್ಧವಾಗಿದ್ದು, ಇದಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶೇ 70ರಷ್ಟನ್ನು ಎಡಿಬಿ ಸಾಲ ರೂಪದಲ್ಲಿ ನೀಡಲಿದ್ದು, ಇನ್ನುಳಿದ ಶೇ 30ರಷ್ಟನ್ನು ರಾಜ್ಯ ಸರ್ಕಾರ ಭರಿಸಲಿದೆ. ಈ ಹಣದಲ್ಲಿ ಹೊಸ ಮಷಿನ್‌ಗಳ ವ್ಯವಸ್ಥೆ, ಕಟ್ಟಡಗಳ ನಿರ್ಮಾಣ, ಮೂಲಸೌಕರ್ಯ ಕಲ್ಪಿಸಲು ಒತ್ತು ನೀಡಲಾಗುತ್ತದೆ.

ಸುದ್ದಿ 2 ನಿಮಿಷ

ಕನ್ನಂಬಾಡಿ ಕಟ್ಟೆಗೆ ಅಡಿಗಲ್ಲು ಹಾಕಿದ್ದೇ ಟಿಪ್ಪು: ಮಹದೇವಪ್ಪ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಕನ್ನಂಬಾಡಿ ಕಟ್ಟೆ (ಕೃಷ್ಣರಾಜಸಾಗರ ಜಲಾಶಯ) ನಿರ್ಮಾಣಕ್ಕೆ ಮೊದಲು ಅಡಿಗಲ್ಲು ಹಾಕಿದ್ದೇ ಟಿಪ್ಪು ಸುಲ್ತಾನ್. ಅದನ್ನು ಹೇಳಿಕೊಳ್ಳಲು ಧೈರ್ಯವೇ ಇಲ್ಲವಾಗಿದೆ' ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಇಲ್ಲಿ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಶ್ರೀರಂಗಪಟ್ಟಣ ಐತಿಹಾಸಿಕ ಸ್ಥಳ. ಒಂದು ಕಡೆ ಮಸೀದಿ, ಇನ್ನೊಂದೆಡೆ ದೇವಸ್ಥಾನ ಇದೆ. ಒಂದೆಡೆ ಅಲ್ಲಾಹು ಅಕ್ಬರ್ ಎನ್ನುತ್ತಾರೆ, ದೇವಸ್ಥಾನದಲ್ಲಿ ಘಂಟೆ ಬಾರಿಸಲಾಗುತ್ತದೆ. ಎರಡನ್ನೂ ಸಮಚಿತ್ತದಿಂದ ಕೇಳಿಸಿಕೊಂಡು ಇದ್ದರಲ್ಲವೇ ಅವರು?' ಎಂದು ಕೇಳಿದರು.

'ಟಿಪ್ಪು ದೇವದಾಸಿ ಪದ್ಧತಿಯನ್ನು ನಿಷೇಧಿಸಿದರು. ಆ ಪದ್ಧತಿಗೆ ಶೋಷಿತ ಸಮಾಜದ, ಆರ್ಥಿಕ, ಶೈಕ್ಷಣಿಕ ವಂಚಿತ ಮಹಿಳೆಯರ ದೂಡಲಾಗುತ್ತಿತ್ತು. ಆ ಕಾಲದಲ್ಲೇ ಟಿಪ್ಪು ಆ ಪದ್ಧತಿ ರದ್ದುಪಡಿಸಿದರು. ಭೂ ಸುಧಾರಣಾ ಕಾಯ್ದೆ ತಂದಿದ್ದರು. ಅವರ ಕಾಲದಲ್ಲಿಯೇ ಉಳ್ಳವರಿಗೆ, ಶ್ರೀಮಂತರಿಗೆ ಒಂದಿಂಚು ಭೂಮಿಯನ್ನೂ ಕೊಟ್ಟಿರಲಿಲ್ಲ' ಎಂದು ಸ್ಮರಿಸಿದರು.



'ದೇಶಕ್ಕೆ ರೇಷ್ಮೆ ಕೃಷಿಯನ್ನು ತಂದವರೇ ಅವರು. ದಲಿತರಿಗೆ ಭೂಮಿ ಹಂಚಿಕೆ ಮಾಡಿದರು. ಪರಧರ್ಮ ಸಹಿಷ್ಣುವಾಗಿದ್ದ ಟಿಪ್ಪು ಹಿಂದೂ ದೇವಾಲಯಗಳಿಗೆ ದಾನ–ದತ್ತಿ ನೀಡಿದ್ದರು. ನಾಡಿನ ರಕ್ಷಣೆಗೆ ಯುದ್ಧ ಭೂಮಿಯಲ್ಲಿ ಹೋರಾಡಿದ್ದ ಅವರನ್ನು ಸ್ಮರಿಸಬೇಕು' ಎಂದರು.

ಹಾಸ್ಯಾಸ್ಪದ ಹೇಳಿಕೆ– ಸಾಕ್ಷ್ಯ ಎಲ್ಲಿದೆ: ಯದುವೀರ್ ಪ್ರಶ್ನೆ

ಮೈಸೂರು: 'ಕನ್ನಂಬಾಡಿ ಕಟ್ಟೆ ನಿರ್ಮಾಣಕ್ಕೆ ಮೊದಲು ಅಡಿಗಲ್ಲು ಹಾಕಿದ್ದೇ ಟಿಪ್ಪು ಸುಲ್ತಾನ್' ಎಂಬ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಹೇಳಿಕೆಗೆ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿರುಗೇಟು ನೀಡಿದ್ದಾರೆ.

ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ಸಚಿವರದು ಹಾಸ್ಯಾಸ್ಪದ ಹೇಳಿಕೆ. ಸಾಕ್ಷ್ಯ ಎಲ್ಲಿಯೂ ಇಲ್ಲ. ಕನ್ನಂಬಾಡಿ ಕಟ್ಟೆ ಕಟ್ಟಿದ್ದು ಯಾರೆಂದು ಎಲ್ಲರಿಗೂ ಗೊತ್ತಿದೆ. ಸಚಿವರು ಹೇಳಿದ ಕಥೆಯನ್ನು ನಾನು ಎಲ್ಲೂ ಕೇಳಿಲ್ಲ' ಎಂದು ಹೇಳಿದರು.

'ಟಿಪ್ಪು ಕಾಲದಲ್ಲಿ ನಾಲ್ಕು ಯುದ್ಧ ನಡೆದಿದೆ. ಅವರು ದೇವಸ್ಥಾನ ಕೆಡವಿದ್ದಾರೆ. ಶ್ರೀರಂಗನಾಥ ದೇಗುಲ ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಮಾತ್ರ ಪೂಜೆ ನಡೆಯುತ್ತಿತ್ತು. ಇದು ಇತಿಹಾಸ. ಮತದಾರರನ್ನು ಓಲೈಸಲು ಏನೇನೋ ಹೇಳಬಾರದು. ರೇಷ್ಮೆ ಕೃಷಿ ಪರಿಚಯ ಸೇರಿ ಕೆಲ ಉಪಯೋಗದ ಕೆಲಸ ಮಾಡಿರಬಹುದು. ಒಂದು ಒಳ್ಳೆಯ ಕೆಲಸದಿಂದ ನೂರು ತಪ್ಪುಗಳನ್ನು ಮುಚ್ಚಿ ಹಾಕಲಾಗದು' ಎಂದರು.

'ಸಾಂಗ್ಲಿ ಪ್ರವಾಹಕ್ಕೆ ಮಹಾರಾಷ್ಟ್ರವೇ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರ ಸರ್ಕಾರವು ಕೊಯ್ನಾ, ರಾಜಾಪುರ ಅಣೆಕಟ್ಟೆಗಳಿಂದ ದಿಢೀರ್ ಎಂದು ಅಪಾರ ಪ್ರಮಾಣದ ನೀರು ಹೊರಬಿಡುವುದರಿಂದಲೇ ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಯಲ್ಲಿ ಪ್ರವಾಹ ತಲೆದೋರುತ್ತದೆ ಎಂದು ಅಲ್ಲಿನ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯೇ ಹೇಳಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಭಾನುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಹಾರಾಷ್ಟ್ರದ ಜಲಸಂಪನ್ಮೂಲ ಇಲಾಖೆಯ ನಿವೃತ್ತ ಪ್ರಧಾನ ಕಾರ್ಯದರ್ಶಿ ನಂದಕುಮಾರ್ ವಡ್ನೇರೆ ಸಲ್ಲಿಸಿದ್ದ ತಜ್ಞರ ವರದಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ.

'ಸಾಂಗ್ಲಿ ಜಿಲ್ಲೆ ಸೇರಿದಂತೆ ಹಲವೆಡೆಗಳಲ್ಲಿ 2019ರಲ್ಲಿ ಪ್ರವಾಹ ಉಂಟಾಗಿತ್ತು. ಭವಿಷ್ಯದಲ್ಲಿ ಪ್ರವಾಹವನ್ನು ತಡೆಯಲು ಏನು ಮಾಡಬೇಕೆಂದು ಸೂಚಿಸುವಂತೆ ತಿಳಿಸಿ ಮಹಾರಾಷ್ಟ್ರ ಸರ್ಕಾರವು ವಡ್ನೇರೆ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿತ್ತು. 2020ರಲ್ಲಿ ಸಮಿತಿಯು ವರದಿ ಸಲ್ಲಿಸಿತ್ತು' ಎಂದು ಮಾಹಿತಿ ನೀಡಿದ್ದಾರೆ.

'ಸಾಂಗ್ಲಿ ಮತ್ತು ಕೊಲ್ಹಾಪುರದಲ್ಲಿ ಪ್ರವಾಹ ಉಂಟಾಗಲು ಕರ್ನಾಟಕದ ಆಲಮಟ್ಟಿ, ಹಿಪ್ಪರಗಿ ಜಲಾಶಯಗಳ ಹಿನ್ನೀರು ಕಾರಣವಲ್ಲ. ಈ ಎರಡೂ ಅಣೆಕಟ್ಟುಗಳ ಹಿನ್ನೀರು ಕರ್ನಾಟಕದೊಳಗೆ ನಿಲ್ಲುತ್ತವೆ. ಮಹಾರಾಷ್ಟ್ರದ ಭೂಪ್ರದೇಶ ಮುಳುಗಡೆ ಆಗುವುದಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ' ಎಂದಿದ್ದಾರೆ.

'ಕೊಯ್ನಾ ಅಣೆಕಟ್ಟೆ, ರಾಜಾಪುರ ಬ್ಯಾರೇಜ್‌ಗಳಿಂದ ಹಂತಹಂತವಾಗಿ ನೀರು ಬಿಡದೆ, ಸಂಪೂರ್ಣ ತುಂಬಿದ ಬಳಿಕ ಒಂದೇ ಸಲ ಲಕ್ಷಾಂತರ ಕ್ಯೂಸೆಕ್ ನೀರನ್ನು ನದಿ ಪಾತ್ರಕ್ಕೆ ಬಿಡುವುದರಿಂದ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ ಎಂದು ವರದಿಯಲ್ಲಿ ಮಹಾರಾಷ್ಟ್ರ ಸರ್ಕಾರದತ್ತಲೇ ಬೊಟ್ಟು ಮಾಡಲಾಗಿದೆ' ಎಂದು ವಿವರಿಸಿದ್ದಾರೆ.



ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸುವುದರಿಂದ ಮಹಾರಾಷ್ಟ್ರಕ್ಕೆ ತೊಂದರೆಯಾಗುವುದಿಲ್ಲ. ದೇವೇಂದ್ರ ಫಡಣವೀಸ್ ಅವರು ಕರ್ನಾಟಕದ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆ
ಎಂ.ಬಿ.ಪಾಟೀಲ, ಕೈಗಾರಿಕಾ ಸಚಿವ

ಲಕ್ಷ್ಮಿ ಬಾರಮ್ಮಾ...

ಪ್ರಜಾವಾಣಿ ಚಿತ್ರ: ರಂಜು ಪಿ.



ಬೆಂಗಳೂರಿನ ಮಾಗಡಿ ಮುಖ್ಯರಸ್ತೆಯ ದಾಸರಹಳ್ಳಿ ಬಸ್ ನಿಲ್ದಾಣದ ಬಳಿ ಮಳಿಗೆಯೊಂದರಲ್ಲಿ ಭಾನುವಾರ ಮಹಾಲಕ್ಷ್ಮಿ ಮೂರ್ತಿಗಳ ಖರೀದಿಯಲ್ಲಿ ಮಹಿಳೆಯರು ತೊಡಗಿದ್ದರು

ಅಕ್ಕೂರು: ಬೋನಿಗೆ ಬಿದ್ದ ಚಿರತೆ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಕೂಟಗಲ್ ಹೋಬಳಿಯ ಅಕ್ಕೂರು ಗ್ರಾಮದಲ್ಲಿ 2 ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಸೆರೆಯಾಗಿದೆ. ಗ್ರಾಮದ ಆಸುಪಾಸಿನ ಬೆಟ್ಟಗುಡ್ಡಗಳಲ್ಲಿ ಚಿರತೆಗಳು ವಾಸಿಸುತ್ತಿವೆ. ಸಂಜೆಯಾದರೆ ಆಹಾರ ಅರಸಿ ಗ್ರಾಮದೊಳಗೆ ಬಂದು ಕುರಿ, ಹಸುವಿನ ಕರು, ಮೇಕೆ, ಕೋಳಿ, ಸಾಕು ನಾಯಿಗಳ ಮೇಲೆ ದಾಳಿ ನಡೆಸಿ ಹೊತ್ತೊಯ್ಯುತ್ತಿದ್ದವು.

ಒಂದೊಂದು ಕೋರ್ಸ್‌ಗೂ ಪ್ರತ್ಯೇಕ ವೇಳಾಪಟ್ಟಿ ಪ್ರಕಟಿಸಿದ ಕೆಇಎ

ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆಯ ಅಂತಿಮ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದ ಬೆನ್ನಲ್ಲೇ ಕಾಲೇಜುಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ.

ಇದೇ ಮೊದಲ ಬಾರಿಗೆ ಒಂದೊಂದು ಕೋರ್ಸ್‌ಗೂ ಪ್ರತೇಕ ಪ್ರವೇಶ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಆ ಪ್ರಕಾರ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಛಾಯ್ಸ್-1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಶುಲ್ಕ ಪಾವತಿ, ನಂತರ ಸೀಟು ಖಾತರಿಯ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆಗಸ್ಟ್ 8ರವರೆಗೆ ಅವಕಾಶ ಇದೆ. ಕಾಲೇಜಿನಲ್ಲಿ ವರದಿ ಮಾಡಿಕೊಳ್ಳಲು ಆಗಸ್ಟ್ 9 ಕೊನೆಯ ದಿನ.

ಕೃಷಿ ವಿಜ್ಞಾನ, ಪಶುವೈದ್ಯಕೀಯ, ಬಿ-ಫಾರ್ಮಾ, ಫಾರ್ಮಾ-ಡಿ ಕೋರ್ಸ್‌ಗಳ ಪ್ರವೇಶಕ್ಕೆ ಛಾಯ್ಸ್‌ಗಳನ್ನು ಆಯ್ಕೆ ಮಾಡಲು ಆಗಸ್ಟ್ 4ರಿಂದ ಅವಕಾಶ ನೀಡಲಾಗಿದೆ. ಛಾಯ್ಸ್-1 ಆಯ್ಕೆ ಮಾಡಿದವರು ಆಗಸ್ಟ್ 4ರಿಂದ 8ರವರೆಗೆ ಶುಲ್ಕ ಪಾವತಿಸಿ, ಆಗಸ್ಟ್ 9ರೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು.

ಯೋಗ ಮತ್ತು ನ್ಯಾಚುರೋಪತಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್, ವಾಸ್ತುಶಿಲ್ಪ ಕೋರ್ಸ್‌ಗೆ ಸೇರಬಯಸುವ ಅಭ್ಯರ್ಥಿಗಳು ಆಗಸ್ಟ್ 5ರಿಂದ ಛಾಯ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಛಾಯ್ಸ್-1 ಆಯ್ಕೆ ಮಾಡಿದವರು ಆಗಸ್ಟ್ 11ರೊಳಗೆ ಶುಲ್ಕ ಪಾವತಿಸಬೇಕು. ಆಗಸ್ಟ್ 12ರೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಅವರು ವಿವರಿಸಿದ್ದಾರೆ.

ಬಿಎಸ್‌ಸಿ ನರ್ಸಿಂಗ್ ಕೋರ್ಸ್‌ಗೆ ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ಆಗಸ್ಟ್ 6ರಿಂದ ಛಾಯ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಛಾಯ್ಸ್- 1 ಆಯ್ಕೆ ಮಾಡಿದವರು, ಆ.11ರೊಳಗೆ ಶುಲ್ಕ ಪಾವತಿಸಿ, ಆ.12ರೊಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು.

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಹೋಮಿಯೋಪತಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾಗಿರುವವರು ಆಗಸ್ಟ್ 7ರಿಂದ ಛಾಯ್ಸ್‌ಗಳನ್ನು ಆಯ್ಕೆ ಮಾಡಬಹುದು. ಅವರು ಆಗಸ್ಟ್ 11ರೊಳಗೆ ಶುಲ್ಕ ಪಾವತಿಸಿ, ಆಗಸ್ಟ್ 12ರೊಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು. ಎಂಸಿಸಿ ಸೀಟು ಹಂಚಿಕೆ ಫಲಿತಾಂಶವನ್ನು ಆ.6ರಂದು ಪ್ರಕಟಿಸಲಿದ್ದು, ಅದರ ನಂತರವೇ ರಾಜ್ಯದಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಲಿದೆ ಎಂದು ಅವರು ವಿವರಿಸಿದ್ದಾರೆ.

ಕೌನ್ಸೆಲಿಂಗ್ ನಡೆಸಲು ವೇಳಾಪಟ್ಟಿ ಪ್ರಕಾರ ಲಭ್ಯವಿರುವ ಸೀಮಿತ ಸಮಯವನ್ನು ಗಮನದಲ್ಲಿ ಇಟ್ಟುಕೊಂಡು, ಎಲ್ಲ ಕಾಲೇಜುಗಳು ಶನಿವಾರ ಮತ್ತು ಭಾನುವಾರ ಹಾಗೂ ಸಾರ್ವತ್ರಿಕ ರಜಾ ದಿನಗಳನ್ನು ಕೂಡ ಕೆಲಸದ ದಿನಗಳೆಂದು ಪರಿಗಣಿಸಲು ಪ್ರಸನ್ನ ಅವರು ಸೂಚಿಸಿದ್ದಾರೆ.

ಸೀಟು ಸಿಗದವರು ಛಾಯ್ಸ್ ಆಯ್ಕೆ ಮಾಡುವ ಅಗತ್ಯವಿಲ್ಲ. ಮುಂದಿನ ಸುತ್ತಿನಲ್ಲಿ ಸೀಟು ಸಿಕ್ಕರೆ ಆಗ ಛಾಯ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಕಾಲೇಜು ಹಂತದಲ್ಲೇ ದಾಖಲೆ ಪರಿಶೀಲನೆ

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಹಂಚಿಕೆಯಾದ ನಂತರ ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗಾಗಿ ಈ ಬಾರಿ ಕೆಇಎಗೆ ಬರುವ ಅಗತ್ಯ ಇಲ್ಲ. ಸಂಬಂಧಿಸಿದ ಕಾಲೇಜುಗಳಲ್ಲೇ ಪರಿಶೀಲನೆ ಮಾಡಿಸಿ, ಅಲ್ಲಿಯೇ ಹಸ್ತಾಂತರಿಸಬೇಕು ಎಂದು ಪ್ರಸನ್ನ ಅವರು ತಿಳಿಸಿದ್ದಾರೆ.

ಇದುವರೆಗೂ ಖಾಸಗಿ ಕಾಲೇಜುಗಳಲ್ಲಿ ಸೀಟು ಆಯ್ಕೆ ಮಾಡಿಕೊಂಡವರ ದಾಖಲೆಗಳನ್ನು ಕೆಇಎ ಸಂಗ್ರಹಿಸಿ ನಂತರ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಕಳುಹಿಸುತ್ತಿತ್ತು. ದಾಖಲೆಗಳ ಪರಿಶೀಲನೆ ಸಂಬಂಧ ಖಾಸಗಿ ಕಾಲೇಜುಗಳ ರಿಜಿಸ್ಟ್ರಾರ್‌ಗಳಿಗೆ ಇದೇ 5ರಂದು ಕೆಇಎನಲ್ಲಿ ಕಾರ್ಯಾಗಾರ ಏರ್ಪಡಿಸಲಾಗಿದೆ.

ಮತಗಳ್ಳತನ: ಪುರಾವೆ ಬಹಿರಂಗಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಲೋಕಸಭಾ ಚುನಾವಣೆಯಲ್ಲಿ, ಕರ್ನಾಟಕದ ಒಂದು ಕ್ಷೇತ್ರದಲ್ಲಿ 'ಮತಗಳ್ಳತನ' ನಡೆದಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಪುರಾವೆಗಳು ಇದ್ದರೆ ತಕ್ಷಣವೇ ಬಿಡುಗಡೆ ಮಾಡಲಿ ಎಂದು ರಾಜ್ಯ ಬಿಜೆಪಿ ನಾಯಕರು ಒತ್ತಾಯಿಸಿದ್ದಾರೆ.

ಸಂಸದ ಬಸವರಾಜ ಬೊಮ್ಮಾಯಿ ಅವರು ಪತ್ರಿಕಾ ಹೇಳಿಕೆ ನೀಡಿದ್ದರೆ, ರಾಜ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಹುಲ್ ಗಾಂಧಿ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.


'ರಾಜಕೀಯ ಉದ್ದೇಶಕ್ಕಾಗಿ, ಮತಗಳ್ಳತನದ ಹೆಸರಿನಲ್ಲಿ ಸಾಂವಿಧಾನಿಕ ಸಂಸ್ಥೆಯ ಮೇಲೆ ಆರೋಪ ಮಾಡುವುದು ಸರಿಯಲ್ಲ. ದಾಖಲೆ ಇದ್ದರೆ, ರಾಹುಲ್ ಗಾಂಧಿ ತಕ್ಷಣ ಬಿಡುಗಡೆ ಮಾಡಲಿ. ಆಟಂ ಬಾಂಬ್ ಇದೆ ಎಂದಿದ್ದಾರೆ. ತಕ್ಷಣವೇ ಅದನ್ನು ಹೊರಗಿಡಿ, ಇಲ್ಲದಿದ್ದಲ್ಲಿ ಅದು ಅಲ್ಲೇ ಸ್ಫೋಟಿಸಬಹುದು' ಎಂದು ಬೊಮ್ಮಾಯಿ ವ್ಯಂಗ್ಯ ಮಾಡಿದ್ದಾರೆ.

'ಸಾಂವಿಧಾನಿಕ ಸಂಸ್ಥೆಗಳ ಮೇಲೆ ಅನುಮಾನ ಬರುವಂತೆ ಕಾಂಗ್ರೆಸ್ ನಡೆದುಕೊಳ್ಳುತ್ತಿದೆ. ಆಗಿರುವ ಲೋಪ ಏನು ಎಂದು ಚುನಾವಣಾ ಆಯೋಗ ಕೇಳಿದರೂ, ಕಾಂಗ್ರೆಸ್ ದೂರು ನೀಡಿಲ್ಲ. ರಾಜ್ಯ ಸರ್ಕಾರದ ಅಧಿಕಾರಿಗಳೇ ರಾಜ್ಯದಲ್ಲಿ ಚುನಾವಣೆ ಮುಖ್ಯಸ್ಥರು. ಚುನಾವಣೆ ವಿಚಾರದಲ್ಲಿ ಅಧಿಕಾರಿಗಳ ಹಸ್ತಕ್ಷೇಪ ಇದ್ದರೆ ಸಾಕ್ಷ್ಯವನ್ನು ಒದಗಿಸಿ' ಎಂದು ಒತ್ತಾಯಿಸಿದ್ದಾರೆ.


'ಇವಿಎಂ ಮೇಲೆ ವಿರೋಧ ಪಕ್ಷಗಳು ಅನುಮಾನ ವ್ಯಕ್ತಪಡಿಸಿದ್ದವು. ಇವಿಎಂ ಅನ್ನು ಹ್ಯಾಕ್ ಮಾಡುವುದು ಹೇಗೆ ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ನೀಡಿ ಎಂದು ಚುನಾವಣಾ ಆಯೋಗ ಸವಾಲು ಹಾಕಿತ್ತು. ಆದರೆ ಪ್ರಾತ್ಯಕ್ಷಿಕೆ ನೀಡಲು ಕಾಂಗ್ರೆಸ್ ಬರಲೇ ಇಲ್ಲ' ಎಂದಿದ್ದಾರೆ.

ಛಲವಾದಿ ನಾರಾಯಣಸ್ವಾಮಿ ತಮ್ಮ ಪತ್ರದಲ್ಲಿ, 'ರಾಹುಲ್ ಜೀ ಅವರೆ, ನೀವು ಆಗಸ್ಟ್ 5ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಅಡ್ಡಿಯಿಲ್ಲ. ಆದರೆ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರಿಸಿ. ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ನಾವು ನಡೆಸುವ ಪ್ರತಿಭಟನೆಗೆ ಜತೆಯಾಗಿ' ಎಂದು ಆಹ್ವಾನಿಸಿದ್ದಾರೆ.

'ಬಿ.ಆರ್ ಅಂಬೇಡ್ಕರ್ ಅವರನ್ನು ಹಲವು ಚುನಾವಣೆಗಳಲ್ಲಿ ಸೋಲಿಸಲು ಕಾಂಗ್ರೆಸ್ ಪಕ್ಷ ಮತಗಳ್ಳತನ ಮಾಡಲಿಲ್ಲವೇ? ಅವರಿಗೆ ಕಾಂಗ್ರೆಸ್ ಪಕ್ಷವು ಪದೇಪದೇ ಮಾಡಿದ ಅವಮಾನಗಳ ಹಿಂದಿರುವ ನಿಜವಾದ ನಿಲುವೇನು? 1975ರಲ್ಲಿ ನಿಮ್ಮ ಅಜ್ಜಿ ಇಂದಿರಾ ಗಾಂಧಿಯವರು ನ್ಯಾಯಾಲಯದ ತೀರ್ಪಿನ ಪ್ರಕಾರ ಅನರ್ಹರಾಗಲು ಕಾರಣಗಳೇನು? ಅನರ್ಹರಾಗದಂತೆ ನಡೆಸಿದ ಕಾನೂನು ಬದಲಾವಣೆಗಳು ಹಾಗೂ ತುರ್ತು ಪರಿಸ್ಥಿತಿ ಘೋಷಣೆಯ ಹಿಂದಿನ ಕಾರಣಗಳೇನು' ಎಂದು ಪ್ರಶ್ನಿಸಿದ್ದಾರೆ.



ಪ್ರತಿ ಮತಗಟ್ಟೆಯಲ್ಲೂ ಎಲ್ಲ ಪಕ್ಷಗಳು ಏಜೆಂಟ್ ನೇಮಿಸಬಹುದು. ಮತದಾರರ ಹೆಸರು ಡಿಲೀಟ್ ಅಥವಾ ಸೇರ್ಪಡೆ ಆಗಿದ್ದರೆ ಆಗಲೇ ತಕರಾರು ದಾಖಲಿಸಬೇಕಿತ್ತು
ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ



ಪ್ರಧಾನಿ ಮೋದಿ ಅವರು ಮತಗಳ್ಳತನ ಮಾಡಿದ್ದರೆ, ನೀವು ವಿರೋಧ ಪಕ್ಷದ ನಾಯಕನಾಗಿ ಸದನದಲ್ಲಿ ಕುಳಿತುಕೊಳ್ಳುವ ಅವಕಾಶ ಸಿಗುತ್ತಿತ್ತೇ?
ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

ಪ್ರತ್ಯೇಕ ಆ್ಯಪ್ ರೂಪಿಸಿರುವ ಬಳ್ಳಾರಿ ಜಿಲ್ಲಾ ಪಂಚಾಯಿತಿ • ಕೇಂದ್ರ ತಂಡದ ಮೆಚ್ಚುಗೆ

ಮನರೇಗಾ ವ್ಯವಸ್ಥೆ ಕಣ್ಗಾವಲಿಗೆ ಆ್ಯಪ್

• ಹರಿಶಂಕರ್ ಆರ್.

ಬಳ್ಳಾರಿ: 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಜಾರಿಯಲ್ಲಿ ಪಾರದರ್ಶಕತೆ ಹೆಚ್ಚಿಸಿ, ದೋಷಗಳನ್ನು ಸರಿಪಡಿಸಲು ಬಳ್ಳಾರಿ ಜಿಲ್ಲಾ ಪಂಚಾಯಿತಿಯು ಪ್ರತ್ಯೇಕ ಆ್ಯಪ್ ರೂಪಿಸಿ ಗಮನ ಸೆಳೆದಿದೆ.

ಯೋಜನೆಯಡಿ ಕಾಮಗಾರಿಗಳಲ್ಲಿ ನುಸುಳುವ ಅಕ್ರಮಗಳನ್ನು ಮನಗಂಡ ಬಳ್ಳಾರಿ ಜಿಲ್ಲಾ ಪಂಚಾಯಿತಿಯು, ಮೇಲುಸ್ತುವಾರಿ ತಂಡದ ಕಾರ್ಯನಿರ್ವಹಣೆ ಮೇಲೆ ನಿಗಾ ವಹಿಸಲೆಂದೇ ಪ್ರತ್ಯೇಕ ಆ್ಯಪ್ ಪರಿಚಯಿಸಿತು. ಮನರೇಗಾ ಯೋಜನೆಯ ಅಧಿಕಾರಿ, ಸಿಬ್ಬಂದಿ ಈ ಆ್ಯಪ್ ಬಳಸುವುದನ್ನು ಕಳೆದ ಮೂರು ತಿಂಗಳಿಂದ ಕಡ್ಡಾಯಗೊಳಿಸಿದೆ.

ಪ್ರತಿ ಅಧಿಕಾರಿ, ಸಿಬ್ಬಂದಿ ಆಯಾ ದಿನ ಕೆಲಸಕ್ಕೆ ಹಾಜರಾಗುತ್ತಲೇ ಮೊದಲಿಗೆ ಆ್ಯಪ್‌ನಲ್ಲಿ ಹಾಜರಾತಿ ಹಾಕಬೇಕು, ಬಳಿಕ ಅಂದು ನಿರ್ವಹಿಸಿದ ಕೆಲಸಗಳನ್ನು ನಮೂದು ಮಾಡಬೇಕು. ಕ್ಷೇತ್ರ ಪರಿಶೀಲನೆ, ಕಚೇರಿ ಕೆಲಸ, ಹೀಗೆ ಯಾವ ಕೆಲಸ ಮಾಡಲಾಗಿದೆ ಎಂಬುದನ್ನು ಜಿಪಿಎಸ್ ಫೋಟೊ ಸಹಿತ ಮೊಬೈಲ್ ಆ್ಯಪ್‌ಗೆ ಅಪ್ಲೋಡ್ ಮಾಡಬೇಕು. ಗ್ಯಾಲರಿಯಿಂದ ಹಳೆಯ ಫೋಟೊ ಅಪ್ಲೋಡ್‌ಗೆ ಅವಕಾಶವನ್ನೇ ಕೊಡಲಾಗಿಲ್ಲ. ಆ ಕ್ಷಣವೇ ಜಿಪಿಎಸ್ ಫೋಟೊ ತೆಗೆದು ಅಪ್ಲೋಡ್ ಮಾಡಬೇಕಾದ ವ್ಯವಸ್ಥೆಯನ್ನು ಆ್ಯಪ್‌ನಲ್ಲಿ ರೂಪಿಸಲಾಗಿದೆ.

ದಕ್ಷತೆ ಆಧರಿಸಿ ವೇತನ: ಪ್ರತಿಯೊಬ್ಬರ ನಿತ್ಯದ ದಿನಚರಿ ಆ್ಯಪ್‌ನಲ್ಲಿ ದಾಖಲಾಗಿರುತ್ತದೆ. ಉಸ್ತುವಾರಿಗೆ ನಿಯೋಜಿತವಾದ ಗುತ್ತಿಗೆ ಆಧಾರದ ನೇಮಕವಾಗಿರುವ ಅಧಿಕಾರಿ, ಸಿಬ್ಬಂದಿ ಮಾಸಿಕ ಡೈರಿ ಆಧರಿಸಿ, ಕಾರ್ಯಕ್ಷಮತೆ ಆಧರಿಸಿ ವೇತನ ಪಾವತಿ ಮಾಡುವ ವ್ಯವಸ್ಥೆಯನ್ನು ಬಳ್ಳಾರಿ ಜಿಲ್ಲಾ ಪಂಚಾಯಿತಿ ಅಳವಡಿಸಿಕೊಂಡಿದೆ. ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ಮನರೇಗಾ ಮೇಲುಸ್ತುವಾರಿ ಸಮಿತಿಯು ಕ್ರಿಯಾಶೀಲವಾಗಿ ಕೆಲಸ ಮಾಡಲಾರಂಭಿಸಿದೆ.


ಕಡಿಮೆ ಬೆಲೆಯ ಆ್ಯಪ್: ಜಿ.ಪಂ ಹಿಂದಿನ ಸಿಇಒ ರಾಹುಲ್ ಶರಣಪ್ಪ ಸಂಕನೂರ ಇಂತಹ ಆ್ಯಪ್ ರೂಪಿಸಲು ತಂಡವೊಂದಕ್ಕೆ ಕೆಲಸ ವಹಿಸಿದ್ದರು. ಅವರ ವರ್ಗಾವಣೆ ಬಳಿಕ ಸಿಇಒ ಆಗಿ ಬಂದ ಮೊಹಮದ್ ಹ್ಯಾರಿಸ್ ಸುಮೇರ್ ಆ್ಯಪ್‌ಗೆ ಅಂತಿಮ ರೂಪ ನೀಡಿದ್ದಾರೆ. ಕೇವಲ ₹2 ಲಕ್ಷದಲ್ಲಿ ಆ್ಯಪ್ ಅಭಿವೃದ್ಧಿಗೊಂಡಿದೆ.

ಈ ಆ್ಯಪ್ ಅನ್ನು ಆಡಳಿತಾತ್ಮಕ ವೆಚ್ಚದಲ್ಲಿ ರೂಪಿಸಲು ತಿಳಿಸಲಾಗಿತ್ತು. ಆದರೆ, ಮನರೇಗಾ ಅಡಿ ಕೇಂದ್ರ ಯಾವುದೇ ರಾಜ್ಯಕ್ಕೂ ಆಡಳಿತಾತ್ಮಕ ಅನುದಾನ ಬಿಡುಗಡೆ ಮಾಡಿಲ್ಲ. ಹೀಗಾಗಿ ಆ್ಯಪ್ ರೂಪಿಸಿದವರಿಗೆ ಹಣ ಪಾವತಿಸಲು ಜಿಲ್ಲಾ ಪಂಚಾಯಿತಿಗೆ ಸಾಧ್ಯವಾಗಿಲ್ಲ. ಅನ್ಯ ಅನುದಾನಗಳಲ್ಲಿ ಅವರಿಗೆ ಹಣ ಪಾವತಿಸಲು ಜಿಲ್ಲಾ ಪಂಚಾಯಿತಿ ಮಾರ್ಗ ಹುಡುಕುತ್ತಿದೆ.

ಜಿ.ಪಂ.ಗೆ ಈಚೆಗೆ ಭೇಟಿ ನೀಡಿದ್ದ ಕೇಂದ್ರದ ಮನರೇಗಾ ತಂಡ, ಆ್ಯಪ್‌ನ ಕಾರ್ಯ ನಿರ್ವಹಣೆ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿ ಆ್ಯಪ್ ಕುರಿತು ಮಾಹಿತಿ ಪಡೆದಿದೆ ಎನ್ನಲಾಗಿದೆ.

ಮುಖ್ಯಾಂಶಗಳು

- ₹2 ಲಕ್ಷ ವೆಚ್ಚದಲ್ಲಿ ಆ್ಯಪ್ ಅಭಿವೃದ್ಧಿ
- ನಿತ್ಯದ ದಿನಚರಿ ಆ್ಯಪ್‌ನಲ್ಲಿ ದಾಖಲು



'ಮನರೇಗಾ' ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿರುವ ಅಧಿಕಾರಿಯೊಬ್ಬರು ಆ್ಯಪ್‌ಗೆ ಅಪ್ಲೋಡ್ ಮಾಡಿರುವ ಜಿಪಿಎಸ್ ಸಹಿತ ಚಿತ್ರ



ಆ್ಯಪ್ ಬಳಕೆ ಆರಂಭವಾದ ಬಳಿಕ ಗುತ್ತಿಗೆ ಆಧಾರಿತ ಅಧಿಕಾರಿ, ಸಿಬ್ಬಂದಿಯಲ್ಲಿ ನಿಗಾ ವ್ಯವಸ್ಥೆಯಿದೆ ಎಂಬ ಭಾವನೆ ಮೂಡಿದೆ. ಅಚ್ಚುಕಟ್ಟಾಗಿ ಕೆಲಸ ಮಾಡುವ ಅನಿವಾರ್ಯ ಇದೆ. ಕಾರ್ಯಕ್ಷಮತೆ ಹೆಚ್ಚಲು ಕಾರಣ.
ಮೊಹಮದ್ ಹ್ಯಾರಿಸ್ ಸುಮೇರ್, ಸಿಇಒ, ಜಿಲ್ಲಾ ಪಂಚಾಯಿತಿ, ಬಳ್ಳಾರಿ

ಚಿರತೆ ಸಾವು ತಂಡ ರಚನೆ

ಚಿಕ್ಕಮಗಳೂರು: ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿ ಬಳಿ ಜುಲೈ 31ರಂದು ನಡೆದಿದ್ದ ಚಿರತೆ ಸಾವಿನ ಕುರಿತ ತನಿಖೆಗೆ ಶಿವಮೊಗ್ಗ ಸಿಸಿಎಫ್ ನೇತೃತ್ವದಲ್ಲಿ ಇಲಾಖೆ ತಂಡ ರಚಿಸಿದೆ.

'ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ವಲಯದ ದೇವಿಹಳ್ಳಿಯಲ್ಲಿ ಜುಲೈ 30ರಂದು ಸೆರೆ ಹಿಡಿದ ಚಿರತೆಯನ್ನು ಅದೇ ರಾತ್ರಿ ಎಮ್ಮೆದೊಡ್ಡಿ ಬಳಿ ಬಿಡಲಾಗಿದೆ. ಈ ವೇಳೆ ಅರಣ್ಯ ಇಲಾಖೆ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಪಾಲಿಸಿಲ್ಲ' ಎಂಬ ಅನುಮಾನ ವ್ಯಕ್ತವಾಗಿತ್ತು.

ಎಮ್ಮೆದೊಡ್ಡಿ ಬಳಿ ಜನರ ಮೇಲೆ ದಾಳಿ ಮಾಡಿದ್ದ ಚಿರತೆ ಸತ್ತಿದೆಯೇ, ಜನ ಕಲ್ಲು ತೂರಿದ ಚಿರತೆಯೇ ಎಂಬ ಬಗ್ಗೆ ತನಿಖೆ ನಡೆಸಿ ಏಳು ದಿನಗಳಲ್ಲಿ ವರದಿ ಸಲ್ಲಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಆದೇಶದಲ್ಲಿ ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	122.53	12,437	5,623
ಹಾರಂಗಿ	2,859	2,855.61	3,994	3,500
ಕಬಿನಿ	2,284.00	2,282.25	8,934	5,050
ಹೇಮಾವತಿ	2,922	2,921.40	5,252	3,850
ಲಿಂಗನಮಕ್ಕಿ	1,819	1,811.50	12,368	7,546
ಸೂಪಾ (ಮೀ)	564	551.45	8,010.52	5,200.46
ಮಾಣಿ	595	590.62	2,066	697
ತುಂಗಭದ್ರಾ	1,633	1,626.06	43,736	23,399
ಮಲಪ್ರಭಾ	2,079.5	2,075.15	4,725	1,844
ಘಟಪ್ರಭಾ	2175	2,171.08	7,558	4,468
ಭದ್ರಾ *	186	180.9	8,579	961
ಆಲಮಟ್ಟಿ (ಮೀ)	519.6	518.59	1,00,143	20,000
ನಾರಾಯಣಪುರ (ಮೀ)	492.25	491.98	42,000	16,970

* ನೆಲಮಟ್ಟದಿಂದ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಾರತೀಯರ ಸೆಳೆಯುತ್ತಿರುವ ಲಂಕಾ



ಪ್ರಸಕ್ತ ವರ್ಷದ ಜುಲೈ 30ರವರೆಗೆ 2 ಲಕ್ಷಕ್ಕೂ ಅಧಿಕ ಪ್ರವಾಸಿಗರು ಶ್ರೀಲಂಕಾಕ್ಕೆ ಭೇಟಿ ನೀಡಿದ್ದು, ಅವರಲ್ಲಿ ಭಾರತೀಯರ ಸಂಖ್ಯೆ ಅಧಿಕವಾಗಿದೆ. ಭಾರತದ 37,128 ಪ್ರವಾಸಿಗರು ಶ್ರೀಲಂಕಾಗೆ ಭೇಟಿ ನೀಡಿದ್ದರು

ರೂಟ್ ಶತಕ



ಇಂಗ್ಲೆಂಡ್ ತಂಡದ ಬ್ಯಾಟರ್ ಜೋ ರೂಟ್ ಅವರು ಭಾರತ ಎದುರಿನ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಶತಕ ದಾಖಲಿಸಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರ 39ನೇ ಶತಕವಾಗಿದೆ

‘ವೀರಶೈವ, ಲಿಂಗಾಯತ ಒಂದೇ’ 5 | ಸಹಕಾರ ಸಂಘಗಳಿಂದ ಟ್ಯಾಕ್ಸಿ ಸೇವೆ 8

‘ದೇವದಾಸಿ ಮಕ್ಕಳಿಗೆ ಪಿತೃತ್ವ ಹಕ್ಕು’

'ಕರ್ನಾಟಕ ದೇವದಾಸಿ ಪದ್ಧತಿ ತಡೆ ಮಸೂದೆ– 2025' ಸಿದ್ಧ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡುವ, ದೇವದಾಸಿಗೆ ಜನಿಸಿದ ಮಗು ತನ್ನ ತಂದೆಯನ್ನು ಗುರುತಿಸಲು (ಪಿತೃತ್ವ) ಹಕ್ಕು ಮತ್ತು ಸಮಗ್ರ ಪುನರ್ವಸತಿ ಕಲ್ಪಿಸಲು ಅವಕಾಶ ನೀಡುವ ‘ಕರ್ನಾಟಕ ದೇವದಾಸಿ ಪದ್ಧತಿ (ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ–2025’ ಅನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿದೆ.



ಆ ಮೂಲಕ, ದೇವದಾಸಿ ಮಹಿಳೆಯರನ್ನು ಎಲ್ಲ ರೀತಿಯ ಶೋಷಣೆಗಳಿಂದ ಹಾಗೂ ಅವರ ಮಕ್ಕಳನ್ನು ಸಾಮಾಜಿಕ ನಿಷೇಧದಿಂದ ಮುಕ್ತಗೊಳಿಸುವ ದಿಸೆಯಲ್ಲಿ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.

ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ ಸಿದ್ಧಪಡಿಸಿರುವ ಕರಡು ಮಸೂದೆಗೆ ಸಂಬಂಧಿಸಿದಂತೆ 20 ಇಲಾಖೆಗಳ ಜೊತೆ ಸಮಾಲೋಚನೆ ನಡೆಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಈ ಮಸೂದೆಗೆ ಅಂತಿಮ ರೂಪ ನೀಡಿದೆ. ಕಾನೂನು ಮತ್ತು ಸಂಸದೀಯ ಇಲಾಖೆಯು ಈ ಮಸೂದೆಯನ್ನು ಪರಿಶೀಲನೆ ನಡೆಸಿದ್ದು, ಶೀಘ್ರದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಮಂಡನೆಯಾಗಲಿದೆ.

ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲು ಚಿಂತನೆ ನಡೆದಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಹೊಸ ಮಸೂದೆಯ ಕಾರಣಕ್ಕೆ ‘ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ– 1982’ ಮತ್ತು ‘ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಕಾಯ್ದೆ, 2009’ ರದ್ದುಗೊಳ್ಳಲಿವೆ.

ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ಶಿವಮೊಗ್ಗ, ಯಾದಗಿರಿ, ವಿಜಯನಗರ ಈ ಜಿಲ್ಲೆಗಳಲ್ಲಿ ದೇವದಾಸಿಯರಿದ್ದಾರೆ.

8

ಸಮರ್ಪಣೆ ಪ್ರಕರಣಗಳು

33 ಈವರೆಗೆ ದಾಖಲಾಗಿರುವ ಪ್ರಕರಣ	23 ಎಫ್‌ಐಆರ್ ಆಗಿರುವ ಪ್ರಕರಣ	4 ಶಿಕ್ಷೆಯಾಗಿರುವ ಪ್ರಕರಣ	11 ಖುಲಾಸೆಯಾದ ಪ್ರಕರಣ	7 ವಿಚಾರಣಾ ಹಂತದಲ್ಲಿರುವ ಪ್ರಕರಣ	7 ಪೊಲೀಸ್ ಸಂಧಾನದ ಮೂಲಕ ಮದುವೆಯಾದ ಪ್ರಕರಣ


ಪಿತೃತ್ವ ಹಕ್ಕು, ಜೀವನಾಂಶ, ಪುನರ್ವಸತಿ

ದೇವದಾಸಿಗೆ ಜನಿಸಿದ ಯಾವುದೇ ಮಗುವು ತಂದೆಯ ಗುರುತು ಖಚಿತಪಡಿಸಿಕೊಳ್ಳುವ ಹಕ್ಕನ್ನು ಈ ಮಸೂದೆ ಕಲ್ಪಿಸಿದೆ. ಅಂತಹ ಮಗುವು ತಂದೆಯ ಬಂಧದ ಮಾನ್ಯತೆಗಾಗಿ ತಾಲ್ಲೂಕು ಸಮಿತಿಗೆ ಅರ್ಜಿ ಸಲ್ಲಿಸಬಹುದು.

ಜೈವಿಕ ತಂದೆ ಒಪ್ಪಿಕೊಂಡರೆ ಆ ಬಗ್ಗೆ ಲಿಖಿತವಾಗಿ ಜಿಲ್ಲಾ ಸಮಿತಿಯ ಮುಂದೆ ಅರ್ಜಿ ಸಲ್ಲಿಸಬಹುದು. ಅಲ್ಲಿ ತಂದೆ ಮತ್ತೊಮ್ಮೆ ಬಹಿರಂಗವಾಗಿ ಮತ್ತು ಲಿಖಿತವಾಗಿ ಅಂತಹ ಸಂಬಂಧವನ್ನು ಒಪ್ಪಿಕೊಳ್ಳಬೇಕು. ತಂದೆಯು ಒಪ್ಪಿಕೊಳ್ಳಲು ನಿರಾಕರಿಸಿದರೆ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಮಗುವು ತನ್ನ ಜೈವಿಕ ತಂದೆ ಎಂದು ಭಾವಿಸುವ ವ್ಯಕ್ತಿಯ ಪಿತೃತ್ವವನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯವು ಡಿಎನ್‌ಎ ಪರೀಕ್ಷೆ ನಡೆಸಬಹುದು. ಅಂತಹ ಮಗುವಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಉಚಿತ ಕಾನೂನು ನೆರವು ಒದಗಿಸಬೇಕು.

8

ರಾಜ್ಯದಲ್ಲಿ ದೇವದಾಸಿಯರು



ಶಿಕ್ಷೆ ಮತ್ತು ದಂಡ

ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ಬಳಿಕ ದೇವದಾಸಿಯಾಗಿ ಮಹಿಳೆಯನ್ನು ಅರ್ಪಿಸುವ ಯಾವುದೇ ಸಮಾರಂಭ ಅಥವಾ ಕಾರ್ಯವನ್ನು ತನ್ನ ನಿಯಂತ್ರಣದಲ್ಲಿರುವ ಆವರಣದಲ್ಲಿ ನಿರ್ವಹಿಸಲು, ಅನುಮತಿಸಲು, ಭಾಗವಹಿಸಲು ಅಥವಾ ಪ್ರಚೋದಿಸಲು ಯಾರು ಅನುಮತಿ ನೀಡುತ್ತಾರೊ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಸಮಾರಂಭ ಅಥವಾ ಕೃತ್ಯವನ್ನು ಎಸಗುತ್ತಾರೊ ಅದನ್ನು ಅಪರಾಧವೆಂದು ಪರಿಗಣಿಸಿ ಎರಡು ವರ್ಷದಿಂದ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ₹1 ಲಕ್ಷಕ್ಕೆ ಕಡಿಮೆ ಇಲ್ಲದಂತೆ ದಂಡ ವಿಧಿಸಲು ಅವಕಾಶ ಆಗಲಿದೆ.

ದೇವದಾಸಿ ಪದ್ಧತಿಗೆ ಉತ್ತೇಜನ ಅಥವಾ ಪ್ರಚಾರ ಮಾಡಿದರೆ ಒಂದು ವರ್ಷದಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ/₹50 ಸಾವಿರಕ್ಕೆ ಕಡಿಮೆ ಇಲ್ಲದಂತೆ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು. ಶಿಕ್ಷೆಗೆ ಒಳಗಾಗಿರುವವರು ಅಪರಾಧ ಪುನರಾವರ್ತಿಸಿದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹2 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ ಶಿಕ್ಷೆಗೆ ಗುರಿಯಾಗಲಿದ್ದಾರೆ.

ವಿಪಕ್ಷಗಳ ಬೇಡಿಕೆ ನಿರ್ಲಕ್ಷ್ಯ ಸಾಧ್ಯತೆ

ಎಸ್‌ಐಆರ್: ಹಲವು ಮಸೂದೆಗಳ ಮಂಡನೆಗೆ ಕೇಂದ್ರ ಸಜ್ಜು

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆದ ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ಗೆ (ಎಸ್‌ಐಆರ್) ಆಗ್ರಹಿಸಿ ವಿಪಕ್ಷಗಳು ನಡೆಸುತ್ತಿರುವ ಪ್ರತಿಭಟನೆ ಯನ್ನು ನಿರ್ಲಕ್ಷಿಸಿ, ಕೇಂದ್ರ ಸರ್ಕಾರ ತನ್ನ ಶಾಸನಾತ್ಮಕ ಕಾರ್ಯಸೂಚಿ ಯೊಂದಿಗೆ ಸಂಸತ್ ಅಧಿವೇಶನ ಮುನ್ನಡೆಸುವ ಸಾಧ್ಯತೆ ಇದೆ.

ಸಂಸತ್‌ನ ಮುಂಗಾರು ಅಧಿವೇಶನ ಸೋಮವಾರ ಮತ್ತೆ ಆರಂಭವಾಗಲಿದ್ದು, ಹಲವಾರು ಮಹತ್ವದ ಮಸೂದೆಗಳ ಜೊತೆಗೆ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ವಿಸ್ತರಿಸುವ ನಿರ್ಣಯ ಕುರಿತು ಚರ್ಚೆ ನಡೆಸುವುದು ಪಟ್ಟಿಯಲ್ಲಿದೆ.

ಮಣಿಪುರದಲ್ಲಿ ಜಾರಿಯಲ್ಲಿರುವ ರಾಷ್ಟ್ರಪತಿ ಆಡಳಿತ ಆಗಸ್ಟ್ 12ಕ್ಕೆ ಕೊನೆಗೊಳ್ಳಲಿದೆ. ಆಗಸ್ಟ್ 13ರಿಂದ ಅನ್ವಯವಾಗುವಂತೆ ರಾಷ್ಟ್ರಪತಿ ಆಡಳಿತ ವಿಸ್ತರಣೆ ಮಾಡುವ ಕುರಿತ ನಿರ್ಣಯವನ್ನು ಕಳೆದ ವಾರ ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ. ಈ ಕುರಿತು ಚರ್ಚೆ ನಡೆಯಲಿದೆ.

9

ಎರಡು ಕ್ರೀಡಾ ಮಸೂದೆ ಪಟ್ಟಿಯಲ್ಲಿ



ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದ ಎರಡು ಮಸೂದೆಗಳನ್ನು ಸೋಮವಾರ ಮಂಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ರಾಷ್ಟ್ರೀಯ ಕ್ರೀಡೆಗಳ ನಿಯಂತ್ರಣ ಮಸೂದೆ ಹಾಗೂ ರಾಷ್ಟ್ರೀಯ ಉದ್ದೀಪನ ಮದ್ದು ನಿಷೇಧ ತಿದ್ದುಪಡಿ ಮಸೂದೆಗಳನ್ನು ಸೋಮವಾರ ಮಂಡಿಸಲಾಗುತ್ತದೆ.

ಕ್ರೀಡಾ ಸಂಸ್ಥೆಗಳ ಕಾರ್ಯವೈಖರಿಯಲ್ಲಿ ಹೆಚ್ಚು ಪಾರದರ್ಶಕತೆ ತರುವ ಉದ್ದೇಶದ ಅವಕಾಶಗಳನ್ನು ರಾಷ್ಟ್ರೀಯ ಕ್ರೀಡೆಗಳ ನಿಯಂತ್ರಣ ಮಸೂದೆ ಒಳಗೊಂಡಿದೆ.

ಒಳ ಮೀಸಲಾತಿ: ಸಿ.ಎಂ.ಗೆ ಇಂದು ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಶಿಫಾರಸು ಮಾಡಲು ರಾಜ್ಯ ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗವು ಶಿಫಾರಸುಗಳನ್ನು ಒಳಗೊಂಡ ತನ್ನ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ (ಆಗಸ್ಟ್ 4) ಸಲ್ಲಿಸಲಿದೆ.

‘ಜುಲೈ 30ರಂದೇ ವರದಿ ಸಿದ್ಧವಾಗಿತ್ತು. ಮುಖ್ಯಮಂತ್ರಿಯವರ ಸಮಯಾವಕಾಶ ಕೇಳಿದ್ದರೂ ಕಾರ್ಯ ಒತ್ತಡ ಕಾರಣಕ್ಕೆ ಅವರು ಲಭ್ಯರಾಗಲಿಲ್ಲ. ಹೀಗಾಗಿ, ಸೋಮವಾರ ಬೆಳಿಗ್ಗೆ 11 ಗಂಟೆಗೆ ವರದಿ ಸಲ್ಲಿಸಲು ಸಮಯ ನೀಡಿದ್ದಾರೆ’ ಎಂದು ನಾಗಮೋಹನ್‌ದಾಸ್ ತಿಳಿಸಿದರು.



ನಾಗಮೋಹನ್ ದಾಸ್

ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಈ ಹಿಂದೆ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆದರೆ, ಆ ವರದಿಯನ್ನು ಬದಿಗಿಟ್ಟು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಪ್ರತ್ಯೇಕ ವರದಿ ನೀಡಿತ್ತು. ಆ ಸಮಿತಿಯು ಪರಿಶಿಷ್ಟ ಜಾತಿಯನ್ನು ಪ್ರತ್ಯೇಕ ಗುಂಪುಗಳನ್ನಾಗಿ ವಿಂಗಡಿಸಿ ಮೀಸಲಾತಿ ಹಂಚಿಕೆ ಮಾಡಿತ್ತು.


ಈ ಮಧ್ಯೆ, ವಿಧಾನಸಭಾ ಚುನಾವಣೆ ಎದುರಾಯಿತು. ಚುನಾವಣೆಯಲ್ಲಿ ಬಿಜೆಪಿ ಪರಾಭವಗೊಂಡಿತು. ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಒಳ ಮೀಸಲಾತಿಗಾಗಿ ನಾಗಮೋಹನ್‌ದಾಸ್ ಆಯೋಗದ ಮೂಲಕ ಹೊಸದಾಗಿ ಸಮೀಕ್ಷೆ ನಡೆಸಿದೆ. ಈ ಆಯೋಗವು ಜಾತಿಗಳನ್ನು ಯಾವ ರೀತಿ ಗುಂಪುಗಳಾಗಿ ವಿಂಗಡಿಸಿ, ಮೀಸಲಾತಿ ಹಂಚಿಕೆ ಮಾಡಿದೆ ಎಂಬ ಕುತೂಹಲ ಮೂಡಿದೆ.

5

ತೇಜಸ್ವಿಗೆ ಚುನಾವಣಾ ಆಯೋಗ ನೋಟಿಸ್

ಪ್ರಜಾವಾಣಿ ವಾರ್ತೆ

ಪಟ್ನಾ: ಎರಡು ಮತದಾರರ ಗುರುತಿನ ಚೀಟಿ (ಎಪಿಕ್) ಹೊಂದಿರುವುದಕ್ಕಾಗಿ ಆರ್‌ಜೆಡಿ ನಾಯಕ ಹಾಗೂ ಬಿಹಾರ ವಿಧಾನಸಭಾ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಅವರಿಗೆ ಚುನಾವಣಾ ಆಯೋಗ ಭಾನುವಾರ ನೋಟಿಸ್ ನೀಡಿದೆ.



ತೇಜಸ್ವಿ ಯಾದವ್

‘ಎರಡು ಎಪಿಕ್ ಹೊಂದುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇದು ಅಪರಾಧ’ ಎಂದು ಬಿಜೆಪಿ ಖಂಡಿಸಿತ್ತು. ಇದರ ಬೆನ್ನಲ್ಲೇ, ಆಯೋಗವು ನೋಟಿಸ್ ಜಾರಿ ಮಾಡಿದೆ. ತೇಜಸ್ವಿ ಅವರು ದಿಘಾ ವಿಧಾನಸಭಾ ಕ್ಷೇತ್ರದಲ್ಲಿ ಮತ ಚಲಾಯಿಸುತ್ತಾರೆ.

‘ಆಗಸ್ಟ್ 2ರಂದು ಸುದ್ದಿಗೋಷ್ಠಿ ನಡೆಸಿದ್ದ ನೀವು, ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಇಲ್ಲ ಎಂದು ಹೇಳಿದ್ದಿರಿ. ಎಪಿಕ್ ಸಂಖ್ಯೆಯನ್ನೂ (ಆರ್‌ಎಬಿ2916120) ಉಲ್ಲೇಖಿಸಿದ್ದಿರಿ. ತನಿಖೆ ನಂತರ, ಈ ಸಂಖ್ಯೆಯ ಎಪಿಕ್ ಅನ್ನು ಆಯೋಗ ನೀಡಿಯೇ ಇಲ್ಲ ಎಂಬುದು ತಿಳಿದುಬಂದಿತು’ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

9

ಚಿನಕುರುಳಿ ಪ್ರಕಾಶ್ ಶೆಟ್ಟಿ



ಪ್ರಜ್ವಲ್ ರೇವಣ್ಣ ಕೈದಿ ನಂ.15528

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ವೆಸಗಿದ ಪ್ರಕರಣದಲ್ಲಿ ಆಜೀವ ಜೈಲು ಶಿಕ್ಷೆಗೆ ಗುರಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೈಲಿನ ಅಧಿಕಾರಿಗಳು ಕೈದಿ ಸಂಖ್ಯೆ 15528 ನೀಡಿದ್ದಾರೆ.



ಪ್ರಜ್ವಲ್ ರೇವಣ್ಣ

ಜೈಲಿನ ನಿಯಮಾನುಸಾರ ಬಿಳಿ ಬಟ್ಟೆ ಧರಿಸಿರುವ ಪ್ರಜ್ವಲ್‌ನನ್ನು ವಿಶೇಷ ಭದ್ರತಾ ಕೊಠಡಿಯಿಂದ ಸಜಾಬಂಧಿ ಬ್ಯಾರಕ್‌ಗೆ ಸ್ಥಳಾಂತರ ಮಾಡಲಾಗಿದೆ.

ಪ್ರಜ್ವಲ್ ರೇವಣ್ಣಗೆ ಆಗಸ್ಟ್ 2ರಿಂದಲೇ ಶಿಕ್ಷೆ ಆರಂಭವಾಗಿದೆ. ಜೈಲು ನಿಯಮಾವಳಿ ಅನುಸಾರ ಕೈದಿಗಳು ಕಡ್ಡಾಯ 8 ಗಂಟೆ ಕೆಲಸ ಮಾಡಬೇಕು. ಪ್ರಮುಖವಾಗಿ ಬೇಕರಿ, ಗಾರ್ಡನ್, ಹೈನುಗಾರಿಕೆ, ತರಕಾರಿ ಬೆಳೆಯುವುದು, ಮರಗೆಲಸ, ಕರಕುಶಲ ವಸ್ತುಗಳ ಕೆತ್ತನೆ ಸೇರಿ ಯಾವುದಾದರೂ ಒಂದು ಕೆಲಸ ಮಾಡಬಹುದು. ಆಯ್ಕೆ ಮಾಡಿಕೊಂಡ ಕೆಲಸಕ್ಕೆ ಸಂಬಳ ನೀಡಲಾಗುತ್ತದೆ.

ರಾಜ್ಯದ ಜೈಲುಗಳಲ್ಲಿ ಕೌಶಲರಹಿತ ಕೈದಿಗಳಿಗೆ ದಿನಕ್ಕೆ ಒಟ್ಟು ₹524 ಸಂಬಳ ನಿಗದಿ ಮಾಡಲಾಗಿದೆ. ಒಂದು ವರ್ಷದ ನಂತರ, ಅವರು ನುರಿತ ಕೆಲಸಗಾರರಾಗುತ್ತಾರೆ. ಆ ಬಳಿಕ ದಿನಕ್ಕೆ ₹548 ಸಂಬಳ ನೀಡಲಾಗುತ್ತದೆ.

5

ಮುಖ್ಯಾಂಶಗಳು

- ಪ್ರಜ್ವಲ್‌ಗೆ ದಿನಕ್ಕೆ 8 ತಾಸು ಕೆಲಸ ಕಡ್ಡಾಯ
- ಕೆಲಸಕ್ಕೆ ಮೊದಲ ವರ್ಷ ದಿನಕ್ಕೆ ₹524 ಕೂಲಿ
- ಎರಡನೇ ವರ್ಷದಲ್ಲಿ ₹548 ಕೂಲಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಭಾರಿ ಮಳೆಯಾಗುವ ಸಾಧ್ಯತೆಯಿದೆ

ಮೆಟ್ರೊ ಹಳದಿ ಮಾರ್ಗ: 10ಕ್ಕೆ ಶುರು

ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

• ಕಿತ್ತಳೆ ಮಾರ್ಗಕ್ಕೂ ಅಂದು ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಬೆಂಗಳೂರನ್ನು (ಎಲೆಕ್ಟ್ರಾನಿಕ್ ಸಿಟಿ) ನಗರದ ಕೇಂದ್ರಕ್ಕೆ ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಇದೇ 10ರಿಂದ ರೈಲು ಸಂಚಾರ ಆರಂಭವಾಗಲಿದೆ. ಆರ್.ವಿ. ರಸ್ತೆ–ಬೊಮ್ಮಸಂದ್ರ ನಡುವಿನ ಈ ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್, ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಸಂಸದರಾದ ಪಿ.ಸಿ. ಮೋಹನ್ ಮತ್ತು ತೇಜಸ್ವಿ ಸೂರ್ಯ ತಮ್ಮ 'ಎಕ್ಸ್' ಖಾತೆಯಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.


ಆಗಸ್ಟ್ 10ರಂದು ನಮ್ಮ ಮೆಟ್ರೊ ಹಳದಿ ಮಾರ್ಗವನ್ನು ಉದ್ಘಾಟಿಸಲು ಮತ್ತು ಮೂರನೇ ಹಂತದ ಮೆಟ್ರೊ ಮಾರ್ಗಕ್ಕೆ (ಕಿತ್ತಳೆ ಮಾರ್ಗ) ಶಂಕುಸ್ಥಾಪನೆ ನೆರವೇರಿಸಲು ಮೋದಿ ಒಪ್ಪಿಕೊಂಡಿದ್ದಾರೆ ಎಂದು ಸಚಿವ ಮನೋಹರ್ ಲಾಲ್ ಖಟ್ಟರ್ ತಿಳಿಸಿದ್ದಾರೆ.

ಹಳದಿ ಮಾರ್ಗ: ರಾಷ್ಟ್ರೀಯ ವಿದ್ಯಾಲಯ–ಬೊಮ್ಮಸಂದ್ರ ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗದ ಕಾಮಗಾರಿ 2018ರಲ್ಲಿ ಆರಂಭವಾಗಿತ್ತು. 2021ರಲ್ಲಿ ಕೊನೆಗೊಳ್ಳಬೇಕಿತ್ತು. ಕೋವಿಡ್ ಇನ್ನಿತರ ಕಾರಣದಿಂದ ತಡವಾಗಿತ್ತು. 2023ಕ್ಕೆ ಆರಂಭಿಸಲು ಗುರಿ ಪುನರ್‌ನಿಗದಿಯಾಗಿತ್ತು. ಆದರೆ, ಕಾಮಗಾರಿ ಮತ್ತೊಂದು ವರ್ಷ ತಡವಾಗಿ 2024ರ ಜೂನ್‌ಗೆ ಪೂರ್ಣವಾಗಿತ್ತು. ಈ ಮಾರ್ಗಕ್ಕೆ ಬೇಕಾದ ರೈಲಿನ ಕೋಚ್‌ಗಳು ಸಕಾಲದಲ್ಲಿ ಪೂರೈಕೆಯಾಗದ ಕಾರಣ ಸಂಚಾರ ಆರಂಭ ಆಗಿರಲಿಲ್ಲ.

ಚಾಲಕರಹಿತ ಎಂಜಿನ್ ಹೊಂದಿರುವ ಪ್ರೊಟೊಟೈಪ್ (ಮೂಲ ಮಾದರಿ) ಮೊದಲ ರೈಲು 2024ರ ಏಪ್ರಿಲ್‌ನಲ್ಲಿ ಪೂರೈಕೆಯಾಗಿತ್ತು. 2025ರ ಜನವರಿಯಲ್ಲಿ ಎರಡನೇ ರೈಲು, ಮೇ ತಿಂಗಳಲ್ಲಿ ಮೂರನೇ ರೈಲು ಬಂದಿತ್ತು. ವಿವಿಧ ತಂತ್ರಜ್ಞರಿಂದ ಪರೀಕ್ಷೆ, ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆ, 'ಇಂಡಿಪೆಂಡೆಂಟ್ ಸೇಫ್ಟಿ ಅಸೆಸರ್' (ಐಎಸ್‌ಎ) ಸೇರಿ ಪರಿಶೀಲನೆಗಳೆಲ್ಲ ಮುಕ್ತಾಯಗೊಂಡ ಬಳಿಕ ಮೆಟ್ರೊ ರೈಲು ಸುರಕ್ಷತೆ ದಕ್ಷಿಣ ವೃತ್ತದ ಆಯುಕ್ತ ಅನಂತ್ ಮಧುಕರ್ ಚೌಧರಿ ನೇತೃತ್ವದ ತಂಡವು ಜುಲೈ 22ರಿಂದ 25ರವರೆಗೆ ಅಂತಿಮ ಪರೀಕ್ಷೆಗಳನ್ನು ನಡೆಸಿತ್ತು.

ಸುರಕ್ಷತಾ ಆಯೋಗದಿಂದ ಆ.1ರಂದು ಅನುಮತಿ ಸಿಕ್ಕಿತ್ತು. ಇದಾದ ಬಳಿಕ ಉದ್ಘಾಟನೆಗೆ ದಿನ ನಿಗದಿ ಮಾಡಲು ಬಿಎಂಆರ್‌ಸಿಎಲ್ ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಕೇಳಿಕೊಂಡಿತ್ತು.

'ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವರೇ ಮಾಹಿತಿ ಹಂಚಿಕೊಂಡಿರುವುದರಿಂದ ಅದು ಸರಿ ಇರುತ್ತದೆ. ನಮಗೆ ಇನ್ನೂ ಅಧಿಕೃತ ಮಾಹಿತಿ ಬಂದಿಲ್ಲ. ಆದರೆ, ಉದ್ಘಾಟನೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ' ಎಂದು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಅಧಿಕಾರಿಗಳು ತಿಳಿಸಿದ್ದಾರೆ.



ರಾಷ್ಟ್ರೀಯ ವಿದ್ಯಾಲಯ ಬೊಮ್ಮಸಂದ್ರ ನಡುವಿನ ನಮ್ಮ ಮೆಟ್ರೊ ಹಳದಿ ಮಾರ್ಗ

19.15 ಕಿ.ಮೀ.	₹ 5,057	16 ಮೆಟ್ರೊ	3 ಇಂಟರ್‌ಚೇಂಜ್‌ಗಳು (ಆರ್‌ವಿ ರಸ್ತೆ, ಜಯದೇವ, ಸಿಲ್ಕ್ ಬೋರ್ಡ್)
ಹಳದಿ ಮಾರ್ಗದ ಉದ್ದ	ಕೋಟಿ ನಿರ್ಮಾಣ ವೆಚ್ಚ	ನಿಲ್ದಾಣಗಳ ಸಂಖ್ಯೆ	

ಹಳದಿ ಮಾರ್ಗದ ನಿಲ್ದಾಣಗಳು

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಷನ್ (ಕೋನಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬೆರಟೇನ ಅಗ್ರಹಾರ, ಹೊಸ ರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್.ವಿ. ರಸ್ತೆ ನಿಲ್ದಾಣಗಳನ್ನು ನಮ್ಮ ಮೆಟ್ರೊ ಹಳದಿ ಮಾರ್ಗ ಹೊಂದಿದೆ.

ಮೂರು ರೈಲುಗಳ ಸಂಚಾರ

ಹಳದಿ ಮಾರ್ಗದಲ್ಲಿ ಆರಂಭಿಕ ಹಂತದಲ್ಲಿ ಮೂರು ರೈಲುಗಳು ಸಂಚರಿಸಲಿವೆ. 25 ನಿಮಿಷಕ್ಕೊಂದು ಟ್ರಿಪ್ ಇರಲಿದೆ.

ಈ ಮಾರ್ಗಕ್ಕೆ ಒಟ್ಟು 15 ರೈಲುಗಳು ಬೇಕಾಗಿದ್ದು, ನಾಲ್ಕನೇ ರೈಲು ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ಹೊರಟಿದ್ದು, ಆಗಸ್ಟ್ 10ರ ವೇಳೆಗೆ ಬೆಂಗಳೂರು ತಲುಪುವ ನಿರೀಕ್ಷೆ ಇದೆ. ಪ್ರತಿ ರೈಲು ಬಂದ ಬಳಿಕ ಅದಕ್ಕೆ ಸಂಬಂಧಿಸಿದ ಪರೀಕ್ಷೆಗಳು ಸುಮಾರು ಮೂರು ವಾರ ನಡೆಯಲಿವೆ. ಸೆಪ್ಟೆಂಬರ್‌ನಲ್ಲಿ ಮತ್ತೆರಡು ರೈಲುಗಳು ಪೂರೈಕೆಯಾಗುವ ನಿರೀಕ್ಷೆಯಲ್ಲಿ ಬಿಎಂಆರ್‌ಸಿಎಲ್ ಅಧಿಕಾರಿಗಳಿದ್ದಾರೆ.

ಆರಂಭಿಕ ಹಂತದಲ್ಲಿ 25 ಸಾವಿರ ಪ್ರಯಾಣಿಕರು ಸಂಚರಿಸುವ ಸಾಧ್ಯತೆ ಇದೆ. ಪೂರ್ಣ ಪ್ರಮಾಣದಲ್ಲಿ ರೈಲುಗಳು ಓಡಾಟ ಆರಂಭಿಸಿದಾಗ 3.5 ಲಕ್ಷ ಪ್ರಯಾಣಿಕರು ಸಂಚರಿಸುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘವು(ಕೆಜೆಸಿಎಸ್) ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

2025ರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 85ಕ್ಕಿಂತ ಅಧಿಕ, ಪಿಯುಸಿ ಹಾಗೂ ಪದವಿ/ಸ್ನಾತಕೋತ್ತರ ಪದವಿಗಳಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಪಡೆದಿರುವ ಸಂಘದ ಸದಸ್ಯರು–ಸಹ ಸದಸ್ಯರ ಮಕ್ಕಳು ಆಗಸ್ಟ್ 10ರೊಳಗೆ ಅರ್ಜಿ ಸಲ್ಲಿಸಬಹುದು. ಆಯ್ಕೆ ಆದವರಿಗೆ ಇದೇ 23ರಂದು ನಡೆಯುವ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ನಂ.114, ಸುವರ್ಣ ಭವನ, ಎರಡನೇ ಮಹಡಿ, ಕ್ವೀನ್ಸ್ ರಸ್ತೆ ಬೆಂಗಳೂರು- 560051.

ಚಿಟಿಕೆ ಸುದ್ದಿ

ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಗಸ್ಟ್ 22ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ 8, 12 ಹಾಗೂ 16 ವರ್ಷದೊಳಗಿನ ಮತ್ತು 18 ವರ್ಷ ನಂತರದವರು ಎಂಬ ನಾಲ್ಕು ವಿಭಾಗಗಳಿವೆ. ಆಗಸ್ಟ್ 5ರೊಳಗೆ ನೋಂದಣಿ ಮಾಡಿಕೊಳ್ಳಬಹುದು.

22ರಂದು ನಡೆಯುವ ಇದೇ ಕಾರ್ಯ-ಕ್ರಮದಲ್ಲಿ ಕಲಾವಿದರು, ಸಮಾಜ ಸೇವಕರು, ಅತ್ಯುತ್ತಮ ಪೋಷಕರಿಗೆ, ಅತ್ಯುತ್ತಮ ಪೋಷಕ ರತ್ನ ಪ್ರಶಸ್ತಿ ಹಾಗೂ ಬಾಲಪ್ರತಿಭೆಗಳಿಗೆ ಕಲಾ ದರ್ಪಣ ಪ್ರೋತ್ಸಾಹ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ: 93806 71947

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ (ಅಗ್ನಿವಂಶ ಕ್ಷತ್ರಿಯ) ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2025ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಆಗಸ್ಟ್ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


ಮಾಹಿತಿಗೆ: 080-23200608

ಕನಿಷ್ಠ ದರ ಕಡತಕ್ಕೆ ಸೀಮಿತ


ಆಟೊ: ಅನುಷ್ಠಾನಕ್ಕೆ ಬಾರದ ಸರ್ಕಾರಿ ಆದೇಶ • ಪ್ರಯಾಣಿಕರ ಆಕ್ರೋಶ



• ಬಾಲಕೃಷ್ಣಪಿ.ಎಚ್.


ಬಿ.ಜಿ. ರಾಧಾ


ಎಂ.ಆರ್. ರೂಪಾ


ವಿ. ಗಿರಿಜಾ

ಬೆಂಗಳೂರು: ಆಟೊ ಪ್ರಯಾಣ ದರ ನಿಗದಿ ಕಡತಕ್ಕೆ ಸೀಮಿತವಾಗಿದ್ದು ಪ್ರಯಾಣಿಕರಿಂದ ಅಧಿಕ ದರ ವಸೂಲಿ ಮಾಡುವುದು ಮುಂದುವರಿದಿದೆ ಎಂದು ಹಲವು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪರಿಷ್ಕೃತ ದರವಿರಲಿ, ಹಳೆಯ ದರವಿರಲಿ... ಮೀಟರ್ ಹಾಕಿದರೆ ತಾನೆ ಅನ್ವಯವಾಗುವುದು. ಮೀಟರ್ ಹಾಕುವವರೇ ಕಾಣುತ್ತಿಲ್ಲ. ಆ್ಯಪ್ ಆಧಾರಿತ ಅಗ್ರಿಗೇಟರ್ ಕಂಪನಿಗಳ ಅಡಿಯಲ್ಲಿ ಸಂಚರಿಸುವ ಆಟೊಗಳಲ್ಲಿ ಕನಿಷ್ಠ ದರ ಇಲ್ಲವೇ ಇಲ್ಲ' ಎಂದು ತಿಳಿಸಿದ್ದಾರೆ.

ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಮೊದಲ ಎರಡು ಕಿ.ಮೀ.ಗೆ ಆಟೊ ಪ್ರಯಾಣ ದರ ಕನಿಷ್ಠ ₹30ರಿಂದ ₹36ಕ್ಕೆ ಮತ್ತು ನಂತರದ ಪ್ರತಿ ಕಿ.ಮೀ.ಗೆ ₹15ರಿಂದ ₹18ಕ್ಕೆ ಹೆಚ್ಚಳ ಮಾಡಿ ಪರಿಷ್ಕರಿಸಲಾಗಿತ್ತು. ಆದರೆ, ಇದನ್ನು ಅನುಷ್ಠಾನ ಮಾಡದೇ ಇರುವುದರಿಂದ ಪ್ರಯಾಣಿಕರಿಗೆ ಯಾವುದೇ ಪ್ರಯೋಜನವಿಲ್ಲ ಎಂದು ಅಭಿಪ್ರಾಯಪಟ್ಟರು.

'ನಾವು ಕರೆದ ಕಡೆಗೆ ಆಟೊಗಳು ಬರುವುದಿಲ್ಲ. ಬಂದರೂ ಕನಿಷ್ಠ ದರ ತೆಗೆದುಕೊಳ್ಳುವುದಿಲ್ಲ. ಅವರು ಹೇಳಿದಷ್ಟು ನೀಡಬೇಕಾಗುತ್ತದೆ. ಕನಿಷ್ಠ ₹30 ಇರುವಾಗ ₹40 ತೆಗೆದುಕೊಳ್ಳುತ್ತಿದ್ದರು. ಈಗ ₹36 ಆದ ಮೇಲೆ ಇನ್ನೂ ಹೆಚ್ಚು ಕೇಳುತ್ತಿದ್ದಾರೆ ಎಂದು ಬಸವೇಶ್ವರ ನಗರದ ವಿ.ಗಿರಿಜಾ ತಿಳಿಸಿದರು.

'ಓಲಾ, ಉಬರ್‌ನಲ್ಲಿ ಇದಕ್ಕಿಂತಲೂ ಹೆಚ್ಚಿನ ದರ ಇದೆ. ಮಳೆ ಬಂದಾಗ ಬುಕ್ ಮಾಡಲು ಹೊರಟರೆ ವಿಪರೀತ ದರ ತೋರಿಸುತ್ತಾರೆ. ನನ್ನಲ್ಲಿ ಸ್ಕೂಟಿ ಇದೆ. ಮಕ್ಕಳನ್ನು ಅದರಲ್ಲಿಯೇ ಶಾಲೆಗೆ ಬಿಟ್ಟು ಬರುತ್ತೇನೆ. ಎರಡು ದಿನಗಳ ಹಿಂದೆ ಸಂಜೆ ಮಳೆ ಬಂದಿತ್ತು. ಅದಕ್ಕೇ ಸ್ಕೂಟಿ ಬದಲು ಆಟೊ ಬುಕ್ ಮಾಡಲು ಹೊರಟರೆ ಕನಿಷ್ಠ ದರದ ಮೂರು ಪಟ್ಟು ಆ್ಯಪ್‌ನಲ್ಲಿ ತೋರಿಸಿತು' ಎಂದು ಅವರು ಅನುಭವ ತೆರೆದಿಟ್ಟರು.

'ನಾವು ನಗರದ ಹೊರವಲಯದಲ್ಲಿ ಇರುವುದು. ಇಲ್ಲಿ ದರ ಪರಿಷ್ಕರಣೆಗೂ ಆಟೊ ದರಕ್ಕೂ ಸಂಬಂಧವೇ ಇಲ್ಲ. ಮೀಟರ್ ಹಾಕುವುದೇ ಇಲ್ಲ. ₹50, ₹100, ₹150 ಎಂದು ದರ ಹೇಳುತ್ತಾರೆ. ಓಲಾ, ಉಬರ್ ಬುಕ್ ಮಾಡಲು ಹೋದರೆ ಅಲ್ಲಿಯೂ ಬುಕ್ ಆಗುವುದಿಲ್ಲ. ಅದರಲ್ಲಿ ಟಿಪ್ಸ್ ಎಂಬ ಆಯ್ಕೆಯೊಂದು ಇದೆ. ಟಿಪ್ಸ್ ನೀಡಲು ಒಪ್ಪಿದರಷ್ಟೇ ಬುಕ್ ಆಗುತ್ತದೆ' ಎಂದು ಹೆಸರುಘಟ್ಟದ ಎಂ.ಆರ್. ರೂಪಾ ತಿಳಿಸಿದರು.

'ಆಟೊ ಚಾಲಕರಲ್ಲಿ ಪ್ರಯಾಣಿಕರಿಂದ ಅಧಿಕ ವಸೂಲಿ ಮಾಡುವವರೂ, ಮಾನವೀಯತೆಯಿಂದ ನಡೆದುಕೊಳ್ಳುವವರೂ ಇರುತ್ತಾರೆ. ನಮ್ಮ ಮನೆಯ ಪಕ್ಕದ ಆಟೊದವರು ಕನಿಷ್ಠ ದರಕ್ಕೆ ಕರೆದುಕೊಂಡು ಹೋಗುತ್ತಾರೆ. ಇತ್ತೀಚೆಗೆ ಮೆಜೆಸ್ಟಿಕ್‌ನಿಂದ ಚಿಕ್ಕಪೇಟೆಗೆ ಹೋಗಬೇಕಿತ್ತು. ಕಾಲ್ನಡಿಗೆಯಲ್ಲಿಯೇ ಸಾಗಬಹುದಾಗಿದ್ದ ಚಿಕ್ಕಪೇಟೆಗೆ ಹೋಗಲು ಆಟೊದವರನ್ನು ಕರೆದರೆ ₹150 ಹೇಳಿದರು. ಎಷ್ಟೇ ಚೌಕಾಸಿ ನಡೆಸಿದರೂ ₹100ಕ್ಕಿಂತ ಕಡಿಮೆಗೆ ಬರಲಿಲ್ಲ. ಇಂಥವರಿಂದಲೇ ಪ್ರಾಮಾಣಿಕ ಆಟೊ ಚಾಲಕರಿಗೂ ಕೆಟ್ಟ ಹೆಸರು' ಎಂದು ಕುರುಬರಹಳ್ಳಿಯ ಬಿ.ಜಿ. ರಾಧಾ ತಿಳಿಸಿದರು. ವಯಸ್ಸಾದ ಚಾಲಕರು ಹೆಚ್ಚು ವಸೂಲಿ ಮಾಡಲು ಹೋಗುವುದಿಲ್ಲ. ಉಳಿದವರದ್ದೇ ಸಮಸ್ಯೆ ಎಂದು ಅವರು ಹೇಳಿದರು.

'ಕೆಲವರಿಂದ ಎಲ್ಲರಿಗೂ ಕೆಟ್ಟ ಹೆಸರು'


ದುಷ್ಯಂತ್

'ಯುಪಿಐ ಮೂಲಕ ಪಾವತಿಸುವವರು ಕನಿಷ್ಠ ದರ ಎಷ್ಟಿದೆಯೋ ಅಷ್ಟೇ ನೀಡುತ್ತಾರೆ. ನಗದು ಪಾವತಿಸುವಾಗ ₹36 ತೆಗೆದುಕೊಳ್ಳಲು ಚಿಲ್ಲರೆ ಇರುವುದಿಲ್ಲ. ಹಾಗಾಗಿ ಪ್ರಯಾಣಿಕರೇ ₹40 ಕೊಟ್ಟು ಹೋಗುತ್ತಾರೆ' ಎಂದು ಅಟೊ ಚಾಲಕ, ಕಾಮಾಕ್ಷಿ ಪಾಳ್ಯದ ದುಷ್ಯಂತ್ ತಿಳಿಸಿದರು.

'ಎಲ್ಲ ರಂಗದಲ್ಲಿ ಇರುವಂತೆ ಇಲ್ಲಿಯೂ ಶೇ 30ರಷ್ಟು ಚಾಲಕರು ಪ್ರಾಮಾಣಿಕವಾಗಿ ಮೀಟರ್ ಪ್ರಕಾರ ನಿಗದಿತ ದರವನ್ನೇ ಪಡೆಯುತ್ತಿದ್ದಾರೆ. ಇನ್ನು ಶೇ 40ರಷ್ಟು ಚಾಲಕರು ಹೆಚ್ಚು ಸಿಕ್ಕಿದರೆ ಹೆಚ್ಚು ಪಡೆಯುತ್ತಾರೆ. ಚೌಕಾಸಿ ನಡೆಸಿದಾಗ ನಿಗದಿತ ದರಕ್ಕೂ ಬರುತ್ತಾರೆ. ಇನ್ನು ಉಳಿದ ಶೇ 30ರಷ್ಟು ಚಾಲಕರು ಅಧಿಕ ವಸೂಲಿ ಮಾಡುತ್ತಾರೆ' ಎಂದು ಅವರು ವಿವರಿಸಿದರು.

'ಓಲಾದಲ್ಲಿ ಕನಿಷ್ಠ ದರ ₹ 45, ಉಬರ್‌ನಲ್ಲಿ ಕನಿಷ್ಠ ದರ ₹ 53 ಇದೆ. ಎಲ್ಲೋ ಇರುವವರು ಪಿಕ್‌ಅಪ್ ಪಾಯಿಂಟ್‌ಗೆ ಬಂದು ಕರೆದುಕೊಂಡು ಹೋಗಬೇಕಾಗುತ್ತದೆ. ಇದು ಸರ್ಕಾರ ನಿಗದಿಪಡಿಸಿದ ದರದಷ್ಟೇ ಇದೆ' ಎಂದು ಅವರು ಮಾಹಿತಿ ನೀಡಿದರು.

ಅಧಿಕ ವಸೂಲಿ ಮಾಡಿದರೆ ಕ್ರಮ

ನಿಗದಿತ ದರಕ್ಕಿಂತ ಅಧಿಕ ದರ ವಸೂಲಿ ಮಾಡಬಾರದು. ಆಗ್ರಿಗೇಟರ್‌ಗಳು ಸರ್ಕಾರ ನಿಗದಿಪಡಿಸಿದ ಕನಿಷ್ಠ ದರಕ್ಕಿಂತ ಶೇ 10ರಷ್ಟು ಅಧಿಕ ಶುಲ್ಕ ವಿಧಿಸಲು ಅವಕಾಶವಿದೆ. ಅದಕ್ಕಿಂತ ಹೆಚ್ಚು ವಸೂಲಿ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಗುತ್ತಿಗೆ ರದ್ದು ಮಾಡಿರುವುದು ಒಪ್ಪಂದದ ಉಲ್ಲಂಘನೆ'

ಜಮೀನು ಲಭ್ಯ ಇದ್ದರೂ ಕಾಮಗಾರಿ ನಡೆಸದ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2ಕ್ಕೆ ಸಂಬಂಧಿಸಿದಂತೆ ಶೇ 84ರಷ್ಟು ಜಮೀನು ನೀಡಲಾಗಿದೆ. ಕಾರಿಡಾರ್–4ಕ್ಕೆ ಸಂಬಂಧಿಸಿದಂತೆ 17 ಕಿ.ಮೀ. ಕಾಮಗಾರಿ ನಡೆಸಲು ಅವಕಾಶವಿತ್ತು. ಆದರೂ ಕಾಮಗಾರಿ ನಡೆಸದೇ ಗುತ್ತಿಗೆಯಿಂದ ಹಿಂದೆ ಸರಿದಿರುವುದು ಒಪ್ಪಂದದ ಉಲ್ಲಂಘನೆಯಾಗಿದೆ ಎಂದು ಕೆ–ರೈಡ್ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್ (ಕೆ- ರೈಡ್) ಜೊತೆಗೆ ಎಲ್ ಆ್ಯಂಡ್ ಟಿ ಕಂಪನಿಯು ಎರಡು ಕಾರಿಡಾರ್‌ಗಳಿಗೆ ಸಂಬಂಧಿಸಿದಂತೆ ಒಪ್ಪಂದವನ್ನು ಮಾಡಿಕೊಂಡಿತ್ತು. 2026ರ ಅಕ್ಟೋಬರ್ ಒಳಗೆ ಕಾರಿಡಾರ್–2 (ಚಿಕ್ಕಬಾಣಾವರ-ಬೆನ್ನಿಗಾನಹಳ್ಳಿ) ಮತ್ತು ಕಾರಿಡಾರ್–4 (ಹೀಲಲಿಗೆ – ರಾಜಾನುಕುಂಟೆ) ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುರಿ ನಿಗದಿಪಡಿಸಲಾಗಿದೆ.

ಈ ಒಪ್ಪಂದಗಳ ಷರತ್ತಿನ ಪ್ರಕಾರ ಎಲ್ ಆ್ಯಂಡ್ ಟಿಗೆ ಯಾವುದೇ ಒಪ್ಪಂದ ರದ್ದುಗೊಳಿಸುವ ಅಧಿಕಾರವಿಲ್ಲ. ಆದರೂ ಗುತ್ತಿಗೆಗಳನ್ನು ರದ್ದುಪಡಿಸಿರುವುದಾಗಿ ಜುಲೈ 30ರಂದು ಎಲ್ ಆ್ಯಂಡ್ ಟಿ ಅಧಿಕಾರಿಗಳು ತಿಳಿಸಿದ್ದು, ಇದು ಷರತ್ತುಗಳ ಸ್ಪಷ್ಟ ಉಲ್ಲಂಘನೆ ಎಂದು ಕೆ–ರೈಡ್ ತಿಳಿಸಿದೆ.

ಕಾರಿಡಾರ್–2 ಮತ್ತು 4ಕ್ಕೆ ಸಂಬಂಧಿಸಿದಂತೆ ಒದಗಿಸಲಾದ ಜಮೀನಿನಲ್ಲಿ ಕಾಮಗಾರಿ ಬಹಳ ನಿಧಾನಗತಿಯಲ್ಲಿದ್ದು, ಶೇ 20ರಷ್ಟು ಪ್ರಗತಿಯನ್ನು ಕಂಡಿಲ್ಲ. ಆದರೂ ಕಾಮಗಾರಿ ನಡೆಸಲು ಭೂಮಿ ಇಲ್ಲ ಎಂದು ಹೇಳುತ್ತಿರುವ ತರ್ಕ ಸರಿಯಲ್ಲ. ಈಗ ಒದಗಿಸಲಾಗಿರುವ ಜಮೀನಿನಲ್ಲಿ ಕೆಲಸ ಪೂರ್ಣಗೊಂಡಿದ್ದರೆ, ಉಳಿದ ಜಮೀನು ಲಭ್ಯವಾಗದೇ ತೊಂದರೆಯಾಗಿದ್ದರೆ ಒಪ್ಪಂದ ಪ್ರಕಾರ ದೂರು ನೀಡಲು, ಗಡುವು ವಿಸ್ತರಣೆ ಮಾಡಲು, ಪರಿಹಾರ ಕಂಡುಕೊಳ್ಳಲು ಅವಕಾಶವಿದ್ದರೂ ಏಕಪಕ್ಷೀಯವಾಗಿ ಮತ್ತು ಅಕ್ರಮವಾಗಿ ಗುತ್ತಿಗೆ ರದ್ದುಗೊಳಿಸಲಾಗಿದೆ.

ಎಲ್ ಆ್ಯಂಡ್ ಟಿಯು ಯಂತ್ರೋಪಕರಣಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು, ವಿನ್ಯಾಸ ಅಂತಿಮಗೊಳಿಸುವಲ್ಲಿ ವಿಳಂಬ, ಯೋಜನಾ ನಿರ್ವಾಹಕರನ್ನು ಪದೇಪದೇ ಬದಲಾಯಿಸಿರುವುದು ಕಾಮಗಾರಿ ಕುಂಠಿತವಾಗಲು ಕಾರಣ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿಡಾರ್–2 ಮತ್ತು 4ರಲ್ಲಿ ಉಳಿದ ಕೆಲಸಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು. ಅದಕ್ಕೆ ಬೇಕಾದ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಹೇಳಿದ್ದಾರೆ.



ಎಎನ್‌ಆರ್‌ಎಫ್ ಯೋಜನೆಗೆ ಅರ್ಜಿ

ಬೆಂಗಳೂರು: 'ಅನುಸಂಧಾನ್ ನ್ಯಾಷನಲ್ ರಿಸರ್ಚ್ ಆ್ಯಂಡ್ ಫೌಂಡೇಷನ್(ಎಎನ್‌ಆರ್‌ಎಫ್)' ಅಡಿಯಲ್ಲಿ ಪ್ರತಿಷ್ಠಿತ 'ಪ್ರೈಮ್ ಮಿನಿಸ್ಟರ್ ಪ್ರೊಫೆಸರ್‌ಶಿಪ್' ಯೋಜನೆಯ ನೋಡಲ್ ಸಂಸ್ಥೆಯಾಗಿ ಬೆಂಗಳೂರು ವಿಶ್ವವಿದ್ಯಾಲಯ ಆಯ್ಕೆಯಾಗಿದೆ.

ಈ ಯೋಜನೆಯಡಿ ಸಂಶೋಧಕರನ್ನು ಆಯ್ಕೆ ಮಾಡಿ, ಸಂಸ್ಥೆಯ ಸಂಶೋಧನಾ ಸಾಮರ್ಥ್ಯವನ್ನು ವೃದ್ಧಿಸಿ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಆದ್ಯತೆಯ ಸಂಶೋಧನಾ ಕ್ಷೇತ್ರಗಳಲ್ಲಿ ಮಾರ್ಗದರ್ಶನ ನೀಡಲಾಗುತ್ತದೆ.

ಆಯ್ಕೆಯಾದ ಸಂಶೋಧಕರಿಗೆ ಪ್ರತಿ ವರ್ಷ ₹30 ಲಕ್ಷ ವೇತನ, ಭತ್ಯೆ ನೀಡಲಾಗುವುದು. ಜೊತೆಗೆ ₹24 ಲಕ್ಷ ಸಂಶೋಧನಾ ಅನುದಾನ ಮತ್ತು ಸಂಸ್ಥೆಗೆ ಪ್ರತಿ ವರ್ಷ ₹1 ಲಕ್ಷದಷ್ಟು ಮೇಲು ವೆಚ್ಚವನ್ನು ಭರಿಸುತ್ತದೆ. ಈ ಸಹಾಯಧನದ ಅವಧಿ ಐದು ವರ್ಷ.

ನಿವೃತ್ತ ಅಧ್ಯಾಪಕರು ಅಥವಾ ವಿಜ್ಞಾನಿಗಳು, ಸಂಶೋಧಕರು ಮತ್ತು ಸಂಶೋಧನೆ ಹಾಗೂ ನವೋದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಮಾಹಿತಿಗೆ https://www.anrfonline.in/ANRF/HomePage ನೋಡಿ. ಸಂಪರ್ಕ: 9845634196 (ಪ್ರೊ. ಅಶೋಕ್ ಡಿ. ಹಂಜಗಿ)

'ಅಂಬೇಡ್ಕರ್ ಶ್ರಮ: ಸುಸ್ಥಿತಿಯಲ್ಲಿ ದಲಿತರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಶ್ರಮದಿಂದ ದಲಿತ ಸಮುದಾಯ ಸುಸ್ಥಿತಿಯಲ್ಲಿದೆ. ಇದನ್ನು ದಲಿತ ಸಮುದಾಯದ ನೌಕರರು ಅರ್ಥ ಮಾಡಿಕೊಂಡು ಸಶಕ್ತ ಸಂಘಟನೆ ಕಟ್ಟಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಂಟಿ ನಿರ್ದೇಶಕ ಮಹಾಲಿಂಗಯ್ಯ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ (ಪದವಿಪರ್ವ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ನೌಕರರ ಸಂಘದ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಾಂಶಗಳು

- ದಲಿತ ಸಮುದಾಯದ ಪ್ರತಿಭೆಗಳನ್ನು ಗುರುತಿಸಿ ಬೆಳೆಸಬೇಕು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಸನ್ಮಾನ

'ಬುದ್ಧರಿಂದ ಮೊದಲುಗೊಂಡು ಫುಲೆ ದಂಪತಿ, ಶಾಹು ಮಹಾರಾಜ್ ಅವರಂತಹ ಮಹಾನ್ ಮಾನವತಾವಾದಿಗಳ ದೂರದೃಷ್ಟಿಯಿಂದ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಈ ದೇಶವನ್ನು ಬಲಿಷ್ಠವಾಗಿ ರೂಪಿಸುವ ಶಕ್ತಿ ಮತ್ತು ಅವಕಾಶ ಸಿಕ್ಕಿತು. ಹಾಗೆಯೇ ದಲಿತ ಸಮುದಾಯದ ಪ್ರತಿಭೆಗಳನ್ನು ಸಮುದಾಯದ ನೌಕರ ಬಂಧುಗಳು ಗುರುತಿಸಿ ಬೆಳೆಸಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ನಿವೃತ್ತಿಯಾದ ಹಾಗೂ ಪದೋನ್ನತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರನ್ನು ಸನ್ಮಾನಿಸಲಾಯಿತು.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಜಂಟಿ ನಿರ್ದೇಶಕ ಎನ್. ರಾಜು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕ ಪಾಲಾಕ್ಷ, ಇಲಾಖೆಯ ಉಪನಿರ್ದೇಶಕರಾದ ನರಸಿಂಹ ಮೂರ್ತಿ, ಪುಷ್ಪಾ, ಸಂಘದ ರಾಜ್ಯ ಘಟಕದ ಅಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ಜಯರಾಮ್, ಪ್ರಾಂಶುಪಾಲರ ಸಂಘದ ಕಾರ್ಯದರ್ಶಿ ಕೃಷ್ಣಮೂರ್ತಿ, ಅನುದಾನಿತ ಕಾಲೇಜುಗಳ ಸಂಘದ ಅಧ್ಯಕ್ಷ ಹರೀಶ್, ನೌಕರರ ಸಂಘದ ಬೆಂಗಳೂರು ವಿಭಾಗದ ಅಧ್ಯಕ್ಷ ಲಕ್ಷ್ಮಣಯ್ಯ ಉಪಸ್ಥಿತರಿದ್ದರು.

ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ ಬಾಲಕಿಯರ ರಾಷ್ಟ್ರೀಯ ಕ್ರೀಡಾಕೂಟ

ಕ್ರೀಡಾಕೂಟ: ಯುವ ಪ್ರತಿಭೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ವಿ.ರಾಮನ್ ನಗರದಲ್ಲಿರುವ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ 17 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ಕ್ರೀಡಾಕೂಟ ಆಯೋಜಿಸಲಾಗಿದೆ.

ಕ್ರೀಡಾಕೂಟದಲ್ಲಿ ದೇಶದ ವಿವಿಧ ಭಾಗಗಳಿಂದ 24 ತಂಡಗಳ 288 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಅಸಾಧಾರಣ ಕೌಶಲ ಮತ್ತು ಕ್ರೀಡಾ ಮನೋಭಾವವನ್ನು ಪ್ರದರ್ಶಿಸಿದರು.

ಕೇಂದ್ರೀಯ ವಿದ್ಯಾಲಯ ಸಂಘಟನೆಯ (ಕೆವಿಎಸ್) ಪ್ರಾದೇಶಿಕ ಕಚೇರಿಯ ಉಪ ಆಯುಕ್ತ ಶೇಖ್ ತಾಜುದ್ದೀನ್ ಅವರು ಕೆವಿಎಸ್ ಧ್ವಜಾರೋಹಣ ನೆರವೇರಿಸಿದರು.

ಎಡಿಇ ವಿಜ್ಞಾನಿ ವರ್ಷಾ ಅಗರ್ವಾಲ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, 'ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವ ಮತ್ತು ತಂಡವಾಗಿ ಕೆಲಸ ಮಾಡುವಂತಹ ಕೌಶಲಗಳನ್ನು ಬೆಳೆಸುತ್ತದೆ' ಎಂದು ಹೇಳಿದರು. ಹೆಚ್ಚು ಹೆಚ್ಚು ದೈಹಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳಿಗೆ ಅವರು ಸಲಹೆ ನೀಡಿದರು.

ಕ್ರೀಡಾಕೂಟದ ಭಾಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಗುಂಪು ನೃತ್ಯ ಮತ್ತು ಯೋಗ ಪ್ರದರ್ಶಿಸಿದರು.

ನಂತರ ವರ್ಷಾ ಅಗರ್ವಾಲ್ ಅವರು, ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಚಂಡೀಗಢ ಮತ್ತು ಬೆಂಗಳೂರು, ಚೆನ್ನೈ ಮತ್ತು ಆಗ್ರಾ ತಂಡಗಳ ನಡುವೆ ಕಬಡ್ಡಿ ಪಂದ್ಯಗಳು ನಡೆದವು.

ಕಾರ್ಯಕ್ರಮದಲ್ಲಿ ವಿಜ್ಞಾನಿ ವಿನೋದ್ ವಿಶ್ವಕರ್ಮ, ಪ್ರಾಚಾರ್ಯೆ ಗ್ಲೋರಿ ಜ್ಞಾನಸೆಲ್ವಿ , ಕೇಂದ್ರೀಯ ವಿದ್ಯಾಲಯ ಎಂ.ಜಿ ರೈಲ್ವೆಯ ಪ್ರಾಚಾರ್ಯ ರುಡಾಲ್ ದುಬೆ, ಕೆವಿ ಡಿಆರ್‌ಡಿಒ ಶಾಲೆಯ ಮುಖ್ಯ ಶಿಕ್ಷಕಿ ಜಯಶ್ರೀ ರಾಜಾ ಉಪಸ್ಥಿತರಿದ್ದರು.


17 ವರ್ಷದೊಳಗಿನ ಬಾಲಕಿಯರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ವಿವಿಧ ರಾಜ್ಯಗಳ ಕೇಂದ್ರೀಯ ವಿದ್ಯಾಲಯದ ಕ್ರೀಡಾಪಟುಗಳು ಯೋಗ ಪ್ರದರ್ಶಿಸಿದರು

ದೇವಗೊಂಡಿ ರೈಲ್ವೆ ಸೇತುವೆ ಅತಂತ್ರ

ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಗತ್ಯ ಭೂಮಿ ಸ್ವಾಧೀನಕ್ಕೆ ಪಡೆದುಕೊಂಡಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವೈಟ್‌ಫೀಲ್ಡ್‌ನಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ದೇವಗೊಂಡಿ ರೈಲು ನಿಲ್ದಾಣಕ್ಕೆ ಸಮೀಪದಲ್ಲೇ, ರೈಲು ಮಾರ್ಗದ ಮೇಲೆ ಒಂದು ಬೃಹತ್ ಕಾಂಕ್ರೀಟ್ ಸೇತುವೆ ನಿಂತಿದೆ. ಬಳಸುವವರಿಲ್ಲದೆ ಈ ಸೇತುವೆ ಎಂಟು ವರ್ಷಗಳಿಂದ ಹೀಗೆ ನಿಂತೇ ಇದೆ. ಏಕೆಂದರೆ ಸೇತುವೆ ಏರಲಾಗಲೀ, ಅದರಿಂದ ಇಳಿಯಾಗಲೀ ಹಾದಿಯೇ ಇಲ್ಲ.

‘ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರದ ನಡುವಣ ಸಮನ್ವಯದ ಕೊರತೆಗೆ ಮೂಕಸಾಕ್ಷಿಯಂತಿದೆ ಈ ಸೇತುವೆ’ ಎಂದು ಮಹಾಲೇಖಪಾಲರ (ಸಿಎಜಿ) ವರದಿಯಲ್ಲೇ ಉಲ್ಲೇಖಿಸಲಾಗಿದೆ. ಸಂಸತ್ತಿನಲ್ಲಿ ಈಚೆಗೆ ಮಂಡಿಸಲಾಗಿರುವ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಮತ್ತು ನಿರ್ವಹಣೆ–2023 ಸಿಎಜಿ ವರದಿಯಲ್ಲಿ ಈ ಮಾಹಿತಿ ಇದೆ.

ವೈಟ್‌ಫೀಲ್ಡ್–ದೇವಗೊಂಡಿ ನಿಲ್ದಾಣಗಳ ಮಧ್ಯೆ ರೈಲ್ವೆ ಲೆವೆಲ್ ಕ್ರಾಸಿಂಗ್ ಇದ್ದು,

ಮುಖ್ಯಾಂಶಗಳು

- ದೇವಗೊಂಡಿ ರೈಲು ನಿಲ್ದಾಣದ ಸಮೀಪದಲ್ಲಿದೆ ಸೇತುವೆ
- ಸಮನ್ವಯದ ಕೊರತೆ: ಪೂರ್ಣವಾಗದ ಸಂಪರ್ಕ ರಸ್ತೆ
- ಜನರ ಹಣ ಪೋಲು–ಸಿಎಜಿ ವರದಿ

ಪ್ರತಿದಿನ ಸಾವಿರಾರು ವಾಹನಗಳು ಓಡಾಡುತ್ತವೆ. ಕಣೇಕಲ್ಲು ಮತ್ತು ಮಾಕನಹಳ್ಳಿ ಗ್ರಾಮಗಳ ಮಧ್ಯೆ ಈ ಲೆವೆಲ್ ಕ್ರಾಸಿಂಗ್ ಮಾತ್ರವೇ ಏಕೈಕ ಸಂಪರ್ಕಕೊಂಡಿ. ಅಲ್ಲದೆ, ವೈಟ್‌ಫೀಲ್ಡ್‌ನ ಪೂರ್ವಭಾಗದಿಂದ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇಗೂ ಈ ಲೆವೆಲ್ ಕ್ರಾಸಿಂಗ್ ಸಂಪರ್ಕ ಕಲ್ಪಿಸುತ್ತದೆ.

ಈ ಲೆವೆಲ್ ಕ್ರಾಸಿಂಗ್ ಬದಲಿಗೆ ಸೇತುವೆ ನಿರ್ಮಿಸುವ ಸಂಬಂಧ ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರವು 2011ರಲ್ಲಿ ಒಪ್ಪಂದ ಮಾಡಿಕೊಂಡಿದ್ದವು. ರೈಲ್ವೆ ಮಾರ್ಗದ



ಸಂಪರ್ಕ ರಸ್ತೆ ಇಲ್ಲದೆ ನಿಂತ ಸೇತುವೆ

ಮೇಲೆ ಸೇತುವೆ ನಿರ್ಮಿಸುವ ಹೊಣೆಗಾರಿಕೆ ರೈಲ್ವೆ ಇಲಾಖೆಯದ್ದು, ಅದಕ್ಕೆ ಸಂಪರ್ಕ ರಸ್ತೆ ನಿರ್ಮಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿತ್ತು.

‘ರೈಲ್ವೆಯು 2015ರಲ್ಲಿ ಕಾಮಗಾರಿ ಆರಂಭಿಸಿ, 2018ರಲ್ಲಿ ಸೇತುವೆಯ ಭಾಗವನ್ನು ಪೂರ್ಣಗೊಳಿಸಿತು. ಆದರೆ ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆ ಮಾತ್ರ ಕಾಮಗಾರಿ ಆರಂಭಿಸಲಿಲ್ಲ. ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಗತ್ಯವಿದ್ದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಹೀಗಾಗಿ ಸೇತುವೆ ನಿರ್ಮಾಣವಾದರೂ, ಜನರ ಬಳಕೆಗೆ ಲಭ್ಯವಾಗಿಲ್ಲ. ಜನರ ತೆರಿಗೆ ಹಣ ಪೋಲಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಯೋಜನಾ ವೆಚ್ಚದಲ್ಲಿ ರೈಲ್ವೆಯು ತನ್ನ ಪಾಲಿನ ₹10.29 ಕೋಟಿ ವೆಚ್ಚ ಮಾಡಿದೆ. ರಾಜ್ಯವು ತನ್ನ ಪಾಲಿನ ₹13.98 ಕೋಟಿ ಇನ್ನಷ್ಟೇ ನೀಡಬೇಕಿದೆ. ಅಗತ್ಯ ಅನುಮತಿ ಪಡೆದುಕೊಳ್ಳದೆ ಮತ್ತು ರಾಜ್ಯವೂ ವೆಚ್ಚ ಮಾಡುವುದನ್ನು ಖಾತರಿ ಮಾಡಿಕೊಳ್ಳದೇ ರೈಲ್ವೆಯ ಹಣವನ್ನು ವೆಚ್ಚ ಮಾಡಿದ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಸಿಎಜಿ ಹೇಳಿದೆ.

2023ರಲ್ಲಿ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಿದಾಗ ಸೇತವೆ ಹೇಗೆ ನಿಂತಿತ್ತೋ, ಈಗಲೂ ಹಾಗೆಯೇ ನಿಂತಿದೆ.

ಸರ್ಕಾರಿ ಪೋರ್ಟಲ್ ಹ್ಯಾಕ್

ಅಭ್ಯರ್ಥಿಗಳಿಗೆ ₹1.46 ಲಕ್ಷ ವಂಚಿಸಿದ ಸೈಬರ್ ಕಳ್ಳರು

• ಪ್ರಜ್ವಲ್ ಡಿಸೋಜಾ

ಬೆಂಗಳೂರು: ದೇಶದಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಇರುವ ಸರ್ಕಾರಿ ಪೋರ್ಟಲ್ ಹ್ಯಾಕ್ ಮಾಡಿರುವ ಸೈಬರ್ ಕಳ್ಳರು, ಆರು ಅಭ್ಯರ್ಥಿಗಳ ಬ್ಯಾಂಕ್ ಖಾತೆಗಳನ್ನು ಬದಲಿಸಿ, ಹಣ ವಂಚಿಸಿದ್ದಾರೆ.

ಜನವರಿ 3 ಮತ್ತು ಜುಲೈ 4ರ ನಡುವೆ apprenticeshipindia.gov.in ಹ್ಯಾಕ್ ಆಗಿದ್ದು, ಅಭ್ಯರ್ಥಿಗಳಿಗೆ ಸೇರಿದ ₹1.46 ಲಕ್ಷ ವಂಚಿಸಲಾಗಿದೆ.

ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಅಡಿಯಲ್ಲಿರುವ ಪೋರ್ಟಲ್, ಅಭ್ಯರ್ಥಿಗಳಿಗೆ ಅಪ್ರೆಂಟಿಸ್‌ಶಿಪ್‌ಗೆ ನೋಂದಾಯಿಸಲು, ಅರ್ಜಿ ಸಲ್ಲಿಸಲು ಮತ್ತು ಸ್ಟೈಫಂಡ್ ಪಡೆಯಲು ಅನುವು ಮಾಡಿಕೊಡುತ್ತದೆ.

ಕಂಪನಿಗಳು ಈ ಪೋರ್ಟಲ್ ಬಳಸಿಕೊಂಡು ರಾಷ್ಟ್ರೀಯ ಶಿಷ್ಯವೃತ್ತಿ ಉತ್ತೇಜನ ಯೋಜನೆ (ಎನ್‌ಎಪಿಎಸ್) ಅಡಿ ಅಪ್ರೆಂಟಿಸ್‌ಗಳನ್ನು ಕರೆತರಬಹುದು ಮತ್ತು ಶೇಕಡ 25ರಷ್ಟು ಸ್ಟೈಫಂಡ್ ಮರುಪಾವತಿ (ಪ್ರತಿ ಅಪ್ರೆಂಟಿಸ್‌ಗೆ ತಿಂಗಳಿಗೆ ₹1,500 ವರೆಗೆ) ಪಡೆಯಬಹುದು.

ಬೆಂಗಳೂರಿನ ವಿಜಯನಗರದಲ್ಲಿರುವ ಕ್ಯಾಡ್‌ಮ್ಯಾಕ್ಸ್ ಸಲ್ಯೂಷನ್ ಎಜುಕೇಶನ್ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಮತ್ತು ನಿರ್ದೇಶಕ ಡಿ. ಅರುಣ್ ಕುಮಾರ್ ಅವರ ದೂರಿನ ಮೇರೆಗೆ ಜುಲೈ 26 ರಂದು ಪಶ್ಚಿಮ ವಿಭಾಗದ ಸೈಬರ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

‘ಜನವರಿ 3ರಿಂದ ಜುಲೈ 4ರ ನಡುವೆ, ಅಪರಿಚಿತ ವ್ಯಕ್ತಿಗಳು ಪೋರ್ಟಲ್ ಹ್ಯಾಕ್ ಮಾಡಿ, ತಮ್ಮ ಆರು ಅಭ್ಯರ್ಥಿಗಳ ಬ್ಯಾಂಕ್ ಖಾತೆಗಳನ್ನು ಬದಲಾಯಿಸಿದ್ದಾರೆ. ನಂತರ, ಅಭ್ಯರ್ಥಿಗಳಿಗೆ ಬಾಕಿ ಇದ್ದ ₹1,46,073 ಅನ್ನು ಎಚ್‌ಡಿಎಫ್‌ಸಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಎನ್‌ಎಸ್‌ಡಿಎಲ್ ಪೇಮೆಂಟ್ಸ್ ಬ್ಯಾಂಕ್ ಮತ್ತು ಆಕ್ಸಿಸ್ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ’ ಎಂದು 39 ವರ್ಷದ ಕುಮಾರ್ ಪೊಲೀಸರಿಗೆ ತಿಳಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆಯ ವಿವಿಧ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿರುವ ಸೈಬರ್ ಪೊಲೀಸರು, ಹಣ ವರ್ಗಾವಣೆಯಾಗಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಕೋರಿದ್ದಾರೆ. ಅಲ್ಲದೇ ಪ್ರವೇಶ ದಾಖಲೆಗಳು, ಐ.ಪಿ ವಿಳಾಸ ವಿವರಗಳನ್ನು ಸಹ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಅಲೀಪುರದಲ್ಲಿ 2,500 ಕೆ.ಜಿ ದನದ ಮಾಂಸ ವಶ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ಬೆಂಗಳೂರಿನಲ್ಲಿ ಮಾರಾಟ ಮಾಡಲು ತಾಲ್ಲೂಕಿನ ಅಲೀಪುರದಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 2,500 ಕೆ.ಜಿ ದನದ ಮಾಂಸವನ್ನು ಮಂಚೇನಹಳ್ಳಿ ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ. ಇದರ ಒಟ್ಟು ಮೌಲ್ಯ ₹4.80 ಲಕ್ಷ ಎಂದು ಅಂದಾಜಿಸಲಾಗಿದೆ.

ಖಚಿತ ಮಾಹಿತಿ ಮೇರೆಗೆ ಪೊಲೀಸರು ಭಾನುವಾರ ಬೆಳಗಿನ ಜಾವ ದಾಳಿ ಅಲೀಪುರದ ಬಾಕ್ರಿ ಮೊಹಲ್ಲಾ ಗಲ್ಲಿಯ ಎರಡು ಶೆಡ್‌ಗಳ ಮೇಲೆ ದಾಳಿ ನಡೆಸಿದರು.

ಶೆಡ್ ಮಾಲೀಕರಾದ ಅಬ್ಬಾಸ್, ಖಾಲು, ಸೈಯದ್ ಸಕ್ಲೈನ್ ಮತ್ತು ಲಾಲು ವಿರುದ್ಧ ಮಂಚೇನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಚಿತ್ರಾವಳಿ


ನಗರದಲ್ಲಿ ನಡೆದ ಬಸವ ಮಂಟಪದ ಸುವರ್ಣ ಮಹೋತ್ಸವ ಹಾಗೂ 830ನೇ ಬಸವ ಪಂಚಮಿ ಕಾರ್ಯಕ್ರಮದಲ್ಲಿ ಸಾಹಿತಿ ಗೊ.ರು.ಚನ್ನಬಸಪ್ಪ ಅವರನ್ನು ಸನ್ಮಾನಿಸಲಾಯಿತು. ನಿಜಗುಣಾನಂದ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವ ಎಂ.ಬಿ.ಪಾಟೀಲ, ಜಾಗತಿಕ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಜಾಮದಾರ, ಬಸವ ಧರ್ಮ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಇದ್ದಾರೆ


ಕಾರ್ಯಕ್ರಮ ಒಂದರಲ್ಲಿ ಭಾಗಿಯಾಗಲು ಭಾನುವಾರ ರಾತ್ರಿ ಬೆಂಗಳೂರಿಗೆ ಬಂದ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಸ್ವಾಗತಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದರು

‘ಸುಳ್ಳು ಸುದ್ದಿ ವ್ಯಾಖ್ಯಾನ: ಸರ್ಕಾರಕ್ಕೆ ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಳ್ಳು ಸುದ್ದಿ ಮತ್ತು ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ರಾಜ್ಯ ಸರ್ಕಾರವು ತರಲು ಹೊರಟಿರುವ ಕಾನೂನುಗಳಲ್ಲಿ, ಸುಳ್ಳು ಸುದ್ದಿ ಅಂದರೆ ಏನು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿಯೇ ಇಲ್ಲ’ ಎಂದು ಆಲ್ಟರ್ನೇಟಿವ್ ಲಾ ಫೋರಂ ಮತ್ತು ದ್ವೇಷ ಭಾಷಣದ ವಿರುದ್ಧ ಜನಾಂದೋಲನವು ಕಳವಳ ವ್ಯಕ್ತಪಡಿಸಿದೆ.

ದ್ವೇಷ ಭಾಷಣದ ವಿರುದ್ಧ ಜನಾಂದೋಲನವು ಈ ಸಂಬಂಧ ರಾಜ್ಯ ಸರ್ಕಾರ ಮತ್ತು ರಾಜ್ಯದ ಎಲ್ಲ ಶಾಸಕರಿಗೆ ಬಹಿರಂಗ ಪತ್ರ ಬರೆದಿದೆ.

‘ರಾಜ್ಯ ಸರ್ಕಾರ ಸಿದ್ಧಪಡಿಸಿರುವ ‘ತಪ್ಪು ಮಾಹಿತಿ ಮತ್ತು ಸುಳ್ಳು ಸುದ್ದಿ (ನಿಷೇಧ) ಮಸೂದೆ–2025’ ಮತ್ತು ‘ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧ (ನಿಷೇಧ) ಮಸೂದೆ–2025’ರ ಕರಡುಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಈ ಕರಡುಗಳನ್ನು ಸರ್ಕಾರವು ಅಧಿಕೃತವಾಗಿ ಬಿಡುಗಡೆ ಮಾಡಿಯೇ ಇಲ್ಲ. ಈ ಮೂಲಕ ಸಾರ್ವಜನಿಕ ಆಕ್ಷೇಪಗಳಿಂದ ಮಸೂದೆಗಳನ್ನು ದೂರವಿಟ್ಟಂತಾಗಿದೆ’ ಎಂದು ಪತ್ರದಲ್ಲಿ ಅಭಿಪ್ರಾಯಪಡಲಾಗಿದೆ.

‘ಈ ರೀತಿಯ ಕಾನೂನುಗಳನ್ನು ತರಾತುರಿಯಲ್ಲಿ ಜಾರಿಗೆ ತಂದ ಫಿಲಿಪ್ಪೀನ್ಸ್, ಜರ್ಮನಿ, ಮಲೇಷ್ಯಾ ಮತ್ತು ನೈಜೀರಿಯಾದಲ್ಲಿ, ಕಾನೂನುಗಳಿಂದ ಅನನುಕೂಲವೇ ಆಗಿದೆ. ಈ ಎಲ್ಲವನ್ನೂ ಗಮನದಲ್ಲಿರಿಸಿಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಲಾಗಿದೆ.

‘ಈ ಮಸೂದೆಗಳಲ್ಲಿ ಸುಳ್ಳು ಸುದ್ದಿ, ತಪ್ಪು ಮಾಹಿತಿ, ದ್ವೇಷ ಭಾಷಣ ಮತ್ತು ದ್ವೇಷಾಪರಾಧ ಅಂದರೆ ಏನು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿಲ್ಲ. ಈ ಮಸೂದೆಗಳು ಕಾಯ್ದೆಯಾಗಿ ಜಾರಿಯಾದರೆ, ಅದು ಆಳುವ ಪಕ್ಷದ ದಮನದ ಸಾಧನವಾಗಿ ಬಳಕೆಯಾಗಬಹುದು ಮತ್ತು ಸರ್ಕಾರಿ ಅಧಿಕಾರಿಗಳಿಂದ ದುರ್ಬಳಕೆಯಾಗಬಹುದು. ಈ ಬಗ್ಗೆ ಸರ್ಕಾರ ಮತ್ತು ಎಲ್ಲ ಶಾಸಕರು ಗಮನಹರಿಸುವ ಅವಶ್ಯಕತೆ ಇದೆ’ ಎಂದು ಆಲ್ಟರ್ನೇಟಿವ್ ಲಾ ಫೋರಂನ ಸಂಶೋಧಕಿ ಮಮತಾ ಹೇಳಿದ್ದಾರೆ.

ಆಲ್ಟರ್ನೇಟಿವ್ ಲಾ ಫೋರಂನ ಮಾನವಿ ಅತ್ರಿ ಅವರು ಸುಳ್ಳು ಸುದ್ದಿ, ದ್ವೇಷ ಭಾಷಣಗಳ ಸ್ವರೂಪ ಮತ್ತು ನಿಷೇಧ ಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದು, ‘ಸರ್ಕಾರವು ಈ ಸಮೂದೆಗಳನ್ನು ತಕ್ಷಣವೇ ಹಿಂಪಡೆಯಬೇಕು. ನಾಗರಿಕರು, ವಿಷಯ ತಜ್ಞರನ್ನು ಒಳಗೊಂಡು ಹೊಸದಾಗಿ ಕರಡು ರೂಪಿಸಬೇಕು. ಮಸೂದೆಗಳು ದುರ್ಬಳಕೆ ಆಗಲು ಇರುವಂತಹ ಅವಕಾಶಗಳನ್ನು ತೆಗೆದುಹಾಕಬೇಕು’ ಎಂದು ಒತ್ತಾಯಿಸಿದ್ದಾರೆ.

ಸರ್ಜಾಪುರ: 26ನೇ ದಿನ ಪೂರೈಸಿದ ಅಹೋರಾತ್ರಿ ಧರಣಿ – ವಿವಿಧ ಸಂಘಟನೆಗಳ ಬೆಂಬಲ

ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಮತ್ತಷ್ಟು ಬಲ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಸರ್ಜಾಪುರ ಹೋಬಳಿಯಲ್ಲಿ ಕೆಐಎಡಿಬಿ ಸ್ವಾಧೀನ ವಿರೋಧಿಸಿ ನಡೆಯುತ್ತಿರುವ ಹೋರಾಟ ದಿನೇ ದಿನೇ ಕಾವು ಪಡೆದುಕೊಳ್ಳುತ್ತಿದೆ. ಅಹೋರಾತ್ರಿ ಧರಣಿಯ 26ನೇ ದಿನವಾದ ಭಾನುವಾರ ವಿವಿಧ ಸಂಘಟನೆಗಳು ಬೆಂಬಲ ನೀಡಿ ಹೋರಾಟಕ್ಕೆ ಮತ್ತಷ್ಟು ಬಲ ತುಂಬಿವೆ.

ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಮತ್ತು ರೈತರು ಮುತ್ತಾನಲ್ಲೂರು ಗ್ರಾಮದಲ್ಲಿ ನಡೆಸುತ್ತಿರುವ ಪ್ರತಿಭಟನೆ ಸ್ಥಳಕ್ಕೆ ಆನೇಕಲ್ ತಾಲ್ಲೂಕಿನ ಮಹಿಳಾ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ದಲಿತ ಪರ ಸಂಘಟನೆಗಳು ಮತ್ತು ಸಂಘ–ಸಂಸ್ಥೆಗಳು ಭೇಟಿ ನೀಡಿ ಬೆಂಬಲ ಸೂಚಿಸಿದವು. ಕೆಆರ್‌ಎಸ್ ಪಕ್ಷ ಪ್ರತಿಭಟನೆಯಲ್ಲಿ ಭಾಗಿಯಾಗಿ ರೈತ ಹೋರಾಟಕ್ಕೆ ಬೆಂಬಲ ನೀಡಿತು.

ಕರ್ನಾಟಕ ರಾಷ್ಟ್ರ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ತಾಲ್ಲೂಕಿನಲ್ಲಿ ಈಗಾಗಲೇ ಐದು ಕೈಗಾರಿಕಾ ಪ್ರದೇಶಗಳಿವೆ. ಈ ಕೈಗಾರಿಕಾ ಪ್ರದೇಶಗಳಲ್ಲಿ ಮೂಲ ಸೌಕರ್ಯ ಇಲ್ಲ. ಈಗ ಸರ್ಕಾರ ಮತ್ತೊಂದು ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ಸರ್ಜಾಪುರ ಹೋಬಳಿಯ ಕೃಷಿ ಭೂಮಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಕ್ರಿಯೆ ನಡೆಸುತ್ತಿರುವುದು ಸರಿಯಲ್ಲ. ಇದನ್ನು ರೈತರು ಸಹಿಸುವುದಿಲ್ಲ. ಈ ಪ್ರಕ್ರಿಯೆಯನ್ನು ಕೈ ಬಿಡಬೇಕು ಇಲ್ಲವಾದಲ್ಲಿ ರೈತರ ಹೋರಾಟ ಮತ್ತಷ್ಟು ಉಗ್ರವಾಗುತ್ತದೆ’ ಎಂದರು.

ಸರ್ಜಾಪುರ ಹೋಬಳಿ ಶೇಕಡ 80ರಷ್ಟು ರೈತರು ಕೃಷಿ, ತೋಟಗಾರಿಕೆ, ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಕೃಷಿಯ ಮೂಲಕ ಜೀವನವನ್ನು ಕಟ್ಟಿಕೊಳ್ಳುತ್ತಿದ್ದಾರೆ. ಆದರೆ ಸರ್ಕಾರ ಕೈಗಾರಿಕೆ ಹೆಸರಿನಲ್ಲಿ ಹಸಿರು ಭೂಮಿ ಸ್ವಾಧೀನ ಒಪ್ಪಿಕೊಳ್ಳಲು ಆಗುವುದಿಲ್ಲ. ಸರ್ಕಾರ ರೈತರ ಪರವಾಗಿರಬೇಕು ಎಂದರು.


ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯಲ್ಲಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿ ಕೆಆರ್‌ಎಸ್ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಮಾತನಾಡಿದರು

ಈ ನೆಲ ಈ ಜಲ ಈ ಮಣ್ಣು ನಮ್ಮದು..

ಅಹೋರಾತ್ರಿ ಧರಣಿಯಲ್ಲಿ ರೈತ ಗೀತೆ ಮತ್ತು ಕ್ರಾಂತಿ ಗೀತೆಗಳನ್ನು ಹಾಡುವ ಮೂಲಕ ಮಹಿಳಾಪರ ಸಂಘಟನೆಗಳು ರೈತರಿಗೆ ಬೆಂಬಲ ಘೋಷಿಸಿದವು. ‘ಮಾತನಾಡಣ್ಣಯ್ಯ ಮಾತನಾಡು... ನಮ್ಮ ಭೂಮಿ ನಮ್ಮ ಹಕ್ಕು ಮಾತನಾಡು’ ಎಂಬ ಗೀತೆ ರೈತರಿಗೆ ಸ್ಫೂರ್ತಿ ನೀಡಿತು. ‘ಈ ನೆಲ ಈ ಜಲ ಈ ಮಣ್ಣು ನಮ್ಮದು’ ಎಂಬ ರೈತ ಮತ್ತು ಕ್ರಾಂತಿ ಗೀತೆಗಳು ಹಾಡುವ ಮೂಲಕ ರೈತರು ತಮ್ಮ ಹಕ್ಕು ಪ್ರತಿಪಾದಿಸಿದರು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲು • ಪಿ.ಜಿ ಮಾಲೀಕನ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸೋಲದೇವನಹಳ್ಳಿಯ ಎಂಇಐ ಲೇಔಟ್‌ನಲ್ಲಿ ನಡೆದ ಘಟನೆ
- ದೂರು ನೀಡಿರುವ ಯುವತಿ ಕೇರಳದವರು
- ಆರೋಪಿಯ ಪೂರ್ವಾಪರದ ಕುರಿತು ಹೆಚ್ಚಿನ ತನಿಖೆ

ಬೆಂಗಳೂರು: ನಗರದ ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ, ಅತ್ಯಾಚಾರವೆಸಗಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಪೇಯಿಂಗ್ ಗೆಸ್ಟ್ (ಪಿ.ಜಿ) ಮಾಲೀಕನನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯುವತಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಪಿ.ಜಿ ಮಾಲೀಕ ಅಶ್ರಫ್ (37) ಎಂಬಾತನನ್ನು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಸೋಲದೇವನಹಳ್ಳಿ ಬಳಿಯ ಎಂಇಐ ಲೇಔಟ್‌ನಲ್ಲಿ ಮಹಿಳೆಯರಿಗೆ ಮೂರು ವರ್ಷಗಳಿಂದ ಆರೋಪಿ ನಡೆಸುತ್ತಿರುವ ಪೇಯಿಂಗ್ ಗೆಸ್ಟ್‌ಗೆ ವಿದ್ಯಾರ್ಥಿನಿಯು 10 ದಿನಗಳ ಹಿಂದೆಯಷ್ಟೇ ಸೇರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಕೇರಳ ಮೂಲದ ವಿದ್ಯಾರ್ಥಿನಿ ನಗರದ ಖಾಸಗಿ ಕಾಲೇಜಿನಲ್ಲಿ ಬಿಸಿಎ ಓದುತ್ತಿದ್ದಾರೆ. ಶುಕ್ರವಾರ ತಡರಾತ್ರಿ ವಿದ್ಯಾರ್ಥಿನಿ ಪೇಯಿಂಗ್ ಗೆಸ್ಟ್ ಆವರಣದಲ್ಲಿ ಒಬ್ಬರೇ ಇದ್ದರು. ಈ ವೇಳೆ ಆರೋಪಿಯು ಸಂತ್ರಸ್ತೆಯನ್ನು ಕಾರಿನಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಸಂತ್ರಸ್ತೆಯು ಪ್ರತಿರೋಧ ತೋರಿದಾಗ ಆಕೆಯ ಮೇಲೆ ಹಲ್ಲೆ ನಡೆಸಿದ್ದಾನೆ. ಕೃತ್ಯದ ಬಳಿಕ ಅತ್ಯಾಚಾರದ ಸಂಗತಿಯನ್ನು ಬಹಿರಂಗ ಪಡಿಸದಂತೆ ಮತ್ತು ದೂರು ಕೊಡದಂತೆ ಕೊಲೆ ಬೆದರಿಕೆ ಹಾಕಿದ್ದ' ಎಂದು ಪೊಲೀಸರು ಹೇಳಿದ್ದಾರೆ.

ಅತ್ಯಾಚಾರದ ಬಳಿಕ ಆಕೆಯನ್ನು ಪೇಯಿಂಗ್ ಗೆಸ್ಟ್‌ಗೆ ವಾಪಸ್ ಕರೆದುಕೊಂಡು ಬಂದು ಬಿಟ್ಟಿದ್ದ. ಘಟನೆಯಿಂದ ಆಘಾತಗೊಂಡಿದ್ದ ಸಂತ್ರಸ್ತೆಯು ಸ್ನೇಹಿತೆಯರೊಂದಿಗೆ ಠಾಣೆಗೆ ಬಂದು ದೂರು ಕೊಟ್ಟಿದ್ದರು. ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ. ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಆತನನ್ನು ಜೈಲಿಗೆ ಕಳುಹಿಸಲಾಗಿದೆ. ಆತನ ಪೂರ್ವಾಪರದ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿ ದೂರು: ಘಟನೆ ಬಳಿಕ ಆರೋಪಿ ಪ್ರತಿ ದೂರು ನೀಡಿದ್ದು, 'ಸಂತ್ರಸ್ತೆಯ ಸ್ನೇಹಿತರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ತಿಳಿಸಿದ್ದಾನೆ.

ಪ್ರತ್ಯೇಕ ಅಪಘಾತ: ಮೂವರು ಸವಾರರ ಸಾವು


ರಂಗ ರೇವಣ್ಣ


ಪುರುಷೋತ್ತಮ್


ಧನಂಜಯ್

ಮಾಗಡಿ: ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗದಲ್ಲಿ ಭಾನುವಾರ ನಡೆದ ನಾಮಕರಣ ಸಮಾರಂಭದಲ್ಲಿ ಭಾಗವಹಿಸಿ ಸ್ವಗ್ರಾಮಗಳಿಗೆ ಮರಳುವಾಗ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಮೂವರು ದ್ವಿಚಕ್ರ ವಾಹನ ಸವಾರರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ತಾಳೆಕೆರೆ ಹ್ಯಾಂಡ್ ಪೋಸ್ಟ್ ಬಳಿ ರಾಷ್ಟ್ರೀಯ ಹೆದ್ದಾರಿ–75 ರಲ್ಲಿ ಅತಿ ವೇಗವಾಗಿ ಬಂದ ಸರ್ಕಾರಿ ಬಸ್ ಡಿಕ್ಕಿ ಹೊಡೆದು ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಮಾಗಡಿ ತಾಲ್ಲೂಕಿನ ಪುರ ಗ್ರಾಮದ ಕರಲಹಳ್ಳಿ ಬಸವಣ್ಣ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ರಂಗ ರೇವಣ್ಣ (68), ಅದೇ ಗ್ರಾಮದ ಪುರುಷೋತ್ತಮ್ (65) ಮೃತಪಟ್ಟಿದ್ದಾರೆ.

ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ದೇವಸ್ಥಾನದ ಬಳಿ ನಾಮಕರಣ ಕಾರ್ಯಕ್ರಮ ಮುಗಿಸಿಕೊಂಡು ಮಾಗಡಿಗೆ ತಾಳೆಕೆರೆ ಹ್ಯಾಂಡ್ ಪೋಸ್ಟ್ ಮಾರ್ಗವಾಗಿ ಬೈಕ್‌ನಲ್ಲಿ ಬರುವ ವೇಳೆ ಈ ಅಪಘಾತ ಸಂಭವಿಸಿದೆ.

ಹುಲಿಯೂರುದುರ್ಗ ಮಾರ್ಗವಾಗಿ ಚೌಡನಕುಪ್ಪೆ ಮೂಲಕ ಮಾಗಡಿಗೆ ಬರುವ ಬದಲು ಮಾರ್ಗ ತಪ್ಪಿ ಕುಣಿಗಲ್ ಮೂಲಕ ತಾಳೆಕೆರೆ ಹ್ಯಾಂಡ್ ಪೋಸ್ಟ್ ತಲುಪಿದ್ದರು. ಅಲ್ಲಿ ಮಾರ್ಗ ಬದಲಾಯಿಸುವ ವೇಳೆ ಅಪಘಾತ ಸಂಭವಿಸಿದೆ ಎಂದು ಸಂಬಂಧಿಕರು ತಿಳಿಸಿದ್ದಾರೆ.

ಇದೇ ಸಮಾರಂಭದಲ್ಲಿ ಭಾಗವಹಿಸಿ ಹುಲಿಯೂರುದುರ್ಗ-ಚೋಡನಕಪ್ಪೆ ಮಾರ್ಗವಾಗಿ ಸ್ವಗ್ರಾಮ ತಾಲ್ಲೂಕಿನ ತಗ್ಗಿಕುಪ್ಪೆ ಗ್ರಾಮಕ್ಕೆ ಮರಳುತ್ತಿದ್ದ ಕೆಇಬಿ ನೌಕರ ಧನಂಜಯ್ಯ (45) ಅವರ ಬೈಕ್‌ಗೆ ಬೆಸ್ತರಪಾಳ್ಯ ಬಳಿ ಕಾರು ಡಿಕ್ಕಿ ಹೊಡೆಯಿತು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆ ಸೇರಿಸುವ ಮಾರ್ಗ ಮಧ್ಯೆ ಸಾವಿಗೀಡಾಗಿದ್ದಾರೆ.

₹3 ಲಕ್ಷ ನಗದು ಕಳವು

ಪೀಣ್ಯದ 8ನೇ ಮೈಲಿಯಲ್ಲಿರುವ ನಂದಿನಿ ಪಾರ್ಲರ್ ರೋಲಿಂಗ್ ಶೆಟ್ಟರ್ ಬೀಗ ಒಡೆದು ₹3 ಲಕ್ಷ ನಗದು ಕಳ್ಳತನ ಮಾಡಲಾಗಿದೆ.

ವಿರೂಪಾಕ್ಷ ಎಂಬುವರು ಚೀಟಿ ವ್ಯವಹಾರದ ₹3 ಲಕ್ಷ ನಗದು ಅನ್ನು ತೆಗೆದುಕೊಂಡು ಬಂದು ಪಾರ್ಲರ್‌ನಲ್ಲಿ ಇಟ್ಟಿದ್ದರು. ಶನಿವಾರ ತಡರಾತ್ರಿ ಎರಡು ಬೈಕ್‌ನಲ್ಲಿ ಬಂದ ಅಪರಿಚಿತರು, ಬೀಗ ಮುರಿದು, ಹಣದೊಂದಿಗೆ ಪರಾರಿಯಾಗಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ನೆಲಮಂಗಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. 'ಹಣ ತಂದಿಟ್ಟಿರುವ ವಿಚಾರ ಗೊತ್ತಿರುವವರೇ ಈ ಕೃತ್ಯವೆಸಗಿರುವ ಸಾಧ್ಯತೆ ಇದೆ. ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸುತ್ತಿದ್ದು, ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದ್ದಾರೆ.

ಮಾದಕ ವಸ್ತು ವಿರುದ್ಧ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಸರಬರಾಜು ಹಾಗೂ ಮಾರಾಟದಲ್ಲಿ ಭಾಗಿಯಾಗಿದ್ದವರ ವಿರುದ್ಧ ನಗರದ ಉತ್ತರ ವಿಭಾಗದ 13 ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 180ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ತಪಾಸಣೆ ನಡೆಸಿದರು.

ಮಾದಕವಸ್ತು ಮಾರಾಟ ಮಾಡುತ್ತಿದ್ದ ಮೂವರ ವಿರುದ್ಧ ಮಲ್ಲೇಶ್ವರ, ಆರ್.ಟಿ.ನಗರ, ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಿ 2 ಕೆ.ಜಿ. 450 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಅಲ್ಲದೇ, ಮಾದಕ ವಸ್ತು ಸೇವನೆ ಮಾಡುತ್ತಿದ್ದ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಹಿಂದೆ ದಾಖಲಾಗಿರುವ ಪ್ರಕರಣಗಳಲ್ಲಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ವಾರಂಟ್, ಪ್ರೊಕ್ಲಮೇಷನ್ ಆಗಿರುವವರ ವಿರುದ್ಧ ಪರಿಶೀಲನೆ ನಡೆಸಿದ್ದರು. ಐವರು ಘೋಷಿತ ಅಪರಾಧಿಗಳು, ಇಬ್ಬರು ವಾರಂಟ್ ಆರೋಪಿತರನ್ನು ಪತ್ತೆ ಮಾಡಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256



'ರಸ್ತೆ ದುರಸ್ತಿಗೊಳಿಸಿ'

ಬಸಾಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ತುಂಬಾ ಹಾಳಾಗಿದೆ. ಬೆಂಗಳೂರು ಜಲಮಂಡಳಿ ಕೊಳವೆಗಳನ್ನು ಅಳವಡಿಸುವ ಸಲುವಾಗಿ ಈ ರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಮಳೆಯಾದರೆ ರಸ್ತೆಯು ಕೆಸರುಗದ್ದೆಯಾಗುತ್ತದೆ. ಕಳೆದ ಮೂರು ವರ್ಷಗಳಿಂದ ಇಲ್ಲಿನ ರಸ್ತೆಗೆ ಡಾಂಬರ್ ಹಾಕಿಲ್ಲ. ಇದರಿಂದ ಈ ಭಾಗದಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುತ್ತವೆ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಪ್ರವೀಣ್, ಬಸಾಪುರ



'ಬಾಗಿದ ಮರ ತೆರವುಗೊಳಿಸಿ'

ಹಂಪಿನಗರದ ರೆಂಕೋ ಬಡಾವಣೆಯ ಏಳನೇ ಮುಖ್ಯರಸ್ತೆಯ ರೇಖಾ ಸ್ಟೋರ್ ಹತ್ತಿರದ ಪಾದಚಾರಿ ಮಾರ್ಗದಲ್ಲಿರುವ ಮರವೊಂದು ಬಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಮರ ಬಿದ್ದು ಏನಾದರೂ ಅನಾಹುತ ಸಂಭವಿಸುವ ಮುನ್ನ ಇದನ್ನು ತೆರವುಗೊಳಿಸಬೇಕು. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ನಾಗರಾಜ್, ಹಂಪಿನಗರ



'ಅಗೆದ ರಸ್ತೆ ಸರಿಪಡಿಸಿ'

ಬೆನ್ಸನ್ ಟೌನ್‌ನ ಎಸ್.ಕೆ. ಗಾರ್ಡನ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ಕೈಗೊಂಡಿದ್ದು, ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಮಳೆ ಬಂದರೆ ರಸ್ತೆಯು ಕೆಸರುಗದ್ದೆಯಾಗಿ ಮಾರ್ಪಡುತ್ತದೆ. ಕಳೆದ ಮೂರು ವಾರಗಳಿಂದ ಇಲ್ಲಿ ಯಾವುದೇ ರೀತಿಯ ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ. ಇದರಿಂದ ಸ್ಥಳೀಯರ ಓಡಾಟಕ್ಕೂ ಸಮಸ್ಯೆ ಆಗಿದೆ. ಈ ಬಗ್ಗೆ ಬೆಂಗಳೂರು ಜಲಮಂಡಳಿಯ ಅಧಿಕಾರಿಗಳನ್ನು ಪ್ರಶ್ನಿಸಿದರೆ, 'ನಮ್ಮ ಕೆಲಸ ಮುಗಿದು ಹೋಗಿದೆ. ಅಗೆದಿರುವ ರಸ್ತೆಯನ್ನು ಬಿಬಿಎಂಪಿ ಸರಿಪಡಿಸಬೇಕು' ಎಂಬ ನೆಪ ಹೇಳುತ್ತಿದ್ದಾರೆ.

ಶೇಖರ್, ಬೆನ್ಸನ್ ಟೌನ್



'ರಸ್ತೆಯಲ್ಲಿಯೇ ನಿಲ್ಲುವ ಮಳೆ ನೀರು'

ಐಟಿಐ ಲೇಔಟ್ ಮಂಗಮ್ಮನಪಾಳ್ಯಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದಿದ್ದು, ಮಳೆ ಬಂದರೆ ನೀರೆಲ್ಲ ರಸ್ತೆಯ ಮಧ್ಯದಲ್ಲಿಯೇ ಶೇಖರಣೆ ಆಗುತ್ತಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯಲ್ಲಿ ಮಳೆ ನೀರು ನಿಲ್ಲುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ದುರಸ್ತಿ ಮಾಡಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಟಿ.ಎಸ್. ಶೇಷನ್, ಮಂಗಮ್ಮನಪಾಳ್ಯ

'ಬಸ್ ತಂಗುದಾಣ: ಆಸನದ ವ್ಯವಸ್ಥೆ ಸರಿಪಡಿಸಿ'



ಹನುಮಂತನಗರದ ಗಣೇಶ ಭವನ ಬಸ್ ತಂಗುದಾಣದಲ್ಲಿ ಕುಳಿತುಕೊಳ್ಳುವ ಬೆಂಚ್‌ಗಳಿಗೆ ಹಾನಿಯಾಗಿದೆ. ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇಲ್ಲಿಗೆ ಬರುತ್ತಾರೆ. ಆದರೆ, ಕುಳಿತುಕೊಳ್ಳಲು ಅಳವಡಿಸಿದ್ದ ಕಬ್ಬಿಣದ ಬೆಂಚ್‌ಗಳು ಸಂಪೂರ್ಣವಾಗಿ ಹಾಳಾಗಿವೆ. ಇದರ ಮೇಲೆ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಆಸನಗಳನ್ನು ಸರಿಪಡಿಸಬೇಕು.

ನೊಣವಿನಕೆರೆ ರಾಮಕೃಷ್ಣಯ್ಯ, ಹನುಮಂತನಗರ

ಪ್ರಶಸ್ತಿ ಪ್ರದಾನ...

ಪ್ರಜಾವಾಣಿ ಚಿತ್ರ



ಮಲೆನಾಡು ಮಿತ್ರ ವೃಂದ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಯಕಿ ಬಿ.ಕೆ. ಸುಮಿತ್ರಾ ಅವರಿಗೆ '2025ನೇ ಸಾಲಿನ ಮಲೆನಾಡು ಮಿತ್ರ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ವೃಂದದ ಅಧ್ಯಕ್ಷ ಪ್ರದೀಪ್ ಹೆಗ್ಗೋಡು, ರಿತುಪರ್ಣ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕರಾದ ಕೆ. ಗೋಪಾಲಯ್ಯ, ಆರಗ ಜ್ಞಾನೇಂದ್ರ ಉಪಸ್ಥಿತರಿದ್ದರು

ಹೈದರಾಬಾದ್ ರೇಸ್

ಡ್ಯಾಪರ್ ಲುಕ್ ಗೆಲ್ಲುವ ನಿರೀಕ್ಷೆ

ಪಿ.ಜಿ.ರೆಡ್ಡಿ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡ್ಯಾಪರ್ ಲುಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:35ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗಸ್ಟೋಸ್ ಬೇಬಿ 7, ರಿಯಲ್ ತಲೈವ 3, ಸ್ಟಾರ್ ಆಫ್ ಒಪೆರಾ 10
2ನೇ ರೇಸ್: ದುಬೈ ಟಚ್ 1, ಡ್ಯಾಷಿಂಗ್ ಚಾರ್ಮ್ 3, ಹರ್ ಲೇಡಿಷಿಪ್ 5
3ನೇ ರೇಸ್: ಟೂರಿಯಾ 11, ಮೂನ್‌ಲೈಟ್ ರೋಸ್ 9, ಆನ್‌ಸ್ಲಾಟ್ 2
4ನೇ ರೇಸ್: ಬಲಹಕ 5, ಆಲ್ವೇಸ್ ಸ್ಪೆಷಲ್ 1, ಗೋಲ್ಡನ್ ಇನ್ಜಿಯೊ 3
5ನೇ ರೇಸ್: ಡ್ಯಾಪರ್ ಲುಕ್ 2 , ಗ್ಲೋರಿಯಾ 3, ಕಾರ್ಟೆ ಮೆಡೆರ 7
6ನೇ ರೇಸ್: ಪೆಸಿಫಿಕ್ ಹೈಟ್ಸ್ 3, ಬೋಲ್ಡ್ ಬ್ಯೂಟಿ 4, ಜೂಜಾ 5
7ನೇ ರೇಸ್: ವಾಕಿಂಗ್ ಥಂಡರ್ 1, ಎನ್‌ಆರ್‌ಐ ಟ್ರಿಪಲ್ ಪವರ್ 7, ಬೆವರ್ಲಿ 3
8ನೇ ರೇಸ್: ಇಂಪೀರಿಯಾ 3, ಡೆಕಾಯ್ 7, ಅನ್ನಿಲೇಟರ್ 10
9ನೇ ರೇಸ್: ಫ್ಲಾಶಿಂಗ್ ಮೆಮೋರೀಸ್ 2, ಸಿಲ್ವರ್ ಆರೋ 10, ಬ್ಲೂ ಬ್ರಿಗೇಡ್ 9

ಉತ್ತಮ ಬೆಟ್: ಗಸ್ಟೋಸ್ ಬೇಬಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	2,3,4	4,5,6	7,8,9

ನಗರದಲ್ಲಿ ಇಂದು


ವಚನ ಶ್ರಾವಣ–2025: ವಚನ ಗಾಯನ: ಚೇತನಾ ಮುಧೋಳ್, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ರು.ಫ. ದೇಸಾಯಿ, ಅಧ್ಯಕ್ಷತೆ: ನೇತ್ರಾಮಣಿ ವಿ., ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಶೇಷಾದ್ರಿಪುರಂ ಇಂಗ್ಲಿಷ್ ಹೈಸ್ಕೂಲ್, ಕುಮಾರಕೃಪಾ ಪಶ್ಚಿಮ, ಬೆಳಿಗ್ಗೆ 9.30

ವಿನ್ಯಾಸ ವೈಭವ–2 ಫ್ಯಾಶನ್ ಶೋ: ಅತಿಥಿಗಳು: ಕೆ.ಆರ್. ಜಲಜಾ, ವಿ.ಆರ್. ದೇವರಾಜ್, ವಿದ್ಯಾ ವಿವೇಕ್, ಪ್ರತಿಭಾ ಎಸ್., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಫ್ಯಾಶನ್ ಡಿಸೈನ್ ವಿಭಾಗ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

'ಶ್ರೀರಾಘವೇಂದ್ರ ವಿಜಯ ವೈಭವ' ಪ್ರವಚನ: ವಿನಾಯಕಾಚಾರ್ಯ ನಾಮಣ್ಣವರ, ಸ್ಥಳ: ಅಖಿಲ ಭಾರತ ಮಾಧ್ವ ಮಹಾ ಮಂಡಳ, ರಾಘವೇಂದ್ರ ಸ್ವಾಮಿ ಮಠ, ಕೋಣನಕುಂಟೆ, ಸಂಜೆ 6ರಿಂದ

ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ, ಪುನರ್ ಮನನ ಕಾರ್ಯಕ್ರಮ: ಅತಿಥಿಗಳು: ಕೆ.ಎ. ದಯಾನಂದ, ಕೆ.ಆರ್. ನಿರ್ಮಲ್ ಕುಮಾರ್, ಎನ್.ಎಸ್. ವಿಜಯ, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಎ.ಜಿ. ನಟರಾಜ್, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 6

ಶಿವಶರಣ ಜೇಡರ ದಾಸಿಮಯ್ಯ ಜಯಂತಿ: ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ದಯಾನಂದ ಪಾಟೀಲ, ಸಿಂ.ರಾ. ಹೊನ್ನಲಿಂಗಯ್ಯ, ಆರ್. ಚನ್ನಕೇಶವಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ರಾಜರಾಜೇಶ್ವರಿ ಘಟಕ, ಕದಳಿ ಮಹಿಳಾ ವೇದಿಕೆ, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಅನ್ನಪೂರ್ಣೇಶ್ವರಿ ನಗರ, ಸಂಜೆ 5.30


ಎಲ್.ಎನ್. ಮುಕುಂದರಾಜ್

'ಯುದ್ಧದಲ್ಲಿ ರಷ್ಯಾಗೆ ಭಾರತದ ಹಣಕಾಸು'

ವಾಷಿಂಗ್ಟನ್ (ರಾಯಿಟರ್ಸ್/ಪಿಟಿಐ): ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ಭಾರತವು ಪರಿಣಾಮಕಾರಿಯಾಗಿ ಹಣಕಾಸು ಒದಗಿಸುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅತ್ಯಂತ ನಿಕಟವರ್ತಿ ಆರೋಪಿಸಿದ್ದಾರೆ.


ಡೊನಾಲ್ಡ್ ಟ್ರಂಪ್

ಭಾರತವು ಮಾಸ್ಕೊದಿಂದ ತೈಲ ಖರೀದಿಸುವ ಮೂಲಕ ರಷ್ಯಾಕ್ಕೆ ಹಣಕಾಸು ಒದಗಿಸುತ್ತಿದೆ ಎಂದು ಅವರು ಭಾನುವಾರ ದೂರಿದ್ದಾರೆ.

'ರಷ್ಯಾದಿಂದ ತೈಲ ಖರೀದಿ ವಿಷಯದಲ್ಲಿ ಭಾರತವು ಚೀನಾದ ಜತೆಗೆ ಸಂಬಂಧ ಹೊಂದಿದೆ ಎಂಬುದು ಆಘಾತಕಾರಿ ಮತ್ತು ಆಶ್ಚರ್ಯದ ಸಂಗತಿ' ಎಂದು ಶ್ವೇತಭವನದ ಉಪ ಮುಖ್ಯಸ್ಥ ಮತ್ತು ಟ್ರಂಪ್ ಅವರ ನಿಕಟವರ್ತಿಯೂ ಆದ ಸ್ಟೀಫನ್ ಮಿಲ್ಲರ್ 'ಫಾಕ್ಸ್ ನ್ಯೂಸ್'ಗೆ ತಿಳಿಸಿದ್ದಾರೆ.

'ರಷ್ಯಾದಿಂದ ತೈಲ ಖರೀದಿ ಮಾಡುವುದನ್ನು ಭಾರತ ಮುಂದುವರಿಸುವುದು ಸ್ವೀಕಾರಾರ್ಹವಲ್ಲ ಎಂದು ಟ್ರಂಪ್ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ' ಎಂದೂ ಅವರು ಹೇಳಿದ್ದಾರೆ. ಮಿಲ್ಲರ್ ಅವರ ಹೇಳಿಕೆ ಕುರಿತು, ವಾಷಿಂಗ್ಟನ್‌ನಲ್ಲಿ ಇರುವ ಭಾರತೀಯ ರಾಯಭಾರ ಕಚೇರಿಯಿಂದ ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ.

ಯುದ್ಧ ನಿಲ್ಲಿಸಿದ್ದು ನಾನೇ: ಪುನರುಚ್ಚಾರ

'ಭಾರತ ಮತ್ತು ಪಾಕಿಸ್ತಾನ ನಡುವಿನ ಇತ್ತೀಚಿನ ಸೇನಾ ಸಂಘರ್ಷವನ್ನು ನಿಲ್ಲಿಸಿದ್ದು ನಾವೇ' ಎಂದು ಡೊನಾಲ್ಡ್ ಟ್ರಂಪ್ ಭಾನುವಾರ ಪುನರುಚ್ಚರಿಸಿದರು.

ಸಂಘರ್ಷದ ವೇಳೆ, ರಾತ್ರಿ ದೀರ್ಘಕಾಲ ವಾಷಿಂಗ್ಟನ್ ಮಧ್ಯಸ್ಥಿಕೆ ವಹಿಸಿ ನಡೆಸಿದ ಮಾತುಕತೆಯ ಫಲವಾಗಿ ಉಭಯ ದೇಶಗಳು ತಕ್ಷಣ, ಪೂರ್ಣ ಪ್ರಮಾಣದ ಕದನ ವಿರಾಮಕ್ಕೆ ಸಮ್ಮತಿ ಸೂಚಿಸಿದವು ಎಂದು ಟ್ರಂಪ್ ಹೇಳಿದರು. ಮೇ 10ರಿಂದ ಟ್ರಂಪ್ ಅವರು ಈ ಹೇಳಿಕೆಯನ್ನು ಹಲವು ಬಾರಿ ಪುನರುಚ್ಚಾರ ಮಾಡಿದ್ದಾರೆ.

ಬಾಲಕಿ ಅತ್ಯಾಚಾರ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ಗ್ರಾಮವೊಂದರ 14 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ಮೂವರನ್ನು ಕೋಲಾರ ಮಹಿಳಾ ಠಾಣಾ ಪೊಲೀಸರು ಬಂಧಿಸಿದ್ದಾರೆ.

ರಾಹುಲ್ (22), ನಾಗೇಶ್ (37) ಹಾಗೂ ಪುನೀತ್ ಕುಮಾರ್ (27) ಬಂಧಿತ ಆರೋಪಿಗಳು ಎಂಬುದು ಗೊತ್ತಾಗಿದೆ. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗೆ ಶೋಧ ನಡೆಸುತ್ತಿದ್ದಾರೆ. ಸಂತ್ರಸ್ತೆಯ ಹೇಳಿಕೆ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಗಳು ಪ್ರತ್ಯೇಕ ಸಮಯದಲ್ಲಿ ಅತ್ಯಾಚಾರ ನಡೆಸಿದ್ದರು ಎನ್ನಲಾಗಿದೆ.

ಕಸಾಪಕ್ಕೆ ಆಡಳಿತಾಧಿಕಾರಿ ನೇಮಿಸುವಂತೆ 'ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ' ಸಮಿತಿ ಒತ್ತಾಯ

ಮಹೇಶ್ ಜೋಶಿ ಅಮಾನತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಅಮಾನತು ಮಾಡಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು ಎಂದು 'ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ' ಸಮಿತಿ ಆಗ್ರಹಿಸಿದೆ.

ಸಮಿತಿಯು ಭಾನುವಾರ ಹಮ್ಮಿಕೊಂಡಿದ್ದ ಜಾಗೃತಿ ಸಮಾವೇಶದಲ್ಲಿ ಈ ಸಂಬಂಧ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

ಕಸಾಪ ಅಧ್ಯಕ್ಷರ ವಿರುದ್ಧ ತನಿಖೆ ಮುಗಿಯುವವರೆಗೆ ವಾರ್ಷಿಕ ಸಭೆ ನಡೆಸದಂತೆ ನಿರ್ಬಂಧ ಹೇರಬೇಕು. ಸಹಕಾರ ಇಲಾಖೆ ಆರಂಭಿಸಿರುವ ತನಿಖೆಯನ್ನು ತ್ವರಿತಗೊಳಿಸಬೇಕು. ಕಸಾಪ ದಾಖಲೆಗಳನ್ನು ತಕ್ಷಣವೇ ವಶಕ್ಕೆ ಪಡೆಯಬೇಕು. ಆರೋಪಗಳ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು ಎಂಬುದು ಇತರ ನಿರ್ಣಯಗಳಾಗಿವೆ.

ಸಾಮಾಜಿಕ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಮಾತನಾಡಿ, 'ಸರ್ವಾಧಿಕಾರಿ ಧೋರಣೆ ತೋರುತ್ತಿರುವ ಮಹೇಶ ಜೋಶಿ ನೈತಿಕ ಜವಾಬ್ದಾರಿ ಹೊತ್ತು ರಾಜೀನಾಮೆ ನೀಡಿ, ಕನ್ನಡಿಗರ ಬಳಿ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು.

ಜೋಶಿ ವರ್ತನೆಯ ಹಿಂದೆ ರಾಜಕೀಯ ಷಡ್ಯಂತ್ರ ಹಾಗೂ ಜನವಿರೋಧಿ ಆರ್‌ಎಸ್‌ಎಸ್ ಕೈವಾಡ ಇದೆ. 2000ನೇ ಇಸವಿಯ ನಂತರ ಸಾಹಿತ್ಯ ಪರಿಷತ್ತು ಸಾಹಿತಿಗಳ, ಸೂಕ್ಷ್ಮ ಸಂವೇದನೆಯುಳ್ಳವರ ಕೈಯಲ್ಲಿ ಉಳಿದಿಲ್ಲ. ಬಂಡವಾಳಶಾಹಿಗಳ ಕೈಗೆ ಹೋಗಿದೆ. ಇಂಥ ಸಂದರ್ಭದಲ್ಲಿಯೇ ಪ್ರತಿ ಜಿಲ್ಲೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಹಣ ಹಂಚಿ, ಜೋಶಿಯನ್ನು ಗೆಲ್ಲಿಸಿದ್ದಾರೆ ಎಂದು ಆರೋಪಿಸಿದರು.

ರೈತ ನಾಯಕಿ ಸುನಂದಾ ಜಯರಾಂ ಮಾತನಾಡಿ, 'ಅಸಂಬದ್ಧವಾಗಿ, ಕಾನೂನು ಬಾಹಿರವಾಗಿ ಕಸಾಪದಲ್ಲಿ ಆಗುವ ಬೈಲಾ ತಿದ್ದುಪಡಿ ನಿಲ್ಲಿಸಬೇಕು. ಪರಿಷತ್ತಿನ ಸರ್ವ ಸದಸ್ಯರು ಬೈಲಾ ತಿದ್ದುಪಡಿ ವಿರುದ್ಧ ಗಟ್ಟಿಯಾಗಿ ನಿಲ್ಲಬೇಕು' ಎಂದು ಆಗ್ರಹಿಸಿದರು.

ಎಸ್.ಜಿ. ಸಿದ್ದರಾಮಯ್ಯ, ಹಂಪ ನಾಗರಾಜಯ್ಯ, ಮಾವಳ್ಳಿ ಶಂಕರ್, ಕೆ.ಎಸ್. ವಿಮಲಾ, ಜಾಣಗೆರೆ ವೆಂಕಟರಾಮಯ್ಯ, ಬಿ. ಜಯಪ್ರಕಾಶ್ ಗೌಡ, ಬಂಜಗೆರೆ ಜಯಪ್ರಕಾಶ್, ಮೀರಾ ಶಿವಲಿಂಗಯ್ಯ, ಸಾ.ರಾ. ಗೋವಿಂದು, ಶಿವರಾಮೇಗೌಡ, ವಸುಂಧರಾ ಭೂಪತಿ, ಆರ್.ಜಿ. ಹಳ್ಳಿ ನಾಗರಾಜ್, ಸಿ.ಕೆ. ರಾಮೇಗೌಡ ಸೇರಿದಂತೆ ಸಮಿತಿಯ ಎಲ್ಲ ಸಂಚಾಲಕರು ಸರ್ಕಾರಕ್ಕೆ ಕಳುಹಿಸುವ ನಿರ್ಣಯಕ್ಕೆ ಸಹಿ ಹಾಕಿದರು.




ಕನ್ನಡ ನಾಡು ನುಡಿ ಜಾಗೃತಿ ಸಮಿತಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ' ಜಾಗೃತಿ ಸಮಾವೇಶದಲ್ಲಿ ಕೆ.ನೀಲಾ, ಮೀನಾಕ್ಷಿ ಬಾಳಿ, ಮೀರಾ ಶಿವಲಿಂಗಯ್ಯ,ಕೆ.ಎಸ್ ವಿಮಲಾ, ಡಾ.ವಸುಂಧರಾ ಭೂಪತಿ, ಸುನಂದಾ ಜಯರಾಂ, ಭಾರತಿ, ಅಕ್ಷತಾ ಹುಂಚದಕಟ್ಟೆ, ಮಂಜುಳಾ ಶಿವಾನಂದ ಭಾಗವಹಿಸಿದ್ದರು — ಪ್ರಜಾವಾಣಿ ಚಿತ್ರ

'ನಿವೃತ್ತ ನ್ಯಾಯಮೂರ್ತಿಯವರನ್ನು ನೇಮಿಸಿ'

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ದುರಾಡಳಿತ, ಆರ್ಥಿಕ ಅಶಿಸ್ತು ಹಾಗೂ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನ ಕಾರ್ಯದರ್ಶಿಗಳು 6 ಉನ್ನತಾಧಿಕಾರಿಗಳ ತನಿಖಾ ತಂಡವನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಈ ತನಿಖಾ ತಂಡಕ್ಕೆ ಮಾರ್ಗದರ್ಶನ ಮಾಡಲು ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರನ್ನು ನೇಮಿಸಬೇಕು ಎಂದು ಕನ್ನಡ ನಾಡು–ನುಡಿ ಜಾಗೃತಿ ಸಮಿತಿಯ ಸಂಚಾಲಕ ಜಾಣಗೆರೆ ವೆಂಕಟರಾಮಯ್ಯ ಒತ್ತಾಯಿಸಿದರು.

ಖ್ಯಾತಿಗಿಂತ ಹೆಚ್ಚಾಗಿ ನಿಮ್ಮ ನಡತೆಯ ಬಗ್ಗೆ ಕಾಳಜಿ ವಹಿಸಿ. ಏಕೆಂದರೆ, ನಡತೆಯಲ್ಲಿ ನಿಮ್ಮ ನಿಜವಾದ ವ್ಯಕ್ತಿತ್ವ ಬಿಂಬಿತವಾಗುತ್ತದೆ. ಆದರೆ ಖ್ಯಾತಿಯು ನಿಮ್ಮ ಬಗ್ಗೆ ಇತರರು ಹೊಂದಿರುವ ಭಾವನೆಯನ್ನಷ್ಟೇ ಪ್ರತಿಬಿಂಬಿಸುತ್ತದೆ.
-ಜಾನ್ ವುಡನ್



ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳಲ್ಲಿ ಇರಲಿದೆ 'ಶುಗರ್ ಬೋರ್ಡ್' 'ಆಯಿಲ್ ಬೋರ್ಡ್'

ಆರೋಗ್ಯ ಜಾಗೃತಿ ಈಗ ಶಾಲೆಯ ಸರದಿ





• ಮಾನಸಾ ಹೆಗಡೆ

ನಮ್ಮ ದೈನಂದಿನ ಆಹಾರ ಪದ್ಧತಿಯು ನಮ್ಮ ಆರೋಗ್ಯಕ್ಕೆ ಹಿಡಿದ ಕನ್ನಡಿಯಂತೆ. ದೇಹ ಹಾಗೂ ಮನಸ್ಸಿಗೆ ಹಿತ ನೀಡುವ ಸಮತೋಲಿತ ಆಹಾರ ಪದಾರ್ಥಗಳ ಸೇವನೆಯು ನಮ್ಮ ಶರೀರವನ್ನು ಕಾಯುತ್ತದೆ. ಈ ದಿಸೆಯಲ್ಲಿ, ಮಕ್ಕಳು ಹಾಗೂ ಪಾಲಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ದೇಶದ ಭವಿಷ್ಯಕ್ಕೆ ಪೂರಕವಾದ ನಡೆ.

ಪ್ರಸ್ತುತ ಮಕ್ಕಳಲ್ಲಿ ಮಧುಮೇಹ, ತೂಕ ಹೆಚ್ಚಳದಂತಹ ದೀರ್ಘಕಾಲೀನ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಗಂಭೀರವಾಗಿ ಪರಿಗಣಿಸಿದೆ. ಆರೋಗ್ಯ ಜಾಗೃತಿ ಮೂಡಿಸಲು ಅದು ಒಂದು ಹೆಜ್ಜೆ ಮುಂದೆ ಇಟ್ಟಿದೆ. ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳಲ್ಲಿ 'ಶುಗರ್ ಬೋರ್ಡ್' ಸ್ಥಾಪಿಸಲು ಸೂಚನೆ ನೀಡಿದೆ. ಮುಖ್ಯವಾಗಿ, ಸಕ್ಕರೆ ಕಾಯಿಲೆಯಿಂದ ಮಕ್ಕಳನ್ನು ದೂರವಿರಿಸುವ ಉದ್ದೇಶದಿಂದ ಇತ್ತೀಚೆಗೆ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪ್ರತಿನಿತ್ಯ ಎಷ್ಟು ಪ್ರಮಾಣದಲ್ಲಿ ಸಕ್ಕರೆಯ ಅಂಶವಿರುವ ಆಹಾರ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಹಿತಕರ ಎಂಬುದನ್ನು ಮಂಡಳಿಯು ಉಲ್ಲೇಖಿಸಿದೆ.

'ಈ ಆತಂಕಕಾರಿ ಬೆಳವಣಿಗೆಗೆ, ಹೆಚ್ಚಿನ ಪ್ರಮಾಣದ ಸಕ್ಕರೆಯ ಅಂಶವಿರುವ ಆಹಾರ ಪದಾರ್ಥಗಳ ಸೇವನೆ ಪ್ರಮುಖ ಕಾರಣವಾಗಿದೆ. ಶಾಲೆಯ ಆವರಣದಲ್ಲಿ ಸಿಹಿತಿನಿಸು, ಪಾನೀಯಗಳು ಮತ್ತು ಸಂಸ್ಕರಿಸಿದ ಆಹಾರ ಪದಾರ್ಥಗಳು ಸುಲಭವಾಗಿ ಲಭ್ಯವಾಗುತ್ತಿವೆ. ಸಕ್ಕರೆಯುಕ್ತ ಪದಾರ್ಥಗಳನ್ನು ಅತಿಯಾಗಿ ತಿನ್ನುವುದು ಮಧುಮೇಹದ ಅಪಾಯವನ್ನಷ್ಟೇ ಅಲ್ಲ, ಬೊಜ್ಜು, ಹಲ್ಲಿನ ಸಮಸ್ಯೆ ಮತ್ತು ಇತರ ಚಯಾಪಚಯ ಸಮಸ್ಯೆಗಳಿಗೂ ಕಾರಣವಾಗುತ್ತದೆ. ಅಂತಿಮವಾಗಿ ಇದು ಮಕ್ಕಳ ಆರೋಗ್ಯ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ದೀರ್ಘಕಾಲೀನ ಪರಿಣಾಮ ಬೀರುತ್ತದೆ' ಎಂದು ಪ್ರಾಂಶುಪಾಲರಿಗೆ ಬರೆದಿರುವ ಪತ್ರದಲ್ಲಿ ಸಿಬಿಎಸ್‌ಇ ಅಭಿಪ್ರಾಯಪಟ್ಟಿದೆ.

ನಾವು ಶರ್ಕರಪಿಷ್ಟವನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವ ಅಕ್ಕಿ, ಗೋಧಿ, ರಾಗಿ, ಜೋಳದಂತಹವನ್ನು ಪ್ರಮುಖ ಆಹಾರ ಪದಾರ್ಥಗಳಾಗಿ ಸೇವಿಸುತ್ತೇವೆ. ಇಷ್ಟು ಸಾಲದೆಂಬಂತೆ ಬಿಸ್ಕತ್ತು, ಚಾಕೊಲೇಟ್, ತಂಪು ಪಾನೀಯದಂತಹವುಗಳಿಂದ ಇನ್ನಷ್ಟು ಸಕ್ಕರೆಯ ಅಂಶ ನಮ್ಮ ದೇಹವನ್ನು ಸೇರುತ್ತದೆ. ಇದನ್ನೆಲ್ಲ ಕರಗಿಸಲು ಸಾಧ್ಯವಾಗುವಂತಹ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ಆದರೆ ನಾವೀಗ ಬಹುತೇಕ ನಿಷ್ಕ್ರಿಯ ಜೀವನಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಹೀಗಾಗಿ, ಪ್ರಮುಖ ಆಹಾರವಾಗಿ ಸೇವಿಸಿದ ಪದಾರ್ಥಗಳಲ್ಲಿ ಇರುವ ಸಕ್ಕರೆ ಅಂಶವೇ ವ್ಯಯವಾಗದೆ ಸಂಗ್ರಹವಾಗಿರುವಾಗ, ಇನ್ನು ದೇಹವನ್ನು ಸೇರುವ ಈ ಹೆಚ್ಚಿನ ಸಕ್ಕರೆ ಅಂಶ ಏನಾಗಬೇಕು?! ಅದು ತೂಕ ಹೆಚ್ಚಳ, ಬೊಜ್ಜಿನಂತಹ ಸಮಸ್ಯೆಗಳಿಗೆ ಎಡೆ ಮಾಡಿಕೊಡುತ್ತದೆ. ಆದ್ದರಿಂದ, ನೈಸರ್ಗಿಕವಾಗಿ ಸಕ್ಕರೆ ಅಂಶವನ್ನು ದೇಹಕ್ಕೆ ಸೇರಿಸುವಂತಹ ಹಣ್ಣು, ತರಕಾರಿಯನ್ನು ಹೆಚ್ಚಾಗಿ ಸೇವಿಸಬೇಕು. ಅದು ತನ್ನಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳನ್ನೂ ಇನ್ನಿತರ ಪೋಷಕಾಂಶಗಳನ್ನೂ ಒದಗಿಸಿ ಶರೀರವನ್ನು ಪೋಷಿಸುತ್ತದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು, ಈ ಮೂಲಕ ಮನಸ್ಸು ಉಲ್ಲಸಿತವಾಗಿರಲು ಸಹಾಯ ಮಾಡುತ್ತದೆ. ಹೆಚ್ಚು ಶಕ್ತಿಯನ್ನು ವ್ಯಯಿಸುವ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ, ಸಕ್ಕರೆ ಅಂಶವು ಎಲ್ಲ ಕೋಶಗಳಿಗೂ ಅಡೆತಡೆ ಇಲ್ಲದೇ ತಲುಪಿ ಉತ್ತಮ ಆರೋಗ್ಯ ನಮ್ಮದಾಗುತ್ತದೆ.

ಸಿಬಿಎಸ್‌ಇ ಜಾರಿಗೆ ತಂದಿರುವ ಇನ್ನೊಂದು ಹೊಸ ವಿಧಾನ 'ಆಯಿಲ್ ಬೋರ್ಡ್'. ಇದು ಪ್ರಮುಖವಾಗಿ, ಮಕ್ಕಳಲ್ಲಿ ಹೆಚ್ಚುತ್ತಿರುವ ಬೊಜ್ಜಿನ ಸಮಸ್ಯೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ. ಕರಿದ ಪದಾರ್ಥ, ಪ್ಯಾಕ್ಡ್ ಫುಡ್ ಸೇವಿಸುವುದರಿಂದ ಕೆಟ್ಟ ಕೊಬ್ಬು ದೇಹವನ್ನು ಸೇರುತ್ತದೆ. ಒಳ್ಳೆಯ ಕೊಬ್ಬು ನೈಸರ್ಗಿಕವಾಗಿ ಸೇರಿದರೆ ತೊಂದರೆಯಿಲ್ಲ. ಆದರೆ ಮಕ್ಕಳು ಬೇಕರಿಯಲ್ಲಿ ಸಿಗುವ ಬಣ್ಣಬಣ್ಣದ ತಿನಿಸು, ಪ್ಯಾಕ್ ಆದ ತಿಂಡಿ, ಚಿಪ್ಸ್‌ನಂತಹ ತಿನಿಸುಗಳಿಗೆ ಬಹುಬೇಗ ಆಕರ್ಷಿತರಾಗುತ್ತಾರೆ. ಅಂತಹವುಗಳಿಂದ ಮಕ್ಕಳ ಮನಸ್ಸನ್ನು ಅವಶ್ಯವಾಗಿ ಬೇರೆಡೆ ತಿರುಗಿಸಿ ಅವರಲ್ಲಿ ಜಾಗೃತಿ ಮೂಡಿಸುವಂತಹ ಪ್ರಯತ್ನ ಆಗಬೇಕಾಗಿದೆ.

ಶಾಲಾ ಕ್ಯಾಂಟೀನ್‌ಗಳು, ಮಕ್ಕಳು ಹೆಚ್ಚಾಗಿ ಓಡಾಡುವ ಕಾರಿಡಾರ್‌ಗಳು, ಸಿಬ್ಬಂದಿ ಕೊಠಡಿಯಂತಹ ಮುಖ್ಯ ಜಾಗಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಭಿತ್ತಿಪತ್ರಗಳನ್ನು ಅಂಟಿಸಲು ಯೋಜಿಸಲಾಗಿದೆ. ಶಾಲಾ ಕ್ಯಾಂಟೀನ್‌ಗಳು ಇನ್ನು ಮುಂದೆ ನೈಸರ್ಗಿಕ ಆಹಾರಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಪಲ್ಯ, ಸಲಾಡ್, ಮೊಳಕೆ ಕಾಳುಗಳನ್ನು ಸೇವಿಸಲು ಮಕ್ಕಳನ್ನು ಪ್ರಚೋದಿಸಬೇಕಾಗುತ್ತದೆ. ಇಂತಹ ಪದಾರ್ಥಗಳನ್ನು ರುಚಿರುಚಿಯಾಗಿ ಮಕ್ಕಳು ಇಷ್ಟಪಟ್ಟು ತಿನ್ನುವಂತೆ ಮಾಡಲು ಸಾಧ್ಯವಿದೆ. ಕೆಲವು ಪದಾರ್ಥಗಳನ್ನು ಕರಿಯದೇ ಹುರಿದು ತಯಾರಿಸುವ ವಿಧಾನವನ್ನು ಅನುಸರಿಸಬಹುದಾಗಿದೆ. ಈ ರೀತಿಯ ಉಪಾಯಗಳು ಹಲವಾರು ಇರುತ್ತವೆ.

ರುಚಿ-ಶುಚಿಯಾದ ಹೊಸ ಹೊಸ ಬಗೆಯ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ನಮ್ಮ ಅಮ್ಮಂದಿರು ಯಾವುದಕ್ಕೂ ಕಡಿಮೆಯಿಲ್ಲ. ಅದಕ್ಕೆ ತಕ್ಕಂತೆ ಅವರು ಆರೋಗ್ಯ ಜಾಗೃತಿಯನ್ನೂ ಮೂಡಿಸಿಕೊಂಡರೆ ಸ್ವಸ್ಥ ಸಮಾಜ ನಿರ್ಮಾಣದತ್ತ ಬಲವಾದ ಹೆಜ್ಜೆ ಇಟ್ಟಂತೆಯೇ ಸರಿ. ಈ ದಿಸೆಯಲ್ಲಿ ಸಿಬಿಎಸ್‌ಇ ಉಪಕ್ರಮದೊಂದಿಗೆ ಕೈಜೋಡಿಸಿ, ಮಕ್ಕಳ ಆರೋಗ್ಯ ಕಾಯ್ದುಕೊಳ್ಳುವಲ್ಲಿ ಕಾರ್ಯ ಪ್ರವೃತ್ತರಾಗೋಣ.

ಮುಂಗೋಪಕ್ಕೆ ಮದ್ದೇನು?



ಸಮಾಧಾನ
ಡಾ. ಡಿ.ಎಂ. ಹೆಗಡೆ
ಆಪ್ತಸಮಾಲೋಚಕ

• ನಮಗೆ ಒಬ್ಬನೇ ಮಗ. ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾನೆ. ಅವನಿಗೆ ವಿಪರೀತ ಸಿಟ್ಟು, ಮುಂಗೋಪಿ. ಶ್ರದ್ಧೆಯಿಂದ ಓದಿಕೋ ಎಂದರೆ ಸಾಕು, ಸಿಟ್ಟಿಗೇಳುತ್ತಾನೆ. ಸಿಟ್ಟು ಬಂದಾಗ ಕೈಗೆ ಸಿಕ್ಕಿದ್ದನ್ನೆಲ್ಲ ಎತ್ತಿ ಎಸೆಯುತ್ತಾನೆ. ಇದಕ್ಕೆ ಕಾರಣವೇನು? ಸರಿ ಮಾಡುವುದು ಹೇಗೆ?

ಅನುಪಮಾ ಕಾಮತ್, ಬೆಂಗಳೂರು

ನಿಮ್ಮ ಮಗ ಯಾವಾಗಿನಿಂದ ಹೀಗಾಗಿದ್ದಾನೆ, ಮನೆಯಲ್ಲಿ ಎಷ್ಟು ಜನ ಇದ್ದೀರಿ ಎಂಬಂಥ ವಿವರಗಳು ಇದ್ದಿದ್ದರೆ ಅನುಕೂಲವಾಗುತ್ತಿತ್ತು, ಇರಲಿ. ಹದಿಹರೆಯದಲ್ಲಿ ಆಗುವ ದೈಹಿಕ, ಮಾನಸಿಕ ಬದಲಾವಣೆಗಳು ಮಗುವಿಗೆ ಹೊಸತು. ಇನ್ನು, ಒಂದೇ ಮಗುವಿರುವ ಮನೆಯಲ್ಲಿ ಮಗು ಒಂಟಿತನದ ಭಾವನೆ ಅನುಭವಿಸುವ ಸಾಧ್ಯತೆ ಇಲ್ಲದಿಲ್ಲ. ಆಗ ಅದರ ಮನಸ್ಸಿನಲ್ಲಿ ಅನೇಕ ಬಗೆಯ ಆಲೋಚನೆಗಳು ಬರುತ್ತವೆ. ಹೊಸ ಅನುಭವಗಳು ಆಗುತ್ತವೆ. ಅವುಗಳಿಗೆ ಮಗು ಹೇಗೆ ಪ್ರತಿಕ್ರಿಯಿಸುತ್ತದೆ ಹಾಗೂ ಅಂಗೀಕರಿಸುತ್ತದೆ ಎನ್ನುವುದರ ಮೇಲೆ ಅದರ ವ್ಯಕ್ತಿತ್ವ ರೂಪುಗೊಳ್ಳುತ್ತದೆ.

ಪಾಲಕರು ತಮ್ಮ ಹದಿಹರೆಯದ ಅನುಭವಗಳಲ್ಲಿ ಬಹಳಷ್ಟನ್ನು ಮರೆತಿರುತ್ತಾರೆ. ಮಗು ತಮ್ಮ ಹಾಗೆಯೇ ಶಿಸ್ತಿನ ಸಿಪಾಯಿಯಾಗಬೇಕು, ಜಾಣನಾಗಬೇಕು, ಜೀವನದಲ್ಲಿ ಯಶಸ್ವಿಯಾಗಬೇಕು ಎಂದು ಬಯಸುತ್ತಾರೆ. ಮಗುವಿನೊಂದಿಗೆ ಮಗುವಾಗಿ ಬೆರೆಯದೇ, ತಮ್ಮ ಹಾಗೇ ಪ್ರೌಢಿಮೆಯಿಂದ ವರ್ತಿಸಲಿ ಎಂದು ಆಶಿಸುತ್ತಾರೆ. ಇಲ್ಲಿಂದಲೇ ಸಮಸ್ಯೆ ಶುರುವಾಗುತ್ತದೆ. ಅದು ಒಂದೊಂದು ಮಗುವಿನಲ್ಲಿ ಒಂದೊಂದು ರೀತಿಯಲ್ಲಿ ವ್ಯಕ್ತವಾಗುತ್ತದೆ.

ನೀವು ಗಂಡ- ಹೆಂಡತಿ ಮಗುವಿನ ಎದುರಿನಲ್ಲಿಯೇ ಜಗಳವಾಡುವಿರಾ? ನಿಮ್ಮಿಬ್ಬರಲ್ಲಿ ಯಾರಿಗೆ ಕೋಪ ಜಾಸ್ತಿ ಇದೆಯೋ ಅವರದ್ದೇ ನಡೆಯುತ್ತದೆ ತಾನೆ? ಕೋಪ ಮಾಡಿಕೊಳ್ಳುವುದರಿಂದ ತನಗೆ ಬಹಳಷ್ಟು ಅನುಕೂಲಗಳಿವೆ ಎನ್ನುವುದನ್ನು ಕಂಡುಕೊಂಡ ನಂತರವೇ ನಿಮ್ಮ ಮಗ ಹಾಗಾಗಿರುತ್ತಾನೆ. ಮನೆಯಲ್ಲಿ ಎಂಥ ಸಂಸ್ಕಾರ ಸಿಗುತ್ತದೆಯೋ ಮಗು ಹಾಗೆಯೇ ಬೆಳೆಯುತ್ತದೆ. ಮಠದಲ್ಲಿ ಸಾಕಿದ ಗಿಳಿಗೂ, ಕಟುಕರ ಮನೆಯಲ್ಲಿ ಸಾಕಿದ ಗಿಳಿಗೂ ಇರುವ ವ್ಯತ್ಯಾಸದಂತೆಯೇ, ಮಕ್ಕಳ ಬೆಳವಣಿಗೆಯೂ ಆಗುತ್ತದೆ. ಮಗು ಮುಂದೆ ಎಂಥ ವ್ಯಕ್ತಿಯಾಗಬೇಕೋ ಅಂಥ ವ್ಯಕ್ತಿತ್ವವನ್ನು ಮೊದಲು ಪಾಲಕರು ರೂಢಿಸಿಕೊಳ್ಳಬೇಕು. ತಪ್ಪು ಮಾಡುತ್ತಾ ಕಲಿಯುವುದು ಸರಿಯಾದ ಕ್ರಮ. ಮಕ್ಕಳನ್ನು ಸಾಧ್ಯವಾದಷ್ಟೂ ಸಹನೆಯಿಂದ, ಪ್ರೀತಿಯಿಂದ, ಗದರದೇ ಹೊಡೆಯದೇ ಬೆಳೆಸಬೇಕು. ಶಾಂತಿ, ಸಹನೆ, ಸೌಹಾರ್ದ, ಪ್ರೀತಿಯಿಂದ ವ್ಯವಹರಿಸಬೇಕು. ನಿಮ್ಮ ಮಗನಲ್ಲಿನ ಅನಿಯಂತ್ರಿತ ಮಟ್ಟದ ಉದ್ವಿಗ್ನತೆ, ಆತಂಕ ಕಡಿಮೆಯಾಗಬೇಕು. ನೀವು ಮೂವರೂ ಸಕಾರಾತ್ಮಕವಾಗಿ ಬದಲಾಗಬೇಕು.

ಕೋಟಕ್ ಕನ್ಯಾಸ್ಕಾಲರ್‌ಷಿಪ್

ಕೋಟಕ್ ಶಿಕ್ಷಣ ಪ್ರತಿಷ್ಠಾನವು ಅರ್ಜಿ ಆಹ್ವಾನಿಸಿದೆ. 12ನೇ ತರಗತಿ ಪೂರೈಸಿರುವ ಪ್ರತಿಭಾನ್ವಿತ ಹೆಣ್ಣುಮಕ್ಕಳ ಉನ್ನತ ಅಧ್ಯಯನಕ್ಕೆ ಇದು ಬೆಂಬಲ ನೀಡುತ್ತದೆ. ಅರ್ಹತೆ: 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಶೇ 75ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಅಂಕ ಅಥವಾ ಅದಕ್ಕೆ ಸಮಾನವಾದ ಸಿಜಿಪಿಎ ಅನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು. ಎನ್‌ಐಆರ್‌ಎಫ್/ನ್ಯಾಕ್‌ನಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷ), ಇಂಟಿಗ್ರೇಟೆಡ್ ಬಿಎಸ್-ಎಂಎಸ್/ ಬಿಎಸ್-ಸಂಶೋಧನೆ, ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ ಇತರ ವೃತ್ತಿಪರ ಪದವಿ ಕೋರ್ಸ್‌ಗಳ (ವಿನ್ಯಾಸ, ವಾಸ್ತುಶಿಲ್ಪ, ಇತ್ಯಾದಿ) ಮೊದಲ ವರ್ಷಕ್ಕೆ ಪ್ರವೇಶ ಪಡೆದಿರಬೇಕು. **ಆರ್ಥಿಕ ಸಹಾಯ:** ವರ್ಷಕ್ಕೆ 1.5 ಲಕ್ಷ **ಅರ್ಜಿ ಸಲ್ಲಿಸಲು ಕೊನೇ ದಿನ:** 31-08-2025 **ವಿಧಾನ:** ಆನ್‌ಲೈನ್. **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/KKGS4

ಅಪರಾಧ ಶಾಸ್ತ್ರ: ತನಿಖೆಗೆ ಅಸ್ತ್ರ



• ಶಶಿಕುಮಾರ್ ಎಲ್.

ಕ್ಲಿಷ್ಟಕರ ಅಪರಾಧ ಪ್ರಕರಣಗಳನ್ನು ಸುಲಭವಾಗಿ ಭೇದಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲು ಅಪರಾಧ ಶಾಸ್ತ್ರ ಸದಾ ಸಹಾಯಕ. ಈ ದಿನಗಳಲ್ಲಿ ಇದು, ಅಪರಾಧ ಪತ್ತೆಗೆ ಸಹಾಯ ಮಾಡುವುದಷ್ಟೇ ಅಲ್ಲ ನ್ಯಾಯಾಲಯದ ವಿಚಾರಣೆಯಲ್ಲೂ ಅತಿ ಮಹತ್ವದ ಪಾತ್ರ ವಹಿಸುತ್ತಿದೆ.

ಅಪರಾಧದ ರೀತಿ, ವ್ಯಾಪ್ತಿ, ಕಾರಣ ಮತ್ತು ನಿಯಂತ್ರಣದ ಬಗೆಗಿನ ವೈಜ್ಞಾನಿಕ ಅಧ್ಯಯನ ಇದಾಗಿದೆ. ಜೊತೆಗೆ ವರ್ತನೆಯ ವಿಜ್ಞಾನದ ಒಂದು ಪ್ರಮುಖ ವಿಭಾಗವಾಗಿದೆ. ಸಮಾಜಶಾಸ್ತ್ರಜ್ಞರು, ಸಾಮಾಜಿಕ ಮಾನವಶಾಸ್ತ್ರಜ್ಞರು ಮತ್ತು ಮನಃಶಾಸ್ತ್ರಜ್ಞರ ಸಂಶೋಧನೆಯನ್ನು ಮಾತ್ರವಲ್ಲದೆ ಕಾನೂನು, ವಿಧಿವಿಜ್ಞಾನದ ವಿಷಯಗಳನ್ನು ಸಹ ಇದು ಒಳಗೊಳ್ಳುತ್ತದೆ. ಅಪರಾಧದ ಹೆಚ್ಚಳ ಮತ್ತು ಅದರ ಕಾರಣಗಳನ್ನು ಅಧ್ಯಯನ ಮಾಡಲು ಪರಿಣಾಮಕಾರಿ ವಿಧಾನಗಳನ್ನು ಒಳಗೊಂಡಿದೆ.

ಹಿಂದೆ ಆರೋಪಿಗಳನ್ನು ಕಠಿಣವಾದ ಕ್ರಮಗಳ ಮೂಲಕ ವಿಚಾರಣೆಗೆ ಒಳಪಡಿಸಲಾಗುತ್ತಿತ್ತು. ಆದರೆ ಅಂತಹ ಸ್ಥಿತಿ ಈಗ ಬಹುತೇಕ ಕಡಿಮೆಯಾಗಿದೆ. ಪ್ರಕರಣದ ಸಾಕ್ಷಿ, ಕುರುಹುಗಳನ್ನು ಕಲೆಹಾಕಿ, ವೈಜ್ಞಾನಿಕವಾಗಿ ತನಿಖೆ ನಡೆಸಲು ಅಪರಾಧ ಶಾಸ್ತ್ರವು ಒಂದು ಪ್ರಧಾನ ಅಸ್ತ್ರವಾಗಿದೆ.

ಅಪರಾಧ ಶಾಸ್ತ್ರದ ಪದವಿ ಕೋರ್ಸ್‌ಗಳನ್ನು ಸಾಮಾನ್ಯವಾಗಿ ಕಲಾ ಮತ್ತು ವಿಜ್ಞಾನದ ವಿದ್ಯಾರ್ಥಿಗಳು ಪಿಯುಸಿ ನಂತರ ಮಾಡಬಹುದು. ಪಿಯುಸಿ ಅಥವಾ 12ನೇ ತರಗತಿಯಲ್ಲಿ ಶೇ 50ರಷ್ಟು ಅಂಕ ಗಳಿಸಿರಬೇಕು. ವಿದ್ಯಾರ್ಥಿಗಳು ಮುಖ್ಯವಾಗಿ, ಅಪರಾಧದ ಕಾರಣ ಮತ್ತು ಸಂಬಂಧ, ಬಾಲಾಪರಾಧ, ಅಪರಾಧ ತಡೆಗಟ್ಟುವಿಕೆ, ಅಪರಾಧದ ಅಂಕಿ-ಅಂಶ, ಅಪರಾಧವನ್ನು ವೃತ್ತಿಯಾಗಿಸಿಕೊಳ್ಳುವುದು ಮತ್ತು ಅದನ್ನು ತ್ಯಜಿಸುವುದು, ಅಪರಾಧಕ್ಕೆ ನ್ಯಾಯ ಒದಗಿಸುವ ಏಜೆನ್ಸಿಗಳು, ದಂಡನೆ ಹಾಗೂ ಅಪರಾಧಕ್ಕೆ ಬಲಿಯಾದವರ ಅಂತರರಾಷ್ಟ್ರೀಯ ಸಮೀಕ್ಷೆಗಳ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.

ಕೋರ್ಸ್ ಲಭ್ಯವಿರುವುದೆಲ್ಲಿ?

ಸರ್ಕಾರಿ ಕಾಲೇಜುಗಳು ಮತ್ತು ಖಾಸಗಿ ವಿದ್ಯಾಸಂಸ್ಥೆಗಳು ಈ ಕೋರ್ಸ್ ನೀಡುತ್ತವೆ. ಮುಖ್ಯವಾಗಿ, ಹಾಸನದ ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಮತ್ತು ಧಾರವಾಡದ ಕರ್ನಾಟಕ ವಿಜ್ಞಾನ ಕಾಲೇಜಿನಲ್ಲಿ ಅಪರಾಧ ಶಾಸ್ತ್ರ ಕೋರ್ಸ್ ಇದೆ. ಇದಲ್ಲದೆ ರಾಜ್ಯದ ಹಲವು ಸರ್ಕಾರಿ ಕಾಲೇಜುಗಳಲ್ಲಿಯೂ ಈ ಕೋರ್ಸ್ ಲಭ್ಯವಿದೆ.

ಇನ್ನು ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜು, ಆಚಾರ್ಯ ಕಾಲೇಜು, ಮೈಸೂರಿನ ಮಹಾರಾಜ ಕಾಲೇಜು, ಸಂತ ಫಿಲೋಮಿನಾ ಕಾಲೇಜು, ಮಂಗಳೂರಿನ ರೋಷನಿ ನಿಲಯ, ಯೆನೆಪೋಯ ಶಿಕ್ಷಣ ಸಂಸ್ಥೆ ಹಾಗೂ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಕೋರ್ಸ್ ಲಭ್ಯವಿದೆ. ಇಷ್ಟೇ ಅಲ್ಲದೆ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಗುಜರಾತಿನ ವಿಧಿ ವಿಜ್ಞಾನ ವಿಶ್ವವಿದ್ಯಾಲಯದಲ್ಲೂ ಅಪರಾಧ ಶಾಸ್ತ್ರದ ಪದವಿ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದಾಗಿದೆ.

ಉದ್ಯೋಗಾವಕಾಶ: ವಿದ್ಯಾರ್ಥಿಗಳು ತಮ್ಮ ಕೋರ್ಸ್ ನಂತರ ಪತ್ತೇದಾರಿ ಸಂಸ್ಥೆಗಳು, ಪೊಲೀಸ್ ಇಲಾಖೆ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಗುಪ್ತಚರ ಇಲಾಖೆ, ಯುವಜನ ಇಲಾಖೆ, ಭದ್ರತಾ ಇಲಾಖೆ, ಕೇಂದ್ರ, ರಾಜ್ಯ ಹಾಗೂ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳು, ನ್ಯಾಯಾಂಗ ಇಲಾಖೆ, ಬಂದಿಖಾನೆ ಇಲಾಖೆ, ಸಾಮಾಜಿಕ ಕಾರ್ಯನಿರತ ಸಂಸ್ಥೆಗಳು ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಕೆಲಸಕ್ಕೆ ಪ್ರಯತ್ನಿಸಬಹುದು.

ಇದಲ್ಲದೆ ಅಪರಾಧ ಪರಿಶೀಲನೆ ಮತ್ತು ವಿಶ್ಲೇಷಣಾಧಿಕಾರಿಯಾಗಿ, ಅಪರಾಧ ಕುರಿತ ಮನೋತಜ್ಞರಾಗಿ, ನ್ಯಾಯವಾದಿಯಾಗಿ, ತನಿಖಾಧಿಕಾರಿಯಾಗಿ, ಸಲಹಾ ತಜ್ಞರಾಗಿ ಕಾರ್ಯ ನಿರ್ವಹಿಸಬಹುದು. ಇನ್ನು ಅಪರಾಧಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಪಿಎಚ್.ಡಿ ಪೂರ್ಣಗೊಳಿಸಿದರೆ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ, ಸಂಶೋಧಕರಾಗಿ ಕಾರ್ಯನಿರ್ವಹಿಸಬಹುದು.

ಲೇಖಕ: ವೈಜ್ಞಾನಿಕ ಅಧಿಕಾರಿ, ಜೀವವಿಜ್ಞಾನ ವಿಭಾಗ, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮೈಸೂರು

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ–11 ಭಾರತದ ಋತುಗಳು

5) ಭಾರತದಲ್ಲಿ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಯಾಕೆ? ಯಾವ ಯಾವ ಪ್ರದೇಶದಲ್ಲಿ ಈ ಮಳೆಯನ್ನು ಯಾವ ಯಾವ ಹೆಸರಿನಲ್ಲಿ ಕರೆಯುತ್ತಾರೆ?

ಉತ್ತರ:– (.......ಹಿಂದಿನ ಸಂಚಿಕೆಯಿಂದ)

ಬೀಳುವುದರಿಂದ ಭಾರತದಲ್ಲಿ ಉಷ್ಣಾಂಶ ಅಧಿಕವಾಗಿರುತ್ತದೆ. ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿರುವ ಉತ್ತರ ಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ.

ರಾಜಸ್ತಾನದ ಗಂಗಾನಗರವು 52^0 ಸೆ. ಗಳಷ್ಟು ಉಷ್ಣಾಂಶವನ್ನು ದಾಖಲಿಸಿದ್ದು ದೇಶದಲ್ಲಿಯೇ ಅತಿಹೆಚ್ಚು ಉಷ್ಣಾಂಶವನ್ನು ದಾಖಲಿಸಿರುವ ಪ್ರದೇಶವಾಗಿದೆ. ದಕ್ಷಿಣ ಭಾರತವು ಮೂರು ಕಡೆಗಳಲ್ಲಿ ಸಾಗರಗಳಿಂದ ಆವೃತ್ತವಾಗಿದ್ದು ಇದರ ಉಷ್ಣಾಂಶದಲ್ಲಿ ಇಳಿಕೆ ಕಂಡು ಬರುತ್ತದೆ. ಅದು ಕೇವಲ 32^0 ಸೆ. ದಿಂದ 35^0 ಸೆ. ಗಳಷ್ಟು ಕಂಡುಬರುತ್ತದೆ. ಈ ಅವಧಿಯಲ್ಲಿ ಉತ್ತರ ಭಾರತದ ಪರ್ವತ ಪ್ರದೇಶ ಮತ್ತು ಪರ್ಯಾಯ ಪ್ರಸ್ಥಭೂಮಿಗಳು ಸಾಕಷ್ಟು ತಂಪಾಗಿರುತ್ತವೆ. ಅಲ್ಲಲ್ಲಿ ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮಳೆಯಾಗುತ್ತದೆ. ಈ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ 'ಕಾಲ ಬೈಸಾಕಿ,' ಉತ್ತರ ಪ್ರದೇಶದಲ್ಲಿ 'ಆಂಡೀಸ್', ಕರ್ನಾಟಕದಲ್ಲಿ 'ಕಾಫಿ ತುಂತುರು' ಹಾಗೂ ಕೇರಳದಲ್ಲಿ 'ಮಾವಿನಹೊಯ್ಲು' ಎಂದು ಕರೆಯುತ್ತಾರೆ.

ಬೇಸಿಗೆಯಲ್ಲಿ ದೇಶವು ವಾರ್ಷಿಕ ಮಳೆಯ ಶೇ. 10ರಷ್ಟನ್ನು ಮಾತ್ರ ಪಡೆಯುತ್ತದೆ

7) ಭಾರತದಲ್ಲಿ ಬಹುತೇಕ ಮಳೆಯು ಯಾವ ಮಾರುತಗಳಿಂದ ಉಂಟಾಗುತ್ತದೆ?

ಉತ್ತರ:– ನೈಋತ್ಯ ಮಾನ್ಸೂನ್ ಮಾರುತ

8) ನೈಋತ್ಯ ಮಾನ್ಸೂನ್ ಮಾರುತಗಳಿಂದ ಭಾರತದ ಒಟ್ಟು ಮಳೆಯಲ್ಲಿ ಶೇಕಡ ಎಷ್ಟು ಬಿಳುತ್ತದೆ?

ಉತ್ತರ:– ಶೇ. 75

9) ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳನ್ನು ತಿಳಿಸಿ

ಉತ್ತರ:– ಭಾರತದಲ್ಲಿ ಅತಿಹೆಚ್ಚು ಮಳೆ ಬಿಳುವ ಪ್ರದೇಶಗಳೆಂದರೆ:– ಪಶ್ಚಿಮ ಘಟ್ಟ ಪ್ರದೇಶಗಳಾದ ಕರಾವಳಿ ಕರ್ನಾಟಕ, ಮಹಾರಾಷ್ಟ್ರ, ಕೇರಳ ಹಾಗೂ ಈಶಾನ್ಯ ಭಾರತದ ಪ್ರದೇಶದಲ್ಲಿ ಬರುವ ಆಸ್ಸಾಂ, ಮೇಘಾಲಯ

10) ಮಳೆಗಾಲ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ನೈಋತ್ಯ ಮಾನ್ಸೂನ್ ಎಂದರೆ ಮಳೆಗಾಲವೆಂದರ್ಥ. ಇವುಗಳನ್ನು ಮುಂಗಾರು ಮಳೆಗಾಲದ ಮಾರುತಗಳೆಂದು ಕರೆಯುತ್ತಾರೆ. ಇವು ಜಲಾಂಶಪೂರಿತ ಮಾರುತಗಳಾಗಿದ್ದು ಭಾರತದ ಹೆಚ್ಚು ಭಾಗದಲ್ಲಿ ಮಳೆ ಸುರಿಸುತ್ತವೆ. ಇದು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಕಂಡುಬರುವುದು

ಭಾರತದ ಒಟ್ಟು ಮಳೆಯಲ್ಲಿ ಶೇ. 75ರಷ್ಟು ಈ ಕಾಲದಲ್ಲಿ ಬೀಳುವುದು. ನೈಋತ್ಯ ಮಾನ್ಸೂನ್ ಮಾರುತಗಳು ಭಾರತವನ್ನು ಎರಡು ಕವಲುಗಳಾಗಿ ಪ್ರವೇಶಿಸುತ್ತವೆ ಅವುಗಳೆಂದರೆ ಅರಬ್ಬಿ ಸಮುದ್ರ ಶಾಖೆ ಹಾಗೂ ಬಂಗಾಳಕೊಲ್ಲಿಯ ಶಾಖೆ. ಅರಬ್ಬಿ ಸಮುದ್ರ ಶಾಖೆಯು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಘಟ್ಟಗಳ ಪಶ್ಚಿಮ ಭಾಗಕ್ಕೆ ಹೆಚ್ಚು ಮಳೆ ಸುರಿಸುತ್ತವೆ. ಈ ಮಾರುತಗಳು ಪೂರ್ವಕ್ಕೆ ಮುಂದುವರೆದಂತೆ ಮಳೆ ಕಡಿಮೆಯಾಗುತ್ತದೆ. ಪಶ್ಚಿಮ ಘಟ್ಟಗಳ ಪೂರ್ವ ಭಾಗವು ಮಳೆಯ ನೆರಳಿನ ಪ್ರದೇಶವೆನಿಸಿದೆ. ಬಂಗಾಳಕೊಲ್ಲಿಯ ಶಾಖೆಯು ಮಯನ್ಮಾರ್ (ಬರ್ಮಾ) ಬಾಂಗ್ಲಾದೇಶ, ಭಾರತದ ಈಶಾನ್ಯ ಭಾಗ, ಹಿಮಾಲಯದ ತಪ್ಪಲು ಮತ್ತು ಉತ್ತರದ ಮೈದಾನಗಳ ಕಡೆಗೆ ಮಳೆಯನ್ನು ತರುತ್ತದೆ. ಉತ್ತರ ಭಾರತದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆಲ್ಲಾ ಮಳೆ ಕಡಿಮೆಯಾಗುತ್ತದೆ. ತಮಿಳುನಾಡು ಹೊರತುಪಡಿಸಿ ಭಾರತದ ಹೆಚ್ಚು ಭಾಗಕ್ಕೆ ನೈಋತ್ಯ ಮಾನ್ಸೂನ್ ಮಾರುತಗಳು ಮಳೆಯನ್ನು ಸುರಿಸುತ್ತದೆ.

11) ಭಾರತದಲ್ಲಿ ಮಾರುತಗಳ ನಿರ್ಗಮನ ಕಾಲ ಬಗ್ಗೆ ವಿವರಿಸಿ

ಉತ್ತರ: ಅಕ್ಟೋಬರ ತಿಂಗಳ ಕೊನೆಯ ಭಾಗದ ಒಳಗಾಗಿ ಭಾರತದ ಉಪಖಂಡದಲ್ಲಿ ಮಳೆ ಸುರಿದ ಪರಿಣಾಮವಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಅಲ್ಲದೆ ಸೂರ್ಯನ ಕಿರಣಗಳು ಕೂಡಾ ಈ ಅವಧಿಯಲ್ಲಿ ದಕ್ಷಿಣಾರ್ಧ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತವೆ. ಇದರಿಂದ ಉತ್ತರಾರ್ಧಗೋಳದಲ್ಲಿ ಉಷ್ಣಾಂಶವು ಕಡಿಮೆಯಾಗುತ್ತದೆ. ಪರಿಣಾಮವಾಗಿ ಆ ಪ್ರದೇಶವು ಹೆಚ್ಚು ಒತ್ತಡ ಪ್ರದೇಶವಾಗಿ ಪರಿವರ್ತನೆಯಾಗುತ್ತದೆ. ಅದಕ್ಕಾಗಿ ನೈಋತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಂದೆ ಸರಿಯಲು ಪ್ರಾರಂಭ ಮಾಡುತ್ತವೆ. ನಿಧಾನವಾಗಿ ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಇವು ಬೀಸುವುದನ್ನು ನಿಲ್ಲಿಸುತ್ತವೆ. ಇದನ್ನೇ ಮಾನ್ಸೂನ್ ಮಾರುತಗಳ 'ನಿರ್ಗಮನ ಕಾಲ' ಅಥವಾ 'ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ' ಎಂದು ಕರೆಯುವರು. ಈ ಅವಧಿಯಲ್ಲಿ ಭಾರತವು ಶೇ. 13ರಷ್ಟು ಮಳೆಯನ್ನು ಪಡೆಯುತ್ತದೆ. ಈ ಕಾಲದಲ್ಲಿ ಉಷ್ಣವಲಯದ ಆವರ್ತ ಗಾಳಿಗಳು (ಚಂಡಮಾರುತ) ಬಂಗಾಳಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳಲ್ಲಿ ನಿರ್ಮಿತಗೊಳ್ಳುತ್ತವೆ.

ಈ ಆವರ್ತ ಗಾಳಿಗಳು ಅಧಿಕ ವೇಗ ಹಾಗೂ ಮಳೆಯಿಂದ ಕೂಡಿರುತ್ತವೆ. ಇವು ಜೀವ ಹಾಗೂ ಆಸ್ತಿ ಹಾನಿಯನ್ನು ಉಂಟುಮಾಡುತ್ತವೆ. ಆದರೆ ಒಳನಾಡಿಗೆ ಸಾಕಷ್ಟು ಮಳೆ ತರುತ್ತವೆ.

12) ಭಾರತದಲ್ಲಿ ಚಳಿಗಾಲದ ಅವಧಿ ಯಾವಾಗ ಇರುತ್ತದೆ?

ಉತ್ತರ: ಭಾರತದಲ್ಲಿ ಚಳಿಗಾಲದ ಅವಧಿಯ ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರೆಯುವುದು.

13) ಭಾರತದಲ್ಲಿ ಇರುವ ಚಳಿಗಾಲದ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ಭಾರತದಲ್ಲಿ ಚಳಿಗಾಲದ ಅವಧಿಯ ಡಿಸೆಂಬರ್‌ನಿಂದ ಆರಂಭವಾಗಿ ಫೆಬ್ರವರಿಯ ಕೊನೆಯವರೆಗೂ ಮುಂದುವರೆಯುವುದು. ಈ ಅವಧಿಯಲ್ಲಿ ಉತ್ತರದ ರಾಜ್ಯಗಳಾದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಉತ್ತರದ ಮೈದಾನ ಕಡಿಮೆ ಉಷ್ಣಾಂಶವು ಕಂಡು ಬರುತ್ತದೆ. ಕೆಲವು ಕಡೆಗಳಲ್ಲಿ ಉಷ್ಣಾಂಶವು ನೀರು ಹೆಪ್ಪುಗಟ್ಟುವ ಬಿಂದುವಿಗಿಂತಲೂ ಕಡಿಮೆ ಇರುವುದು. ಆದರೆ ದಕ್ಷಿಣ ಭಾರತದಲ್ಲಿ ಉಷ್ಣಾಂಶವು ಸಾಧಾರಣವಾಗಿದ್ದು ಹವಾಮಾನವು ಹಿತಕರವಾಗಿರುತ್ತದೆ. ಭಾರತವು ತನ್ನ ವಾರ್ಷಿಕ ಮಳೆಯ ಶೇ. 2ರಷ್ಟನ್ನು ಮಾತ್ರ ಈ ಅವಧಿಯಲ್ಲಿ ಪಡೆಯುವದು. ಆದುದರಿಂದ ಚಳಿಗಾಲವು ಭಾರತದಲ್ಲಿ ಅತಿಕಡಿಮೆ ಮಳೆ ಬೀಳುವ ಅವಧಿಯಾಗಿದೆ.

14) ಭಾರತದಲ್ಲಿ ಸರಾಸರಿ ಮಳೆಯ ಪ್ರಮಾಣ ಎಷ್ಟು?

ಉತ್ತರ:– ದೇಶದ ಸರಾಸರಿ ಮಳೆಯ ಪ್ರಮಾಣ 118 ಸೆಂ.ಮಿ.

15) ಭಾರತದಲ್ಲಿ ಕಡಿಮೆ ಮಳೆಯ ಪ್ರದೇಶಗಳನ್ನು ಗುರುತಿಸಿ

ಉತ್ತರ:– ಪ್ರದೇಶದಲ್ಲಿ ವಾರ್ಷಿಕ ಸುಮಾರು 50 ಸೆಂ. ಮೀಗಳಿಗಿಂತ ಕಡಿಮೆ ಮಳೆ ಬೀಳುತ್ತದೆ. ರಾಜಸ್ಥಾನದ ಥಾರ್ ಮರುಭೂಮಿ ಹಾಗೂ ಅದಕ್ಕೆ ಹೊಂದಿಕೊಂಡುವಂತಿರುವ ಪಂಜಾಬ್, ಹರಿಯಾಣ, ಗುಜರಾತಿನ ಕಛ್‌ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರದ ಪೂರ್ವ ಭಾಗ, ಕರ್ನಾಟಕದ ಒಳನಾಡು ಕಡಿಮೆ ಮಳೆ ಬೀಳುವ ವಲಯವಾಗಿದೆ. ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿಯ ವಾರ್ಷಿಕ ಸರಾಸರಿ ಮಳೆಯ 8.3 ಸೆಂ ಮೀ ಗಳಷ್ಟಾಗಿದೆ. ಇದು ಮಳೆ ಭಾರತದಲ್ಲಿ ಅತಿಕಡಿಮೆ ಮಳೆಯನ್ನು ಪಡೆಯುವ ಪ್ರದೇಶವಾಗಿದೆ.

16) ಸಾಧಾರಣ ಮಳೆ ಪಡೆಯುವ ಪ್ರದೇಶದ ಬಗ್ಗೆ ಬರೆಯಿರಿ

ಉತ್ತರ:– ಇಲ್ಲಿ ವಾರ್ಷಿಕ ಸುಮಾರು 50 ರಿಂದ 250 ಸೆಂ.ಮೀ ಮಳೆ ಬೀಳುತ್ತದೆ. ಈ ಭಾಗಗಳನ್ನು ಅತಿ ಕಡಿಮೆ ಹಾಗೂ ಅತಿ ಹೆಚ್ಚು ಮಳೆಯ ಪ್ರದೇಶಗಳನ್ನು ಬಿಟ್ಟು ಭಾರತದ ಉಳಿದೆಲ್ಲಾ ಭಾಗಗಳನ್ನು ಒಳಗೊಂಡಿರುವುದು.

17) ಭಾರತದಲ್ಲಿ ಅಧಿಕ ಮಳೆಯ ಪ್ರದೇಶದ ಬಗ್ಗೆ ತಿಳಿಸಿ

ಉತ್ತರ : ವಾರ್ಷಿಕ ಸುಮಾರು 250 ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಅಸ್ಸಾಂ ಹಾಗೂ ಇತರ ಪೂರ್ವ ರಾಜ್ಯಗಳು *(ಮುಂದುವರಿಯುವುದು)*

PHYSICS

Chapter – 1

ELECTRIC CHARGES AND FIELDS

(..........Contd)

Draw a Gaussian surface in the form of a sphere of radius r.

The net charge inside the Gaussian surface,
q = charge on nucleus + negative charge within the sphere of radius r.

$$= Ze + p \times \text{volume of Gaussian surface}$$

$$= Ze - \frac{3Ze}{4\pi R^3} \times \frac{4}{3}\pi r^3$$

$$= \left(Ze - \frac{Zer^3}{R^3}\right) \quad \text{............(ii)}$$

According to Gauss's theorem,

$$\oint \vec{E}.d\vec{s} = \frac{q}{\epsilon_0} \text{ (or) } \oint E\,dS\cos 0^\circ = \frac{q}{\epsilon_0}$$

$$\text{(or) } E \times 4\pi r^2 = \frac{q}{\epsilon_0} \quad \left(\because \oint dS = 4\pi r^2\right)$$

$$\text{(or) } E = \frac{q}{4\pi \epsilon_0 r^2}$$

Using eqn.(ii), we get

$$E = \frac{1}{4\pi \epsilon_0 r^2}\left[Ze - \frac{Zer^3}{R^3}\right]$$

$$= \frac{Ze}{4\pi \epsilon_0}\left[\frac{1}{r^2} - \frac{r}{R^3}\right]$$

ONE MARK QUESTIONS

1. Write relation between electric flux ϕ and electric intensity E.

Ans:- $\phi = \vec{E}.\vec{ds}$, where ds is area vector.

2. What is electric flux? Write its SI unit.

Ans:- Electric flux linked with a surface is defined as the total number of lines passing through that surface. SI unit of electron flux is Nm^2C^{-1}.

3. State Gauss' theorem/law in electrostatics.

Ans:- *Gauss' theorem* - The total electric flux through any closed surface in free space is equal to $\frac{1}{\epsilon_0}$ time the total electric charge enclosed by the surface.

4. What is Gaussian surface?

Ans:- Gaussian surface is an imaginary closed surface enclosing charge such that the intensity of electric field at all points on the surface is same and the electric flux over the surface is always normal to the surface.

5. What is the S.I. unit of electric flux?

Ans:- $NM^2 C^{-1}$.

6. The electric flux through a closed surface is zero. What do you mean by it?

Ans:- It means inward electric flux is equal to the outward electric flux. In other words, net charge inside the closed surface is zero, although the closed surface may have equal and opposite charges.

7. What is the importance of Gaussian surface?

Ans:- The concept of Gaussian surface helps in evaluating the electric field intensity due to symmetric charge distribution.

8. What is the intensity of electric field inside a charged spherical shell?

Ans:- Zero.

9. When electric flux through a closed surface is negative, what type of charge does it contain?

Ans:- It contains negative charge.

10. Do Coulomb's law and Gauss' law complement each other?

Ans. Yes, because Coulomb's law can be derived from Gauss' law and vice-versa.

11. Does $\vec{E}$ due to infinite plane sheet of charge depend upon distance of observation point from the sheet?

Ans:- $E = \frac{\sigma}{\epsilon_0}$, therefore $\vec{E}$ due to infinite plane sheet of charge does not depend upon the distance of observation point from the sheet.

12. The charge *q* is placed at the centre of a cube with side L. what is the electric flux linked with cubical surface?

Ans. If the charge *q* is enclosed within the cube, then the electric flux linked with cubical surface = q/ϵ_0.

13. Charges of magnitudes 2Q and –Q are located at points (a, 0, 0) and (4a, 0, 0). Find the ratio of the flux of electric field due to these charges through concentric spheres of radii 2a and 8a centred at the origin.

Ans:- Electric flux through a sphere of radius 2a (containing charge, $q = 2Q$),

$$\phi_1 = \frac{q}{\epsilon_0} = \frac{2Q}{\epsilon_0}$$

Electric flux through a sphere of radius 8*a* (containing charge, $q = 2Q - Q = Q$),

$$\phi_2 = \frac{q}{\epsilon_0} = \frac{Q}{\epsilon_0}$$

$$\therefore \frac{\phi_1}{\phi_2} = 2$$

Multiple Choice Questions:-

1. Electric flux ϕ through a closed surface in free space enclosing a charge q is

a) $\epsilon_0 q$ b) q
c) $\frac{q}{\epsilon_0}$ d) $\frac{\epsilon_0}{q}$

2. Electric flux ϕ through a closed surface enclosing an electric dipole is

a) $\epsilon_0 q$ b) q
c) $\frac{q}{\epsilon_0}$ d) Zero

3. Electric flux ϕ through a closed surface enclosing charge Q is $\frac{Q}{\epsilon_0}$. What will be the electric flux through the closed surface if its size is doubled?

a) $\frac{2Q}{\epsilon_0}$ b) $\frac{Q}{2\epsilon_0}$
c) $\frac{Q}{\epsilon_0}$ d) Zero

(Contd.........)

‘ವೀರಶೈವ, ಲಿಂಗಾಯತ ಒಂದೇ’

ಚರ್ಚೆಗೆ ವೇದಿಕೆಯಾದ ಮೊಯಿಲಿ ಅವರ ಕೃತಿ ಬಿಡುಗಡೆ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವೀರಶೈವ, ಲಿಂಗಾಯತ ಬೇರೆ ಎಂದು ಪ್ರತಿವಾದ
- ಮುಂದಿನ ಸಂಪುಟದಲ್ಲಿ ಸ್ಪಷ್ಟ ಪಡಿಸಲಿ
- ಇತಿಹಾಸದ ಸಂಘರ್ಷ ಉಲ್ಲೇಖಿಸಿಲ್ಲ:ಮೊಯಿಲಿ

ಬಾಗಲಕೋಟೆ: ಮಾಜಿ ಮುಖ್ಯಮಂತ್ರಿ, ಸಾಹಿತಿ ಎಂ.ವೀರಪ್ಪ ಮೊಯಿಲಿ ಅವರ ‘ವಿಶ್ವಸಂಸ್ಕೃತಿ ಮಹಾಯಾನ ಸಂಪುಟ-3’ ಕೃತಿ ಬಿಡುಗಡೆ ಸಮಾರಂಭವು ಭಾನುವಾರ ಇಲ್ಲಿ 'ವೀರಶೈವ ಮತ್ತು ಲಿಂಗಾಯತ' ಬೇರೆ ಬೇರೆ’ ಎಂಬ ವಿಷಯದ ಚರ್ಚೆಗೆ ವೇದಿಕೆಯಾಯಿತು.

ಕಾರ್ಯಕ್ರಮದಲ್ಲಿ ಕೃತಿ ಕುರಿತು ಮಾತನಾಡಿದ ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ವೀರಣ್ಣ ರಾಜೂರ, ಸಾಹಿತಿ ಸರಜೂ ಕಾಟ್ಕರ್, ‘ವೀರಶೈವ, ಲಿಂಗಾಯತ ಒಂದೇ ಎಂಬರ್ಥದಲ್ಲಿ ಪುಸ್ತಕದಲ್ಲಿ ಬರೆಯಲಾಗಿದೆ. ಆದರೆ ಇವೆರಡೂ ಬೇರೆ, ಬೇರೆ. ಮುಂದಿನ ಸಂಪುಟದಲ್ಲಿ ಇದನ್ನು ಸ್ಪಷ್ಟಪಡಿಸಬೇಕು’ ಎಂದರು.

ಕಲಾಭವನದಲ್ಲಿ ನಡೆದ ಕಾರ್ಯಕ್ರಮವನ್ನು ಎಸ್.ಆರ್.ಪಾಟೀಲ ಸಮೂಹ ಸಂಸ್ಥೆ ಮತ್ತು ಸಪ್ನ ಬುಕ್ ಹೌಸ್ ಆಯೋಜಿಸಿದ್ದವು.

ರಾಜೂರ ಮುಂದುವರೆದು, ‘ಪುಸ್ತಕದ ಮುಖಪುಟದಲ್ಲಿರುವ ಬಸವಣ್ಣನವರ ಭಾವಚಿತ್ರದ ಕೈಯಲ್ಲಿ ಸ್ಥಾವರ ಲಿಂಗವಿದೆ. ಇದರ ಬದಲಿಗೆ ಇಷ್ಟಲಿಂಗದ ಚಿತ್ರ ಇರಬೇಕು’ ಎಂದರು.

ಶಿರಹಟ್ಟಿಯ ಬಾಲೇಹೊಸೂರಿನ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು, ‘ಪುಸ್ತಕದ ಮೇಲೆ ಬಸವಣ್ಣವರ ಕೈಯಲ್ಲಿ ಸ್ಥಾವರ ಲಿಂಗ ಇರುವುದು ಕಲಾವಿದನ ಕಲ್ಪನೆಯೇ ಹೊರತು ಬರಹಗಾರರ ಕಲ್ಪನೆ ಅಲ್ಲ. ಬದಲಾವಣೆ ಮಾಡುವುದಾಗಿ ಅವರು ಹೇಳಿದ್ದಾರೆ. ಇಷ್ಟಲಿಂಗ ಇರಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ’ ಎಂದರು.

‘ಕಾಂಗ್ರೆಸ್ ಸರ್ಕಾರ ಇದ್ದಾಗ ಲಿಂಗಾಯತ ಪ್ರತ್ಯೇಕ ಹೋರಾಟದ ಸಂದರ್ಭದಲ್ಲೂ ವೀರಶೈವ ಲಿಂಗಾಯತ ಬೇರೆ, ಬೇರೆ ಅಲ್ಲ. ಒಂದೇ ಎಂಬುದನ್ನು ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತೇನೆ’ ಎಂದು ಸ್ವಾಮೀಜಿ ಅವರು ಪ್ರತಿಪಾದಿಸಿದರು.

‘ಸಾವಿರಕ್ಕೂ ಹೆಚ್ಚು ಗ್ರಂಥ ಓದಿದ್ದೇನೆ. ನೀವು, ಕಲಬುರ್ಗಿ ಅವರು ಸಂಪಾದಿಸಿದ 14 ವಚನ ಸಂಪುಟಗಳಲ್ಲಿ, ಒಂದು ವಚನ ಪಾರಿಭಾಷಿಕ ಕೋಶದಲ್ಲಿ ಮೊಯಿಲಿ ಅವರು ಹೇಳಿದ್ದನ್ನೇ ಹೇಳಿದ್ದೀರಿ. ವೇದಿಕೆಯಲ್ಲಿ ಹೇಳಿದ್ದನ್ನು ಹೇಳಿಲ್ಲ’ ಎಂದು ರಾಜೂರ ಅವರಿಗೆ ಪ್ರಶ್ನಿಸಿದರು. ಅದಕ್ಕೆ ರಾಜೂರ ಅವರು, ‘ಹಿಂದೆ ರಚಿಸಿದ ಸಂಪುಟದಲ್ಲಿ ಪ್ರಕ್ಷಿಪ್ತ ವಚನಗಳು ಸೇರಿದ್ದು ಮಿಶ್ರವಾಗಿವೆ. ಈಗ ಬಸವ ಸಮಿತಿಯಿಂದ ‘ಬಸವ ಯುಗದ ನಿಜ ವಚನಗಳು’ ಸಂಪುಟಗಳು ಬರಲಿವೆ. ಅದರಲ್ಲಿ ಏನು ನಡೆದು ಬಂದಿದೆ ಎಂಬುದನ್ನು ತಿಳಿಸಲಾಗಿದೆ’ ಎಂದರು.

‘ಲಿಂಗಾಯತ ಧರ್ಮದ ಸಿದ್ಧಾಂತಗಳು ಯಾವುವು? ಅಷ್ಟಾವರಣ, ಪಂಚಾಚಾರ್ಯ, ಷಟ್‌ಸ್ಥಲ ಬಿಟ್ಟು ಲಿಂಗಾಯತ ಧರ್ಮ ಮಾಡಲು ಸಾಧ್ಯವೇ? ಇವುಗಳನ್ನು ಬಿಟ್ಟು ವೀರಶೈವರಿಗಾಗಲೀ, ಲಿಂಗಾಯತರಿಗಾಗಲೀ ಹೇಳಲಿಕ್ಕೆ ಆಗುವುದಿಲ್ಲ’ ಎಂದು ಸ್ವಾಮೀಜಿ ಹೇಳಿದರು.

ಆಗ ರಾಜೂರ ‘ಅದನ್ನು ಬಿಟ್ಟು ಆಚರಣೆಗಳ ಬಗ್ಗೆ ಹೇಳಿ’ ಎಂದರು.

ಮಾತುಕತೆ ಬೇರೆಡೆ ಸಾಗುವುದನ್ನು ಅರಿತ ಆಯೋಜಕರು ಇಬ್ಬರ ನಡುವಿನ ಚರ್ಚೆಗೆ ವಿರಾಮ ಹಾಕಿದರು.



ಎಂ.ವೀರಪ್ಪ ಮೊಯಿಲಿ ಅವರು ರಚಿಸಿರುವ ‘ವಿಶ್ವಸಂಸ್ಕೃತಿಯ ಮಹಾಯಾನ ಸಂಪುಟ–3’ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಲಾಯಿತು. ಮಾಜಿ ಸಚಿವ ಎಚ್‌.ಎಂ. ರೇವಣ್ಣ, ಸಪ್ನ ಬುಕ್ ಹೌಸ್ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಪ್ರೊ.ವೀರಣ್ಣ ರಾಜೂರ, ಮಾಜಿ ಸಚಿವ ಎಸ್‌.ಆರ್‌. ಪಾಟೀಲ ಪಾಲ್ಗೊಂಡಿದ್ದರು

‘ಸಂಘರ್ಷದ ವಿಚಾರಗಳಿಗೆ ಆಸ್ಪದವಿಲ್ಲ’

‘ನಾನು ಕೃತಿಗಳಲ್ಲಿ ಮನಸ್ಸುಗಳ ಜೋಡಿಸುವ ವಿಶ್ವಸಂಸ್ಕೃತಿಗೆ ಆದ್ಯತೆ ನೀಡಿದ್ದೇನೆ ವಿನಾ ವೀರಶೈವ-ಲಿಂಗಾಯತ ಪ್ರತ್ಯೇಕತೆ ಸೇರಿದಂತೆ ನಾಗರಿಕತೆ-ಇತಿಹಾಸದ ಸಂಘರ್ಷದಂಥ ವಿಚಾರಗಳಿಗೆ ಆಸ್ಪದ ನೀಡಿಲ್ಲ’ ಎಂದು ಕೃತಿಕಾರರಾದ ವೀರಪ್ಪ ಮೊಯಿಲಿ ಹೇಳಿದರು.

‘ಮೂರೂ ಸಂಪುಟಗಳಲ್ಲಿ ಮಾನವನ ವಿಕಸನದಿಂದ ಹಿಡಿದು 16, 17ನೇ ಶತಮಾನದವರೆಗಿನ ಸಂಗತಿಗಳನ್ನು ಸಂಶೋಧಿಸಿ, ನೀಡಿದ್ದೇನೆ. ವೀರಶೈವ-ಲಿಂಗಾಯತ ಕುರಿತು ಸರ್ಕಾರ ಏನು ಹೇಳಿದೆ ಎಂಬುದು ನನಗೆ ಸಂಬಂಧಿಸಿಲ್ಲ. ಎಲ್ಲವನ್ನೂ ಜೋಡಿಸುವ ವಿಶ್ವಸಂಸ್ಕೃತಿಗೆ ಒತ್ತುನೀಡಿದ್ದೇನೆ. ಇತಿಹಾಸದ ಸಂಘರ್ಷಗಳಿಗೆ ಕೈ ಹಾಕಿಲ್ಲ. ಅದರ ಅಗತ್ಯವೂ ಇಲ್ಲ’ ಎಂದರು.

ಕೆಎಂಎಫ್ ‘ಪಟ್ಟ’: ಸಿ.ಎಂ, ಡಿಸಿಎಂ ಬಣ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷ ಸ್ಥಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ‘ಬಣ’ದ ನಡುವೆ ಪೈಪೋಟಿ ನಡೆಯುವ ಲಕ್ಷಣಗಳು ಕಂಡುಬರುತ್ತಿವೆ.

ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಅಧ್ಯಕ್ಷ ಡಿ.ಕೆ. ಸುರೇಶ್, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಹಾಲು ಒಕ್ಕೂಟದ (ರಾಬಕೊವಿ) ಅಧ್ಯಕ್ಷ ರಾಘವೇಂದ್ರ ಹಿಟ್ನಾಳ್, ಕೋಲಾರ ಹಾಲು ಒಕ್ಕೂಟದ (ಕೋಮುಲ್) ಅಧ್ಯಕ್ಷ ಕೆ.ವೈ. ನಂಜೇಗೌಡ ಅವರು ಕೆಎಂಎಫ್ ಅಧ್ಯಕ್ಷ ಪಟ್ಟಕ್ಕೆ ಪ್ರಬಲ ಆಕಾಂಕ್ಷಿಗಳಾಗಿ ಮುಂಚೂಣಿಯಲ್ಲಿದ್ದಾರೆ.

ಮೇಲ್ನೋಟಕ್ಕೆ ಈ ಮೂವರ ನಡುವೆ ತ್ರಿಕೋನ ಪೈಪೋಟಿಯಂತೆ ಕಂಡರೂ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ರಾಘವೇಂದ್ರ ಹಿಟ್ನಾಳ್ ನಡುವೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಯುವುದು ಬಹುತೇಕ ಖಚಿತ. ರಾಜಕೀಯ ಅಂಗಳದ ಶೀತಲ ಸಮರ ಈ ಚುನಾವಣೆ ಮೂಲಕ ಸಹಕಾರ ರಂಗಕ್ಕೂ ಕಾಲಿಡುವಂತೆ ಕಾಣುತ್ತಿದೆ ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ ಒಟ್ಟು 16 ಹಾಲು ಒಕ್ಕೂಟಗಳಿವೆ. ಇನ್ನು ಎರಡು ತಿಂಗಳಲ್ಲಿ ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕೆಎಂಎಫ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟೇ ಬಮೂಲ್ ಚುನಾವಣೆಗೆ ಸ್ಪರ್ಧಿಸಿದ್ದ ಡಿ.ಕೆ.ಸುರೇಶ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಕಾಂಗ್ರೆಸ್ ವಲಯದಲ್ಲಿ ವಿಶ್ಲೇಷಿಸಲಾಗಿದೆ. ಇತ್ತೀಚೆಗೆ ಕೋಮುಲ್ ಅಧ್ಯಕ್ಷರಾಗಿ ಆಯ್ಕೆಯಾದ ಮಾಲೂರು ಶಾಸಕ ಕೆ.ವೈ. ನಂಜೇಗೌಡ ಕೂಡ, ‘ಕೆಎಂಎಫ್ ಅಧ್ಯಕ್ಷ ಸ್ಥಾನ ನನಗೇ ಸಿಗುವ ವಿಶ್ವಾಸವಿದೆ. ಭೀಮಾನಾಯ್ಕ ನಂತರ ಅಧ್ಯಕ್ಷ ಸ್ಥಾನವನ್ನು ನನಗೆ ಕೊಡಬೇಕೆಂದು ಮಾತುಕತೆ ಆಗಿತ್ತು. ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನನ್ನ ಪರವಾಗಿ ಮುಖ್ಯಮಂತ್ರಿ ಬಳಿ ಮಾತಾಡಿದ್ದರು’ ಎಂದು ಹೇಳಿಕೊಂಡಿದ್ದರು.

ರಾಬಕೊವಿಗೆ ಅಧ್ಯಕ್ಷರಾಗಿ ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಆಯ್ಕೆಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತಾ ‘ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ’ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ರಾಘವೇಂದ್ರ ಹಿಟ್ನಾಳ್ ಇತ್ತೀಚೆಗೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿ ಮಾಡಿ ಕೆಎಂಎಫ್ ಅಧ್ಯಕ್ಷ ಸ್ಥಾನದ ವಿಷಯ ಕುರಿತು ಚರ್ಚಿಸಿದ್ದರು.

ರಾಘವೇಂದ್ರ ಹಿಟ್ನಾಳ್ ಅವರಿಗೆ ಅಧ್ಯಕ್ಷ ಸ್ಥಾನ ಕೊಡಿಸಲು ಸಿದ್ದರಾಮಯ್ಯ ಆಪ್ತ ಬಳಗ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದೆ. ಇತ್ತ ಅಧ್ಯಕ್ಷ ಸ್ಥಾನಕ್ಕಾಗಿ ತಮ್ಮ ಸಹೋದರನಿಗೆ ಪಟ್ಟ ಕಟ್ಟಲು ಡಿ.ಕೆ. ಶಿವಕುಮಾರ್ ರಣತಂತ್ರ ರೂಪಿಸುತ್ತಿದ್ದಾರೆ ಎಂಬ ಮಾಹಿತಿಯಿದೆ.

ಚಿಟಿಕೆ ಸುದ್ದಿ

‘ಬಸವಣ್ಣನವರ ತತ್ವ, ಸಿದ್ಧಾಂತ ವಿಎಚ್‌ಪಿ ಒಪ್ಪಿದೆ’

ಹುಮನಾಬಾದ್ (ಬೀದರ್ ಜಿಲ್ಲೆ): ‘ಬಸವಣ್ಣನ ಅವರ ತತ್ವ ಸಿದ್ಧಾಂತವನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಒಪ್ಪಿಕೊಂಡಿದೆ’ ಎಂದು ವಿಎಚ್‌ಪಿ ಅಂತರರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಭಾನುವಾರ ಇಲ್ಲಿ ತಿಳಿಸಿದರು.

ಇಲ್ಲಿನ ಮಾಣಿಕ ಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವೀರಶೈವ ಮತ್ತು ಲಿಂಗಾಯತ ಸಮಾಜದ ಗುರುತು ಉಳಿಸಿಕೊಂಡು ಆ ಸಮುದಾಯದವರನ್ನು ವಿಶಾಲ ಹಿಂದೂ ಸಮಾಜದ ಭಾಗವೆಂದು ವಿಎಚ್‌ಪಿ ಪರಿಗಣಿಸುತ್ತದೆ’ ಎಂದು ಹೇಳಿದರು.

‘ಹಿಂದೂ ಧರ್ಮ ಒಡೆಯುವ ಉದ್ದೇಶದಿಂದ ಕೆಲವರು ಪ್ರತ್ಯೇಕ ಲಿಂಗಾಯತ ಧರ್ಮ ಎನ್ನುತ್ತಿದ್ದಾರೆ’ ಎಂದೂ ದೂರಿದರು.

ಧರ್ಮಸ್ಥಳ ಕ್ಷೇತ್ರಕ್ಕೆ ಮಹೀಂದ್ರ ಹೊಸ ಕಾರು ಕೊಡುಗೆ



ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಜತಗೆ ಮಹೇಂದ್ರ ಕಂಪೆನಿಯ ವಿನಯ್ ಖಾನೋಲ್ಕರ್

ಉಜಿರೆ (ದಕ್ಷಿಣ ಕನ್ನಡ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಹೊಸ ಮಾದರಿಯ ಬಿಇ6 ಕಾರನ್ನು ಧರ್ಮಸ್ಥಳ ಕ್ಷೇತ್ರಕ್ಕೆ ಕೊಡುಗೆ ನೀಡಿದೆ.

ಕಂಪನಿಯ ಉತ್ಪಾದನಾ ವಿಭಾಗದ ಮುಖ್ಯಸ್ಥ ವಿನಯ್ ಖಾನೋಲ್ಕರ್ ಭಾನುವಾರ ಇಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಕಾರಿನ ಕೀ ಹಸ್ತಾಂತರಿಸಿದರು.

‘ತಯಾರಾದ ಹೊಸ ಮಾದರಿ ಕಾರನ್ನು ಕಾಣಿಕೆಯಾಗಿ ಧರ್ಮಸ್ಥಳಕ್ಕೆ ನೀಡುವುದು ಕಂಪನಿ ಸಂಪ್ರದಾಯ. ಇದರಿಂದ ಕಂಪನಿ ಪ್ರಗತಿ ಸಾಧಿಸಿದೆ’ ಎಂದು ವಿನಯ್ ಅವರು ಹೇಳಿದರು.

ವೀರೇಂದ್ರ ಹೆಗ್ಗಡೆ ಅವರು ಮಾತನಾಡಿ, ‘ಕಂಪನಿಯು ಕ್ಷೇತ್ರಕ್ಕೆ ಅರ್ಪಿಸಿದ ಮೂರನೇ ಕಾರು ಇದಾಗಿದೆ. ಇದನ್ನು ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ಕೆ ಬಳಸಲಾಗುವುದು’ ಎಂದರು. ಬಳಿಕ ಹೆಗ್ಗಡೆಯವರು ಕಾರು ಚಾಲನೆ ಮಾಡಿ ಶುಭ ಹಾರೈಸಿದರು.

ಬಾಲಕಿ ಜತೆಗೆ ಮದುವೆ: ‘ತಾತಪ್ಪ’ನ ಬಂಧನ

ರಾಯಚೂರು: ಬಾಲಕಿಯನ್ನು ವಿವಾಹವಾಗಿದ್ದ ಆರೋಪದ ಮೇರೆಗೆ ಇಲ್ಲಿನ ಶಕ್ತಿ ನಗರದ ತಾತಪ್ಪ ಎಂಬ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ರಾಯಚೂರು ಸಮೀಪದ ಗುರ್ಜಾಪುರ ಸೇತುವೆ ಬಳಿ ಇತ್ತೀಚೆಗೆ ತಾತಪ್ಪ ಕೃಷ್ಣಾ ನದಿಯಲ್ಲಿ ಬಿದ್ದಿದ್ದ ಘಟನೆ ನಡೆದಿತ್ತು. ನಂತರ ತಾತಪ್ಪ ಬಾಲ್ಯವಿವಾಹವಾಗಿದ್ದು ಗೊತ್ತಾಗಿತ್ತು.

ತಾತಪ್ಪ ನದಿಗೆ ಬಿದ್ದಿದ್ದ ವಿಷಯ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡಿತ್ತು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಬಾಲ್ಯವಿವಾಹದ ಸಂಶಯ ವ್ಯಕ್ತಪಡಿಸಿ, ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿತ್ತು.

ಆಯೋಗದ ಸೂಚನೆಯಂತೆ ಅಪ್ರಾಪ್ತ ಬಾಲಕಿ ಓದಿರುವ ಶಾಲಾ ದಾಖಲಾತಿ ಪರಿಶೀಲನೆ ಮಾಡಿದಾಗ ತಾತಪ್ಪ ಬಾಲ್ಯವಿವಾಹವಾಗಿದ್ದು ಬಹಿರಂಗವಾಗಿತ್ತು.

ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಪೋಕ್ಸೊ ಸೇರಿ ವಿವಿಧ ಕಾಯ್ದೆಗಳಡಿ ಪ್ರಕರಣ ದಾಖಲಿಸಲು ಯಾದಗಿರಿ ಹಾಗೂ ರಾಯಚೂರು ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಿಗೆ ನಿರ್ದೇಶಿಸಿದರು.

‘ಕೋರ್ಟ್ ತೀರ್ಪಿಗೆ ಎಲ್ಲರೂ ತಲೆಬಾಗಬೇಕು’

ಪ್ರಜಾವಾಣಿ ವಾರ್ತೆ

ಧರ್ಮಪುರ (ಚಿತ್ರದುರ್ಗ): ‘ಕೋರ್ಟ್ ತೀರ್ಪಿಗೆ ಎಲ್ಲರೂ ತಲೆ ಬಾಗಲೇಬೇಕು. ತೀರ್ಪಿನ ಬಗ್ಗೆ ಈಗ ಹೆಚ್ಚು ವಿಶ್ಲೇಷಣೆ ಮಾಡುವ ಅಗತ್ಯವಿಲ್ಲ’ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇಲ್ಲಿ ಹೇಳಿದರು.



ನಿಖಿಲ್ ಕುಮಾರಸ್ವಾಮಿ

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವಮಾನ ಪರ್ಯಂತ ಕಠಿಣ ಜೈಲು ಶಿಕ್ಷೆ ವಿಧಿಸಿದ್ದರ ಬಗ್ಗೆ ಭಾನುವಾರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

‘ಆರೋಪ ಕೇಳಿಬಂದಾಗಲೇ ಪಕ್ಷದ ವರಿಷ್ಠರು ಪ್ರಜ್ವಲ್ ರೇವಣ್ಣ ಅವರನ್ನು ಪಕ್ಷದಿಂದ ಅಮಾನತು ಮಾಡಿದ್ದರು. ಈ ಬಗ್ಗೆ ಈಗ ಹೆಚ್ಚು ಮಾತನಾಡಲ್ಲ’ ಎಂದರು.

ಧರ್ಮದ ಹೆಸರಿನಲ್ಲಿ ದ್ವೇಷ: ಸಿ.ಎಂ

ಬೆಳಗಾವಿ ಪ್ರಕರಣ: ಬಿಜೆಪಿ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷ ಬಿತ್ತಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೂಲಿಕಟ್ಟಿ ಗ್ರಾಮದ ಶಾಲೆಯ ಮುಖ್ಯೋಪಾಧ್ಯಾಯರು ಮುಸ್ಲಿಂ ಸಮುದಾಯವರೆಂಬ ಕಾರಣಕ್ಕೆ ಅವರನ್ನು ವರ್ಗಾವಣೆ ಮಾಡಿಸುವ ದುರುದ್ದೇಶದಿಂದ ಮಕ್ಕಳ ಕುಡಿಯುವ ನೀರಿಗೆ ವಿಷ ಹಾಕಿದ ಪ್ರಕರಣ ಉಲ್ಲೇಖಿಸಿ ‘ಎಕ್ಸ್’ ಮಾಡಿರುವ ಮುಖ್ಯಮಂತ್ರಿ, ‘ಧಾರ್ಮಿಕ ಮೂಲಭೂತವಾದ, ಕೋಮು ವೈಷಮ್ಯ ಎನ್ನುವುದು ಎಂತಹ ಹೀನ ಕೃತ್ಯವನ್ನೂ ಮಾಡಿಸಬಲ್ಲದು ಎಂಬುದಕ್ಕೆ ಪುಟ್ಟ ಮಕ್ಕಳ ಮಾರಣ ಹೋಮಕ್ಕೆ ಕಾರಣವಾಗಬಹುದಾಗಿದ್ದ ಈ ಘಟನೆಯೇ ಸಾಕ್ಷಿ’ ಎಂದಿದ್ದಾರೆ.



ಸಿದ್ದರಾಮಯ್ಯ

‘ದಯೆಯೇ ಧರ್ಮದ ಮೂಲವಯ್ಯ’ ಎಂದು ಸಾರಿದ ಶರಣರ ನಾಡಿನಲ್ಲಿ ಈ ಮಟ್ಟದ ಕ್ರೌರ್ಯ, ದ್ವೇಷ ಹುಟ್ಟಲು ಸಾಧ್ಯವೇ? ಎಂಬುದನ್ನು ಈ ಕ್ಷಣಕ್ಕೂ ನನ್ನಿಂದ ನಂಬಲಾಗುತ್ತಿಲ್ಲ.

ಈ ಘಟನೆಯ ಹೊಣೆಯನ್ನು ಪ್ರಮೋದ್ ಮುತಾಲಿಕ್ ಹೊರುವರೇ? ಬಿ.ವೈ. ವಿಜಯೇಂದ್ರ ಹೊರುವರೇ? ಆರ್. ಅಶೋಕ ಹೊರುವರೇ? ಇಂಥವರು ಮಾಡುವ ಸಮಾಜಘಾತುಕ ಕೃತ್ಯಗಳಿಗೆ ಸದಾ ಬೆಂಬಲವಾಗಿ ನಿಲ್ಲುವ ನಾಯಕರು ಈಗ ಮುಂದೆ ಬಂದು ತಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲಿ’ ಎಂದು ಮುಖ್ಯಮಂತ್ರಿ ಕುಟುಕಿದ್ದಾರೆ.

‘ನನಗೆ ಈಗಲೂ ನಂಬಿಕೆಯಿದೆ, ಕೋಮುವಾದಿಗಳ ಸಂಖ್ಯೆಗಿಂತ ಕೂಡಿ ಬಾಳಬೇಕೆಂದು ಬಯಸುವ ಜನರ ಸಂಖ್ಯೆ ನೂರು ಪಟ್ಟು ಹೆಚ್ಚಿದೆ. ಮಕ್ಕಳ ಹತ್ಯಾಕಾಂಡ ನಡೆಸುವ ದುಷ್ಟ ಹುನ್ನಾರವನ್ನು ಪೊಲೀಸ್ ಸಿಬ್ಬಂದಿ ಭೇದಿಸಿದ್ದಾರೆ. ಇಂತಹ ಹೀನಕೃತ್ಯ ಎಸಗಿದ ದುರುಳರಿಗೆ ನ್ಯಾಯ ವ್ಯವಸ್ಥೆ ತಕ್ಕ ಶಿಕ್ಷೆ ನೀಡಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹೂವಿನಕೋಣೆ: ಟ್ಯಾಂಕ್‌ಗೆ ವಿಷ ಹಾಕಿದ್ದು ವಿದ್ಯಾರ್ಥಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹೊಸನಗರ ತಾಲ್ಲೂಕಿನ ಹೂವಿನಕೋಣೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕುಡಿಯುವ ನೀರಿನ ಟ್ಯಾಂಕ್‌ಗೆ ಅದೇ ಶಾಲೆಯ ಐದನೇ ತರಗತಿ ವಿದ್ಯಾರ್ಥಿಯೇ ಕೀಟನಾಶಕ ಬೆರೆಸಿದ್ದ ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಶಾಲೆಯಲ್ಲಿ ಪರಿಶೀಲನೆ ನಡೆಸಿದಾಗ ವಿದ್ಯಾರ್ಥಿಯ ಬ್ಯಾಗ್‌ನಲ್ಲಿ ಕೀಟನಾಶಕದ ವಾಸನೆ ಬಂದಿದ್ದು, ಆತನ ಕೈ ಕೂಡ ವಾಸನೆಯಿಂದ ಕೂಡಿತ್ತು. ಕರೆದು ವಿಚಾರಣೆ ನಡೆಸಿದಾಗ ಪೋಷಕರು ಶುಂಠಿ ಬೆಳೆಯ ರೋಗಕ್ಕೆ ಹಾಕಲು ಮನೆಯಲ್ಲಿ ಇಟ್ಟಿದ್ದ ಔಷಧಿಯನ್ನು ತಂದು ನೀರಿನ ಟ್ಯಾಂಕ್‌ಗೆ ಹಾಕಿದ್ದಾಗಿ ಒಪ್ಪಿಕೊಂಡಿದ್ದಾನೆ. ಎಲ್ಲರ ಗಮನ ಸೆಳೆಯಲು, ಕುತೂಹಲಕ್ಕಾಗಿ ಕೃತ್ಯವೆಸಗಿದ್ದಾಗಿ ಮಾಹಿತಿ ನೀಡಿದ್ದಾನೆ ಎಂದು ತಿಳಿದುಬಂದಿದೆ.

‘ಕೆಲ ದಿನಗಳ ಹಿಂದೆ ಎರಡನೇ ತರಗತಿ ವಿದ್ಯಾರ್ಥಿ ಶೌಚಾಲಯದಲ್ಲಿ ಇಟ್ಟಿದ್ದ ಫಿನಾಯಿಲ್ ತಂದು ಶಾಲೆಯಲ್ಲಿ ಇಟ್ಟಿದ್ದ ಕುಡಿಯುವ ನೀರಿನ ಬಾಟಲಿಗೆ ಹಾಕಿದ್ದ. ಅದನ್ನು ಗಮನಿಸಿದ್ದ ಶಿಕ್ಷಕರು ಆ ನೀರು ಚೆಲ್ಲಿ, ಆ ವಿದ್ಯಾರ್ಥಿಗೆ ಎಚ್ಚರಿಕೆ ನೀಡಿದ್ದರು. ಆ ನಂತರ ಎಲ್ಲರೂ ಎರಡನೇ ತರಗತಿ ವಿದ್ಯಾರ್ಥಿ ಬಗ್ಗೆ ಮಾತನಾಡುತ್ತಿದ್ದರು. ಇದು ಟ್ಯಾಂಕ್‌ಗೆ ಕೀಟನಾಶಕ ಬೆರೆಸಲು 5ನೇ ತರಗತಿ ವಿದ್ಯಾರ್ಥಿಗೆ ಪ್ರೇರಣೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೃತ್ಯವೆಸಗಿದ ಬಾಲಕ ಶಾಲೆಯ ವಿದ್ಯಾರ್ಥಿ ಪರಿಷತ್‌ನಲ್ಲಿ ‘ಮುಖ್ಯಮಂತ್ರಿ’ ಆಗಿದ್ದ. ಹೀಗಾಗಿ ನಿತ್ಯ ಶಿಕ್ಷಕರು ಹಾಗೂ ಇತರೆ ವಿದ್ಯಾರ್ಥಿಗಳಿಗಿಂತ ಮುಂಚೆ ಬಂದು ಕೊಠಡಿಗಳ ಸ್ವಚ್ಛತೆ, ಟ್ಯಾಂಕ್‌ಗಳಲ್ಲಿ ಇರುವ ನೀರಿನಮಟ್ಟ ಪರಿಶೀಲಿಸುತ್ತಿದ್ದ.

ಅದೇ ರೀತಿ ಜುಲೈ 31ರಂದು ಮೊದಲೇ ಶಾಲೆಗೆ ಬಂದಿದ್ದು, ಟ್ಯಾಂಕ್‌ನಲ್ಲಿ ಕೀಟನಾಶಕ ಬೆರೆಸಿದ್ದ’ ಎಂದು ಮೂಲಗಳು ಹೇಳಿವೆ.

ಒಳ ಮೀಸಲಾತಿ: ಸಿ.ಎಂಗೆ ಇಂದು ವರದಿ

ಒಂದನೇ ಪುಟದಿಂದ...

ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಕುಟುಂಬಗಳ ದತ್ತಾಂಶ ಸಂಗ್ರಹಿಸಲು ರಾಜ್ಯದಾದ್ಯಂತ ಮೇ 5ರಿಂದ ವಿವಿಧ ಹಂತಗಳಲ್ಲಿ ‘ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆ’ ನಡೆದಿತ್ತು. ಸಂಗ್ರಹಿಸಲಾದ ದತ್ತಾಂಶಗಳನ್ನು ಇ-ಆಡಳಿತ ಇಲಾಖೆಯ ಸಹಯೋಗದಲ್ಲಿ ವಿಶ್ಲೇಷಿಸಲಾಗಿದೆ. ಮೂಲ ವರದಿಗೆ ಪೂರಕವಾಗಿ ಸಂಪುಟಗಳಲ್ಲಿ ದತ್ತಾಂಶಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಆಯೋಗದ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ 2025ರ ವೇಳೆಗೆ ಪರಿಶಿಷ್ಟ ಜಾತಿಯವರ ಜನಸಂಖ್ಯೆಯನ್ನು ಅಂದಾಜಿಸಿ (1.16 ಕೋಟಿ) ಸಮೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ಹೊರತುಪಡಿಸಿ, ಜಿಲ್ಲೆಗಳಲ್ಲಿ ಸಮೀಕ್ಷೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲಾಗಿದೆ. 2025ರ ಅಂದಾಜು ಜನಸಂಖ್ಯೆಗೆ ಹೋಲಿಸಿದರೆ 12 ಜಿಲ್ಲೆಗಳಲ್ಲಿ ಶೇ 100 ಮತ್ತು ಅದಕ್ಕಿಂತ ಹೆಚ್ಚು ಜನರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದಾರೆ. ಕೆಲವು ಕುಟುಂಬಗಳಿಗೆ ಮೂಲ ಜಾತಿ ಗೊತ್ತಿದ್ದರೂ ಆ ಜಾತಿಗಳು ಪರಿಶಿಷ್ಟ 101 ಜಾತಿ ಪಟ್ಟಿಯಲ್ಲಿ ಇಲ್ಲದ ಕಾರಣ ಸಮೀಕ್ಷೆಯಲ್ಲಿ ನಮೂದಿಸಲು ಸಾಧ್ಯ ಆಗಿಲ್ಲ. ಇನ್ನೂ ಕೆಲವರಿಗೆ ತಮ್ಮ ಮೂಲ ಜಾತಿ ಗೊತ್ತಿದ್ದರೂ ಉಪ ಜಾತಿಯ ಹೆಸರು ಸಾಮಾಜಿಕವಾಗಿ ಅವಮಾನ ಹುಟ್ಟಿಸುವ ಪದಗಳು ಎನ್ನುವುದೂ ಸೇರಿದಂತೆ ನಾನಾ ಕಾರಣಗಳಿಗೆ ಹೇಳಿಕೊಳ್ಳಲು ನಿರಾಕರಿಸಿದ್ದಾರೆ. ಕೆಲವರು ಆದಿ ದ್ರಾವಿಡ, ಆದಿ ಆಂಧ್ರ, ಆದಿ ಕರ್ನಾಟಕ ಎಂದೇ ನಮೂದಿಸಿದ್ದಾರೆ. ಈ ಎಲ್ಲ ಕಾರಣಗಳಿಗೆ ಆಯೋಗ ಸಲ್ಲಿಸುವ ವರದಿಯು ಕುತೂಹಲಕ್ಕೆ ಕಾರಣವಾಗಿದೆ.

‘ಎಸ್‌ಐಟಿಗೆ ಮುಖ್ಯಮಂತ್ರಿ ಪದಕ’

ಬೆಂಗಳೂರು: ‘ಪ್ರಜ್ವಲ್ ರೇವಣ್ಣ ಪ್ರಕರಣವನ್ನು ರಾಜಕೀಯ ದೃಷ್ಟಿಯಿಂದ ನೋಡಲೇಬಾರದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಎಸ್‌ಐಟಿ ಅಚ್ಚುಕಟ್ಟಾಗಿ ತನಿಖೆ ಮಾಡಿದೆ. ಈ ತಂಡದವರಿಗೆ ಮುಖ್ಯಮಂತ್ರಿ ಪದಕ ಕೊಡುತ್ತೇವೆ. ರಾಷ್ಟ್ರಪತಿ ಪದಕಕ್ಕೂ ಶಿಫಾರಸು ಮಾಡುತ್ತೇವೆ’ ಎಂದರು.

ಒಳ ಮೀಸಲಾತಿ ಜಾರಿಗೆ ಬದ್ಧ: ಒಳ ಮೀಸಲಾತಿಗಾಗಿ ಮಾದಿಗ ಸಮುದಾಯಗಳ ಒಕ್ಕೂಟ ಪ್ರತಿಭಟನೆಗೆ ಕರೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಸರ್ಕಾರ ಬದ್ಧವಾಗಿದೆ. ಈ ಬಗ್ಗೆ ಚಿತ್ರದುರ್ಗದಲ್ಲಿ ನಡೆದಿದ್ದ ಪಕ್ಷದ ಸಮಾವೇಶದಲ್ಲಿಯೇ ಘೋಷಣೆ ಮಾಡಲಾಗಿತ್ತು. ನಮ್ಮ ಪ್ರಣಾಳಿಕೆಯಲ್ಲೂ ಭರವಸೆ ಇದೆ. ಯಾರಿಗೂ ಅನ್ಯಾಯ ಆಗದಂತೆ ನಾವು ಜಾರಿ ಮಾಡುತ್ತೇವೆ’ ಎಂದು ಮಾಹಿತಿ ನೀಡಿದರು..

ಪ್ರಜ್ವಲ್ ರೇವಣ್ಣ ಕೈದಿ ನಂ.15528

ಒಂದನೇ ಪುಟದಿಂದ...

ಎರಡು ವರ್ಷಗಳ ಅನುಭವದ ನಂತರ, ಕೌಶಲಪೂರ್ಣ ವರ್ಗಕ್ಕೆ ಬಡ್ತಿ ನೀಡಲಾಗುತ್ತದೆ. ಆಗ ಕೈದಿಗೆ ಸಿಗುವ ಸಂಬಳ ದಿನಕ್ಕೆ ₹615. ಮೂರು ವರ್ಷಗಳ ನಂತರ, ಅವರನ್ನು ಹೆಚ್ಚು ನುರಿತ ಕೆಲಸಗಾರರು ಎಂದು ಪರಿಗಣಿಸಿ ದಿನಕ್ಕೆ₹663 ಸಂಬಳ ನೀಡಲಾಗುವುದು. ‘ನ್ಯಾಯಾಲಯದ ತೀರ್ಪಿನ ಬಳಿಕ ಪ್ರಜ್ವಲ್ ಮೌನಕ್ಕೆ ಶರಣಾಗಿದ್ದು, ತಡರಾತ್ರಿವರೆಗೂ ಬ್ಯಾರಕ್‌ನಲ್ಲಿ ಚಿಂತೆಯಲ್ಲಿ ಮುಳುಗಿದ್ದರು. ಶನಿವಾರ ರಾತ್ರಿ ಊಟ ಸೇವಿಸಲಿಲ್ಲ. ವೈದ್ಯರು ಆರೋಗ್ಯ ತಪಾಸಣೆಗೆ ಬಂದಿದ್ದ ವೇಳೆ ಕಣ್ಣೀರು ಹಾಕಿದರು. ಭಾನುವಾರ ಬೆಳಿಗ್ಗೆ 6.30ಕ್ಕೆ ಎದ್ದು, ನಿತ್ಯಕರ್ಮ ಮುಗಿಸಿದರು. ಜೈಲು ಸಿಬ್ಬಂದಿ ನೀಡಿದ ಅವಲಕ್ಕಿ- ಉಪ್ಪಿಟ್ಟು ಸೇವಿಸಿದರು’ ಎಂದು ಮೂಲಗಳು ಹೇಳಿವೆ.

ಮುಂಗಾರು ಬಿರುಸು; 3 ಜಲಾಶಯಗಳಲ್ಲಿ 5 ಸಾವಿರ ದಶಲಕ್ಷ ಯೂನಿಟ್ ತಯಾರಿಸುವಷ್ಟು ನೀರು ಸಂಗ್ರಹ

ಹೆಚ್ಚಿದ ಜಲವಿದ್ಯುತ್ ಉತ್ಪಾದನೆ

• ಗಾಣಧಾಳು ಶ್ರೀಕಂಠ

ಬೆಂಗಳೂರು: ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆಯ ಪ್ರಮಾಣ ಹೆಚ್ಚಾಗಿದ್ದು, ಜುಲೈ ತಿಂಗಳ ಮೂರನೇ ವಾರದಲ್ಲೇ 1227.28 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ. ಕಳೆದ ವರ್ಷ ಇಡೀ ತಿಂಗಳ ವಿದ್ಯುತ್ ಉತ್ಪಾದನೆ 1136.31 ದಶಲಕ್ಷ ಯೂನಿಟ್‌ನಷ್ಟಿತ್ತು.

ಮುಂಗಾರು ಉತ್ತಮವಾಗಿರುವ ಕಾರಣ ಲಿಂಗನಮಕ್ಕಿ, ಸೂಪಾ ಮತ್ತು ಮಾಣಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಪ್ರಸ್ತುತ ಮೂರು ಜಲಾಶಯಗಳಲ್ಲಿ ಒಟ್ಟು 5,963.27 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸುವಷ್ಟು ನೀರು ಸಂಗ್ರಹವಾಗಿದೆ. ಸುಮಾರು ಆರು ತಿಂಗಳಿಗಾಗುವಷ್ಟು ವಿದ್ಯುತ್ ಉತ್ಪಾದಿಸಬಹುದು ಎಂದು ಇಂಧನ ಇಲಾಖೆ ಮೂಲಗಳು ತಿಳಿಸಿವೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ (ಕೆಪಿಸಿಎಲ್) ಲಭ್ಯವಾಗಿರುವ ಮಾಹಿತಿ ಪ್ರಕಾರ, ಲಿಂಗನಮಕ್ಕಿ ಜಲಾಶಯದಲ್ಲಿ ಪ್ರಸ್ತುತ 550.118(1804.85 ಅಡಿ) ಮೀಟರ್‌ನಷ್ಟು ನೀರಿದೆ. ಒಟ್ಟು ಸಾಮರ್ಥ್ಯದಲ್ಲಿ ಶೇ 70.84ರಷ್ಟು ಭರ್ತಿಯಾಗಿದೆ. 3527.42 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು.

ಸೂಪಾದಲ್ಲಿ 547.45 ಮೀಟರ್ ನಷ್ಟು(ಶೇ 57.27ರಷ್ಟು ಭರ್ತಿ) ನೀರು ಸಂಗ್ರಹವಿದೆ. 1809.35ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಹುದು ‘ಮಾಣಿ’ಯಲ್ಲಿ 588.02 ಮೀಟರ್‌ನಷ್ಟು (ಶೇ 64.40ರಷ್ಟು ಭರ್ತಿ)ನೀರು ತುಂಬಿದೆ. 626.5 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು. ಈ ಮೂರು ಜಲಾಶಯಗಳಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಶೇ 10 ರಿಂದ 15ರಷ್ಟು ನೀರಿನ ಸಂಗ್ರಹ ಹೆಚ್ಚಾಗಿದೆ.

ಕಳೆದ ವರ್ಷ ಈ ಅವಧಿಯಲ್ಲೂ ಉತ್ತಮ ಮಳೆಯಾಗಿತ್ತು, ಒಳ ಹರಿವು ಹೆಚ್ಚಿತ್ತು. ಆದರೆ, ಜಲಾಶಯಗಳಲ್ಲಿ ನೀರು ಕಡಿಮೆ ಇತ್ತು. ಆದರೆ, ಈ ಬಾರಿ ಬೇಸಿಗೆಯಲ್ಲಿ ಮಳೆ ಬೇಗ ಆರಂಭವಾಗಿದ್ದರಿಂದ, ವಿದ್ಯುತ್ ಬೇಡಿಕೆಯೂ ಕಡಿಮೆಯಾಯಿತು. ಜೂನ್-ಜುಲೈ ತಿಂಗಳಲ್ಲಿ ಉತ್ತಮ ಮಳೆಯಾಗಿದ್ದು ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಹಿಂದಿನ ವರ್ಷ ಜುಲೈನಲ್ಲಿ ಜಲವಿದ್ಯುತ್ ಘಟಕಗಳಿಂದ ಪ್ರತಿನಿತ್ಯ ಸರಾಸರಿ 58.17 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿತ್ತು. ಈಗ ಸರಾಸರಿ 68 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಸದ್ಯ ರಾಜ್ಯದ ದೈನಂದಿನ ವಿದ್ಯುತ್ ಬೇಡಿಕೆಯು 264 ದಶಲಕ್ಷ ಯೂನಿಟ್ ಇದ್ದು, ಇಷ್ಟು ವಿದ್ಯುತ್ ಬೇರೆ ಬೇರೆ ಮೂಲಗಳಿಂದ ಲಭ್ಯವಾಗುತ್ತಿದೆ.

ಜುಲೈ ತಿಂಗಳ ವಿದ್ಯುತ್ ಉತ್ಪಾದನೆ (ದಶಲಕ್ಷ ಯೂನಿಟ್‌ಗಳಲ್ಲಿ)

ಸ್ಥಾವರ	2023	2024	2025
ಶರಾವತಿ	195.26	306.60	355.24
ನಾಗ್ಝರಿ	235.82	273.35	260.36
ವಾರಾಹಿ	95.90	185.11	161.84
ಇತರೆ	229.61	371.25	449.84
ಒಟ್ಟು	756.59	1136.31	1227.28



ಮಹಾತ್ಮಗಾಂಧಿ ಪವರ್ ಸ್ಟೇಷನ್ ಮತ್ತು ಶರಾವತಿ ನದಿ (ಸಾಂದರ್ಭಿಕಚಿತ್ರ)

ವಿದ್ಯುತ್ ಉತ್ಪಾದನೆ ಹೆಚ್ಚಳ

ರಾಜ್ಯದಲ್ಲಿ ಕಳೆದ ವರ್ಷ ಜುಲೈನಲ್ಲಿ ನಿತ್ಯ ಸರಾಸರಿ 226.25 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿತ್ತು. ಈಗ ಪ್ರತಿನಿತ್ಯ 264.25 ದಶಲಕ್ಷ ಯೂನಿಟ್ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ವಿದ್ಯುತ್ ಉತ್ಪಾದನೆಯು 38 ದಶಲಕ್ಷ ಯೂನಿಟ್‌ನಷ್ಟು ಹೆಚ್ಚಳವಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನಮ್ಮ ಸುತ್ತಲಿನ ಜೀವಿಗಳ ಬದುಕಿಗೆ ಸ್ಪಂದಿಸುತ್ತ ನಮ್ಮ ಬದುಕು ಸಾಗಬೇಕು. ಹಾಗೆ ಸ್ಪಂದಿಸದಿದ್ದರೆ ನಾವು ಬದುಕಿದಂತೆಯೇ ಅಲ್ಲ.

–ಶಿವರಾಮ ಕಾರಂತ

ಸಂಪಾದಕೀಯ

ಪ್ರಜ್ವಲ್ ರೇವಣ್ಣಗೆ ಜೈಲುಶಿಕ್ಷೆ ಜನರ ನಂಬಿಕೆಗೆ ಕಾನೂನುಬಲ

ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿ ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಜೀವಾವಧಿ ಕಠಿಣ ಜೈಲುಶಿಕ್ಷೆ ವಿಧಿಸಿದೆ. ಮನೆಗೆಲಸದ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿರುವ ಅಪರಾಧದಲ್ಲಿ ಜೈಲು ಶಿಕ್ಷೆ ಅನುಭವಿಸುವುದರ ಜೊತೆಗೆ, ₹11.25 ಲಕ್ಷ ಪರಿಹಾರವನ್ನು ಸಂತ್ರಸ್ತೆಗೆ ಮತ್ತು ₹35 ಸಾವಿರ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಬೇಕು ಎಂದು ನ್ಯಾಯಾಧೀಶರು ಆದೇಶಿಸಿದ್ದಾರೆ. ಶಾಸಕರು ಹಾಗೂ ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ನೀಡಿರುವ ಈ ತೀರ್ಪು, ಸಾಮಾಜಿಕ ಸ್ವಾಸ್ಥ್ಯದ ಬಗ್ಗೆ ಕಾಳಜಿ ಉಳ್ಳವರಿಗೆ ಸಮಾಧಾನ ತರುವಂತಹದ್ದು ಹಾಗೂ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಗೌರವ ಮೂಡಿಸುವಂತಹದ್ದು. ಪ್ರಜ್ವಲ್‌ಗೆ ಆಗಿರುವ ಜೈಲುಶಿಕ್ಷೆಗೆ ಸಾಮಾಜಿಕ ಹಾಗೂ ರಾಜಕೀಯ ಮಹತ್ವವೂ ಇದೆ. ಅಧಿಕಾರ, ಹಣ ಹಾಗೂ ಜಾತಿಬಲದಿಂದ ಅಪರಾಧ ಎಸಗಿಯೂ ತಪ್ಪಿಸಿಕೊಳ್ಳಲು ಕೆಲವರಿಗೆ ಸಾಧ್ಯವಿದೆ ಎನ್ನುವ ಭಾವನೆ ಸಾರ್ವಜನಿಕರಲ್ಲಿದೆ. ಇದಕ್ಕೆ ಅಪವಾದ ಎನ್ನುವಂತೆ ಮಾಜಿ ಸಂಸದನಿಗೆ ಕಠಿಣ ಶಿಕ್ಷೆಯಾಗಿರುವುದು ನ್ಯಾಯಾಂಗದ ಬಗೆಗಿನ ಜನಸಾಮಾನ್ಯರ ನಂಬಿಕೆಯನ್ನು ಬಲಪಡಿಸುವ ವಿರಳ ವಿದ್ಯಮಾನವಾಗಿದೆ. ತಪ್ಪು ಮಾಡಿದ ವ್ಯಕ್ತಿ ಎಷ್ಟೇ ಪ್ರಭಾವಿಯಾಗಿದ್ದರೂ ಕಾನೂನು ಕ್ರಮಕ್ಕೆ ಒಳಗಾಗಲೇಬೇಕು ಎನ್ನುವ ಸ್ಥಿತಿ ಸಮಾಜದ ನೈತಿಕಶಕ್ತಿ ಹೆಚ್ಚಿಸುವಂತಹದ್ದು. ರಾಜಕಾರಣಿಗಳಿಗೆ ಸಂಬಂಧಿಸಿದ ಲೈಂಗಿಕ ಹಗರಣಗಳು ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ, ರಾಜಕಾರಣದ ಕೊಳಕು ತೊಳೆಯಲಿಕ್ಕೆ ಪ್ರಜ್ವಲ್ ಪ್ರಕರಣವನ್ನು ಆರಂಭಿಕ ಚಲನೆಯ ರೂಪದಲ್ಲಿ ನೋಡಬಹುದು. ಪ್ರಜೆಗಳಿಗೆ ಸೇವೆ ಸಲ್ಲಿಸಲಿಕ್ಕಾಗಿ ಪ್ರಜಾಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆಯೇ ಹೊರತು, ದೌರ್ಜನ್ಯ ಎಸಗಲು ಅಲ್ಲ ಎನ್ನುವ ಸಂದೇಶವನ್ನು ನ್ಯಾಯಾಲಯ ನೀಡಿರುವ ತೀರ್ಪು ಧ್ವನಿಸುತ್ತಿರುವಂತಿದೆ. ಹಾಸನದ ಯುವ ರಾಜಕಾರಣಿಗೆ ಸಾರ್ವಜನಿಕ ಜೀವನದಲ್ಲಿ ಮಹತ್ವದ್ದನ್ನು ಸಾಧಿಸುವ ಅವಕಾಶವಿತ್ತು. ಆ ಅವಕಾಶವನ್ನು ಅಧಿಕಾರದ ಅಮಲಿನಲ್ಲಿ ಕೈಯಾರೆ ಹಾಳು ಮಾಡಿಕೊಂಡಿದ್ದು ಆತ್ಮಘಾತುಕ ಕೃತ್ಯ ಮಾತ್ರವಾಗಿರದೆ, ಮತದಾರರಿಗೆ ಎಸಗಿರುವ ವಿಶ್ವಾಸದ್ರೋಹವೂ ಆಗಿದೆ. ಯುವ ರಾಜಕಾರಣಿಗಳಿಗೆ ಮೌಲಿಕ ಹಾಗೂ ನೈತಿಕ ಮಾದರಿಯೊಂದರ ಕಲಿಕೆಯ ಪಠ್ಯದ ರೂಪದಲ್ಲಿ ಈ ಘಟನೆಗೆ ಮಹತ್ವವಿದೆ.



ಅಧಿಕಾರ, ಜಾತಿ ಹಾಗೂ ಹಣಬಲದ ಲೆಕ್ಕಾಚಾರಗಳನ್ನು ಮೀರಿ, ಸಂತ್ರಸ್ತ ಮಹಿಳೆಗೆ ನ್ಯಾಯ ದೊರೆತಿರುವುದು ಒಂದು ವಿಶೇಷ ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನ.

2024ರ ಲೋಕಸಭಾ ಚುನಾವಣೆಗೂ ಮುನ್ನ ಪ್ರಜ್ವಲ್ ರೇವಣ್ಣ ಎಸಗಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯಗಳ ದೃಶ್ಯಗಳನ್ನೊಳಗೊಂಡ ಪೆನ್‌ಡ್ರೈವ್‌ಗಳು ಹಾಸನದ ರಸ್ತೆಗಳಲ್ಲಿ ದೊರೆತಿದ್ದವು. ಆ ಪೆನ್‌ಡ್ರೈವ್‌ಗಳಲ್ಲಿನ ದೃಶ್ಯಗಳಲ್ಲಿ, ಯುವ ರಾಜಕಾರಣಿಯ ಕೊಳಕು, ಕ್ರೌರ್ಯ ಹಾಗೂ ವಿಕೃತಿ ಅನಾವರಣಗೊಂಡಿತ್ತು. ಅದರ ಬೆನ್ನಿಗೆ, ಅತ್ಯಾಚಾರದ ಪ್ರಕರಣಗಳೂ ವರದಿಯಾಗತೊಡಗಿ, ಮನೆ ಕೆಲಸದ ಮಹಿಳೆಯ ಮೇಲೆ ನಿರಂತರವಾಗಿ ಅತ್ಯಾಚಾರ ನಡೆದ ದೂರು ದಾಖಲಾಗಿತ್ತು. ಆ ಪ್ರಕರಣ ತಾರ್ಕಿಕ ಹಂತವೊಂದನ್ನು ತಲುಪಿ, ಅಪರಾಧಿಗೆ ಶಿಕ್ಷೆಯಾಗಿದೆ. ಅಧಿಕಾರ ಮತ್ತು ಕುಟುಂಬದ ವರ್ಚಸ್ಸನ್ನು ದುರುಪಯೋಗ ಮಾಡಿಕೊಂಡು ಎಸಗಿದ್ದ ಅಪರಾಧದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಪೊಲೀಸರ ತನಿಖೆ ಹಾಗೂ ವಿಚಾರಣೆ ನಡೆದಿರುವುದು ಗಮನಾರ್ಹ. ಈ ಪ್ರಕರಣ, ರಾಜ್ಯ ರಾಜಕಾರಣದಲ್ಲಿ ಕಪ್ಪುಚುಕ್ಕೆಯಾಗಿ ಉಳಿಯಲಿದೆ. ಪ್ರಜ್ವಲ್ ಪ್ರಕರಣದಲ್ಲಿ ರಾಜಕಾರಣಿಗಳ ಸೋಗಲಾಡಿತನ ಲಜ್ಜೆ ಹುಟ್ಟಿಸುವಂತಿತ್ತು. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಳಂಕಿತನ ಬೆನ್ನಿಗೆ ನಿಂತ ರಾಜಕಾರಣಿಗಳ ಆತ್ಮಾವಲೋಕನಕ್ಕೆ ಪ್ರಸಕ್ತ ತೀರ್ಪು ಒತ್ತಾಯಿಸುವಂತಿದೆ. ಪ್ರಜ್ವಲ್ ವಿರುದ್ಧ ರಾಜಕೀಯ ಕುತಂತ್ರ ನಡೆಯುತ್ತಿದೆ ಎನ್ನುವ ವಿಶ್ಲೇಷಣೆಗಳಿಗೆ ಕೋರ್ಟ್ ತೀರ್ಪು ಉತ್ತರದಂತಿದೆ. ಅಪರಾಧಗಳನ್ನು ಸಹಿಸಿಕೊಳ್ಳುವುದು ಹಾಗೂ ಅಪರಾಧಿಗಳನ್ನು ರಕ್ಷಿಸಲು ಪ್ರಯತ್ನಿಸುವುದು ಸಾಮಾಜಿಕ ಹೊಣೆಗಾರಿಕೆಯ ಲಕ್ಷಣವಲ್ಲ ಹಾಗೂ ಪ್ರಜಾಪ್ರತಿನಿಧಿಗಳಿಗೆ ತಕ್ಕುದಾದ ನಡವಳಿಕೆಯೂ ಅಲ್ಲ ಎನ್ನುವುದನ್ನು ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕು.

ಪ್ರಭಾವಿ ರಾಜಕಾರಣಿಗೆ ಶಿಕ್ಷೆಯಾಗಲಿಕ್ಕೆ ಅತ್ಯಾಚಾರಕ್ಕೆ ಒಳಗಾದ ಮಹಿಳೆ ಪ್ರದರ್ಶಿಸಿದ ದಿಟ್ಟತನ ಪ್ರಮುಖ ಕಾರಣವಾಗಿದೆ. ಭಯ, ಆತಂಕ ಹಾಗೂ ಕುತೂಹಲದ ಕಣ್ಣುಗಳ ನೋಟಕ್ಕೆ ಅಳುಕದೆ ದೂರು ನೀಡಿದ ಸಂತ್ರಸ್ತ ಮಹಿಳೆ, ತನಿಖೆಗೆ ನೀಡಿದ ಸಂಪೂರ್ಣ ಸಹಕಾರದಿಂದಾಗಿ ಪ್ರಕರಣ ತಾರ್ಕಿಕ ಹಂತವೊಂದನ್ನು ಮುಟ್ಟುವುದು ಸಾಧ್ಯವಾಗಿದೆ. ಈ ಮಹಿಳೆಗೆ ದೊರೆತಿರುವ ನ್ಯಾಯ, ಉಳಿದ ಸಂತ್ರಸ್ತ ಮಹಿಳೆಯರಿಗೂ ಸಾಂತ್ವನ ಹಾಗೂ ಧೈರ್ಯ ತುಂಬುವಂತಹದ್ದು. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮಾನ ಹಾಗೂ ಪ್ರಾಣಕ್ಕಂಜಿ ತಮ್ಮ ಸಂಕಟವನ್ನು ಮೌನವಾಗಿ ಸಹಿಸಿಕೊಳ್ಳುವ ಉದಾಹರಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ, ನ್ಯಾಯಕ್ಕಾಗಿ ಹೋರಾಟ ಮಾಡಿದ ಮಹಿಳೆಯ ದಿಟ್ಟತನ ಪ್ರಶಂಸೆಗೆ ಅರ್ಹವಾದುದು. ದೌರ್ಜನ್ಯದ ಸಂಕಟವನ್ನು ಕಡಿಮೆ ಮಾಡಿಕೊಳ್ಳಲಿಕ್ಕೆ ಕಾನೂನು ಹೋರಾಟವೇ ಸರಿಯಾದ ಮಾರ್ಗ ಎನ್ನುವುದಕ್ಕೆ ಸಂತ್ರಸ್ತ ಮಹಿಳೆ ಉದಾಹರಣೆಯಾಗಿ ಉಳಿಯಲಿದ್ದಾಳೆ.

ಜೀವಾವಧಿ ಶಿಕ್ಷೆ



ನಾಲ್ಕು ಗೋಡೆಗಳ ಮಧ್ಯೆ ಕಳೆಯುವ ಜೀವಾವಧಿ ಶಿಕ್ಷೆಗಿಂತಲೂ – ಆ ಮಹಿಳಾ ಪೊಲೀಸ್ ಅಧಿಕಾರಿ, ಪಕ್ಷದ ಕಾರ್ಯಕರ್ತೆ, ಮನೆ ಕೆಲಸದಾಕೆ ಮುಂತಾದವರು ನಾಲ್ಕು ಜನರ ಮಧ್ಯೆ ಅನುಭವಿಸುವ ಜೀವಾವಧಿ ಶಿಕ್ಷೆ ಹೆಚ್ಚಿನದು.

ದುಡ್ಡನಹಳ್ಳಿ ಮಂಜುನಾಥ್, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ



ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ನೂರಾರು ಕೋಟಿ ರೂಪಾಯಿ ಹಣದ ಹೊಳೆ ಹರಿಯುತ್ತಿದೆ. ಪರಿಷತ್ತು ಇಂದು ಕನ್ನಡ ವಿರೋಧಿಗಳ ಕೈಯಲ್ಲಿದೆ. ಪರಿಷತ್ತಿನ ಬಿಕ್ಕಟ್ಟು ಕನ್ನಡ ಭಾಷೆಯ ಅಳಿವು-ಉಳಿವಿನ ಪ್ರಶ್ನೆಯಾಗಿದೆ. ಕಸಾಪ ಇತಿಹಾಸದಲ್ಲೇ ಪ್ರಸಕ್ತ ಅಧ್ಯಕ್ಷರ ಅವಧಿ 'ಕರಾಳ ಯುಗ' ಎಂದು ದಾಖಲಾಗಬೇಕು.

ಮೀನಾಕ್ಷಿ ಬಾಳಿ, ಸಾಮಾಜಿಕ ಹೋರಾಟಗಾರ್ತಿ

25 ವರ್ಷಗಳ ಹಿಂದೆ

ಸೋಮವಾರ, 4-8-2000

• **ಜೀವಂತ ದಹನ**

ವಾರಂಗಲ್, ಆಗಸ್ಟ್ 3 (ಪಿಟಿಐ): ಜಿಲ್ಲೆಯ ತಿಮ್ಮಾಪುರ ಗ್ರಾಮದಲ್ಲಿ ಮಾಯಾಮಂತ್ರದಲ್ಲಿ ತೊಡಗಿದ್ದರು ಎಂದು ಆಪಾದಿಸಿ ಐದು ಮಂದಿಯನ್ನು ಹಿಡಿದಿದ್ದು, ಅವರಲ್ಲಿ ನಾಲ್ಕು ಮಂದಿಯನ್ನು ಜೀವಂತವಾಗಿ ಸುಟ್ಟಿದ್ದಾರೆ.

ಕಂಬಾಲಪಲ್ಲಿ: ಸಿಬಿಐ ತನಿಖೆಗೆ

ಬೆಂಗಳೂರು, ಆಗಸ್ಟ್ 3: ಕೋಲಾರ ಜಿಲ್ಲೆ ಕಂಬಾಲಪಲ್ಲಿಯಲ್ಲಿ ನಡೆದ ದಲಿತರ ಮಾರಣಹೋಮದ ಬಗ್ಗೆ ತನಿಖೆಯನ್ನು ಸಿಬಿಐಗೆ ಒಪ್ಪಿಸಲು ಇಂದು ಇಲ್ಲಿ ಸೇರಿದ್ದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತು.

ಈ ಘಟನೆ ಬಗ್ಗೆ ಸಿಬಿಐನಿಂದ ತನಿಖೆ ನಡೆಸಲಾಗುತ್ತದೆ ಎಂದು ಸರ್ಕಾರ ವಿಧಾನಮಂಡಲಕ್ಕೆ ಆಶ್ವಾಸನೆ ನೀಡಿದ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಸಂಪುಟದ ನಿರ್ಧಾರವನ್ನು ಪತ್ರಿಕಾಗೋಷ್ಠಿಯಲ್ಲಿ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 4-8-1950

• **ಭಾರತದ ನೀತಿ 'ನ್ಯಾಯಪಥ'**

ನವದೆಹಲಿ, ಆಗಸ್ಟ್ 3: 'ಭಾರತದ ಕೊರಿಯಾ ನೀತಿಯಿಂದ ಇಂದು ಜಗತ್ತಿನ ಮೇಲೆ ತೀವ್ರ ಪರಿಣಾಮವಾಗದಿರಬಹುದು; ಆದರೆ ಕಾಲಾನುಕ್ರಮದಲ್ಲಿ ವ್ಯಾಪಕ ಸ್ಥಿತ್ಯಂತರ ಆಗಿಯೇ ಆಗುವುದು' ಎಂಬುದಾಗಿ ಭಾರತದ ಪ್ರಧಾನಿ ಜವಾಹರರು, ತಮ್ಮ ಸರಕಾರದ ಕೊರಿಯಾ ನೀತಿಗೆ ಪಾರ್ಲಿಮೆಂಟಿನ ಸಮ್ಮತಿ ಬಯಸುತ್ತ ನುಡಿದರು.

'ಏನೇ ಸಂಭವಿಸಲಿ, ಈ ವಿಶಾಲ ಜಗತ್ತಿನ ಯಾವುದೇ ರಾಷ್ಟ್ರದ ಧೋರಣೆಗೆ ಮೂಕ ಸಮ್ಮತಿಯ ಮುದ್ರೆ ಹಾಕಲು ನಾನು ಸಿದ್ಧನಿಲ್ಲ. ಕೈಗೊಂಬೆ ಅಥವಾ ಕೀಲು ಯಂತ್ರದಂತಹ ವರ್ತನೆ ವ್ಯಕ್ತಿಗೆ ಹೇಗೋ ರಾಷ್ಟ್ರಕ್ಕೂ ಹಾಗೆ ಅವನತಿಕರ' ಎಂದರು.

ನೀನು ಸತ್ತಂತೆ–ನಾನು ಅತ್ತಂತೆ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

> ಹನ್ನೊಂದು ಜೀವಗಳ ದುರ್ಮರಣಕ್ಕೆ ಕಾರಣವಾದ ಕಾಲ್ತುಳಿತದ ದುರಂತಕ್ಕೆ ಹೊಣೆಗಾರರು ಯಾರು? ಈವರೆಗೆ ನಡೆದಿರುವ ತನಿಖೆ–ವಿಚಾರಣೆಗಳು ಕರ್ತವ್ಯಲೋಪ, ನಿರ್ಲಕ್ಷ್ಯ ಆಗಿದ್ದೆಲ್ಲಿ ಎಂದು ಗುರ್ತಿಸುವ ಬದಲು, ಸತ್ಯವನ್ನು ಸಂಕೀರ್ಣಗೊಳಿಸುತ್ತಿವೆ. ಕ್ರಿಕೆಟ್ ಅಭಿಮಾನಿಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಪ್ರಯತ್ನದ ಬಗ್ಗೆ ಯಾವ ತನಿಖೆಯೂ ತಲೆಕೆಡಿಸಿಕೊಳ್ಳುವುದಿಲ್ಲ.

ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಕಾಲ್ತುಳಿತದ ಘಟನೆಯ ತನಿಖೆ ನಡೆಸಲು ರಾಜ್ಯ ಸರ್ಕಾರ ಜೂನ್ 5ರಂದು ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೇತೃತ್ವದ ಏಕಸದಸ್ಯ ಆಯೋಗ ಜುಲೈ 11ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತನ್ನ ವರದಿಯನ್ನು ಸಲ್ಲಿಸಿದೆ. ಆಯೋಗದ ವರದಿಯನ್ನು ಸಚಿವ ಸಂಪುಟ ಅಂಗೀಕರಿಸಿದೆ. ಆದರೆ, ವರದಿಯಲ್ಲಿ ಉಲ್ಲೇಖಿಸಿದ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ ನಡೆಸುವುದಾಗಿ ಹೇಳಿದ ಸರ್ಕಾರ ಇದ್ದಕ್ಕಿದ್ದಂತೆ ಅಧಿಕಾರಿಗಳ ಅಮಾನತು ರದ್ದುಗೊಳಿಸಲು ನಿರ್ಧರಿಸಿದ್ದು ಅಚ್ಚರಿಯ ಬೆಳವಣಿಗೆ.

ಇದೀಗ ರಾಜ್ಯ ಸರ್ಕಾರ ಈ ಅಧಿಕಾರಿಗಳಿಗೆ ಹುದ್ದೆ ತೋರಿಸಿ ಆದೇಶ ಹೊರಡಿಸಿದೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ ಅವರನ್ನು ಕಾರಾಗೃಹ ಮತ್ತು ಸುಧಾರಣೆ ಇಲಾಖೆಯ ಎಡಿಜಿಪಿಯಾಗಿ ನೇಮಕ ಮಾಡಲಾಗಿದೆ. ವಿಕಾಸ್ ಕುಮಾರ್ ಅವರನ್ನು ರಾಜ್ಯ ಆಂತರಿಕ ಭದ್ರತಾ ವಿಭಾಗದ ಐಜಿಪಿಯಾಗಿ, ಶೇಖರ್ ಟೆಕ್ಕಣ್ಣನವರ ಅವರನ್ನು ನಗರ ಗುಪ್ತವಾರ್ತೆಯ ಡಿಸಿಪಿಯಾಗಿ ಹುದ್ದೆ ನೀಡಲಾಗಿದೆ.

ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ಏಕಸದಸ್ಯ ತನಿಖಾ ಆಯೋಗ ಸಲ್ಲಿಸಿದ ವರದಿಯಲ್ಲಿ ಕಾಲ್ತುಳಿತದ ಘಟನೆಗೆ ಕೆಎಸ್‌ಸಿಎ, ಡಿಎನ್‌ಎ, ಆರ್‌ಸಿಬಿ ಹಾಗೂ ಪೊಲೀಸರು ಹೊಣೆ ಎಂದು ಉಲ್ಲೇಖಿಸಿರುವುದು ಗಮನಾರ್ಹ. ಇವರೆಲ್ಲರ ಕರ್ತವ್ಯಲೋಪವನ್ನು ಗುರುತಿಸಿರುವ ಆಯೋಗ ಲಭ್ಯವಿದ್ದ ಅತ್ಯಂತ ಕಡಿಮೆ ಸಮಯದಲ್ಲಿ ಕಾರ್ಯಕ್ರಮ ಆಯೋಜಿಸುವುದು ಅಸಾಧ್ಯವೆಂದು ಗೊತ್ತಿದ್ದರೂ ಕಾರ್ಯಕ್ರಮ ನಡೆಸಿದ್ದು ದುರಂತಕ್ಕೆ ಕಾರಣವೆಂದು ಹೇಳಿದೆ. ಬಂದೋಬಸ್ತ್ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ, ವ್ಯಾಪಕ ಪೊಲೀಸ್ ನಿಯೋಜನೆ ಇರಲಿಲ್ಲ, ಅಭಿಮಾನಿಗಳ ಸಂಖ್ಯೆ ಅಂದಾಜಿಸುವಲ್ಲಿ ಪೊಲೀಸರು, ಆರ್‌ಸಿಬಿ ಹಾಗೂ ಕೆಎಸ್‌ಸಿಎ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬುದನ್ನು ಆಯೋಗ ಒತ್ತಿ ಹೇಳಿದೆ. ಸಂಜೆ 3.25ಕ್ಕೆ ಕಾಲ್ತುಳಿತ ಸಂಭವಿಸಿದ್ದರೂ, 5.30ರ ತನಕ ಪೊಲೀಸ್ ಆಯುಕ್ತರಿಗೆ ಮಾಹಿತಿ ಇರಲಿಲ್ಲ, ಜಂಟಿ ಪೊಲೀಸ್ ಆಯುಕ್ತರು ಕ್ರೀಡಾಂಗಣಕ್ಕೆ ಬಂದಿದ್ದು ಸಂಜೆ 4 ಗಂಟೆಗೆ ಎಂಬ ಕರ್ತವ್ಯಲೋಪಗಳು ಸಾಮಾನ್ಯ ಸ್ವರೂಪದವೇನಲ್ಲ. ಜನಸಂದಣಿ ನಿರ್ವಹಣೆಗೆ ಸ್ಪಷ್ಟ ಮಾರ್ಗಸೂಚಿ ಇಲ್ಲದಿರುವ ಬಗ್ಗೆಯೂ ತನಿಖಾ ಆಯೋಗ ಪ್ರಸ್ತಾಪಿಸಿದೆ.

ಪೊಲೀಸ್ ಅಧಿಕಾರಿಗಳ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಇಷ್ಟೆಲ್ಲಾ ಆರೋಪಗಳಿದ್ದರೂ ಸರ್ಕಾರ ಅವರ ಅಮಾನತು ರದ್ದುಗೊಳಿಸಿ ವಿವಿಧ ಹುದ್ದೆಗಳಿಗೆ ನೇಮಕಗೊಳಿಸಿರುವ ಕ್ರಮ ಏನನ್ನು ಧ್ವನಿಸುತ್ತದೆ? ಜನರ ಆಕ್ರೋಶ ಶಮನ ಮಾಡಲು ಈ ಅಧಿಕಾರಿಗಳು ಮತ್ತು ಸರ್ಕಾರ ಸೇರಿಕೊಂಡು 'ನೀನು ಸತ್ತಂತೆ – ನಾನು ಅತ್ತಂತೆ' ನಾಟಕ ಆಡಿದರೇ ಎಂಬ ಅನುಮಾನ ಹುಟ್ಟುವುದು ಸಹಜ.

ಜೂನ್ 3ರಂದು ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಕ್ರಿಕೆಟ್ ಅಂತಿಮ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹೆಸರಿನ ತಂಡ ಮೊದಲ ಬಾರಿಗೆ ಕಪ್ ಗೆದ್ದದ್ದು ಒಂದು ಸುದ್ದಿಯಾಗಿ, ಹೆಚ್ಚೆಂದರೆ ಆ ತಂಡದ ಅಭಿಮಾನಿಗಳ ಸಂತಸದ ಗಳಿಗೆಯಾಗಿ ಮುಗಿಯಬೇಕಾದ ಸಾಮಾನ್ಯ ಸಂಗತಿ. ಆದರೆ, ಆ ಸಂದರ್ಭ ಬೇರೊಂದು ಅನಾಹುತಕಾರಿ ದಿಕ್ಕಿನೆಡೆ ಮುಖ ಮಾಡಿದ್ದು, ದುರಂತ ಆಹ್ವಾನಿಸಿದ್ದು ಹೊರನೋಟಕ್ಕೆ ಅನಿರೀಕ್ಷಿತ ಎಂಬಂತೆ ಕಂಡರೂ ನಿರೀಕ್ಷೆಯ ಪರಿಧಿ ದಾಟಿದಂತಿರಲಿಲ್ಲ.

ಕಾಲ್ತುಳಿತದ ಹಿಂದಿನ ದಿನವೇ ಜನಸಮೂಹ ಪ್ರಕಟಿಸಿದ ಅಭಿಮಾನದ ಹೆಸರಿನ ಹುಚ್ಚಾಟದಲ್ಲಿ ಅಪಾಯದ ಸುಳಿವುಗಳು ಸ್ಪಷ್ಟವಾಗಿದ್ದವು. ಆದಾಗ್ಯೂ ಸಿದ್ಧತೆಯೇ ಇಲ್ಲದ ಕಾರ್ಯಕ್ರಮಕ್ಕೆ ಸಾಮಾಜಿಕ ಮಾಧ್ಯಮದ ಮೂಲಕ ಅಭಿಮಾನಿಗಳನ್ನು ಆಹ್ವಾನಿಸಲಾಯಿತು. ಆಯೋಜಕರು ಮೊದಲು ಟಿಕೆಟ್ ಅಂದರು, ನಂತರ ಉಚಿತ ಎಂದು ಘೋಷಿಸಿ ಗೊಂದಲ ಸೃಷ್ಟಿಸಿದರು. ಸಮೂಹ ವರ್ತನೆಯ ತುಸುವೇ ಜ್ಞಾನವಿರುವ ಸಾಮಾನ್ಯ ವ್ಯಕ್ತಿಗೂ ಅರ್ಥವಾಗಬಹುದಾದ ಪರಿಸ್ಥಿತಿಯ ಗಂಭೀರತೆ, ಅಗಾಧ ಸಂಪನ್ಮೂಲ ಹಾಗೂ ಸಾಮರ್ಥ್ಯ ಹೊಂದಿದ ಆಡಳಿತಗಾರರು ಹಾಗೂ ಸಂಬಂಧಿಸಿದ ಪೊಲೀಸ್ ವಿಭಾಗಗಳ ಅರಿವಿಗೆ ನಿಲುಕದಿದ್ದುದು ವಿಪರ್ಯಾಸಕರ.

ಮುಖ್ಯವಾಗಿ ವಾಣಿಜ್ಯ ಚಟುವಟಿಕೆಯ ಭಾಗವಾದ ಐಪಿಎಲ್ ಪಂದ್ಯಾವಳಿಗಳು ನೈಜ ಕ್ರೀಡಾಭಾವನೆಯ ಮೂಲತತ್ವಗಳಿಗೆ ಹೊರತಾದ ಭೂಮಿಕೆಯಲ್ಲಿ ಅವತರಿಸಿರುವುದು ಎಲ್ಲರಿಗೂ ಗೊತ್ತಿರುವುದೇ. ಅದರ ಭಾಗವಾಗಿರುವ ಆರ್‌ಸಿಬಿ ತಂಡದ ಜನಕ ಬೇರಾರೂ ಅಲ್ಲ, ವಿದೇಶದಲ್ಲಿ ತಲೆಮರೆಸಿಕೊಂಡಿರುವ ವಿಜಯ್ ಮಲ್ಯ; ತಂಡದ ಹೆಸರಿನಲ್ಲಿ ಬೆಂಗಳೂರು ಇದೆ ಎನ್ನುವುದನ್ನು ಬಿಟ್ಟರೆ ತಂಡಕ್ಕೂ ಬೆಂಗಳೂರಿಗೂ ಕರ್ನಾಟಕಕ್ಕೂ ಸರ್ಕಾರಕ್ಕೂ ಸಾವಯವ ಸಂಬಂಧವೇ ಇಲ್ಲ, ಬಹುಪಾಲು ಆಟಗಾರರೂ ಕರ್ನಾಟಕದವರಲ್ಲ! ಹೀಗಿರುವಾಗ, ಒಂದು ರಾಜ್ಯದ ಸರ್ಕಾರವೇ ಕಾರ್ಪೊರೇಟ್ ಸಂಸ್ಥೆ ಒಡೆತನದ ಕ್ರಿಕೆಟ್ ತಂಡದ ಅಭಿಮಾನಿಯಂತೆ, ಕುರುಡು ಆರಾಧಕನಂತೆ ವರ್ತಿಸಿದ್ದು, ಆಚರಣೆಗೆ ಮುಂದಾಗಿದ್ದು ತೀರಾ ವಿಚಿತ್ರ ಹಾಗೂ ಅಸಮರ್ಥನೀಯ.

ಜೂನ್ 4ರಂದು ಸಂಭ್ರಮಾಚರಣೆಗಾಗಿ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಹಮ್ಮಿಕೊಂಡಿದ್ದ ದೊಡ್ಡ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನಗತ್ಯ ಆಸಕ್ತಿ ತೋರಿಸಿದ್ದನ್ನು ನಾಡು ನೋಡಿದೆ. ಅವರು ಆಟಗಾರರನ್ನು ವಿಮಾನ ನಿಲ್ದಾಣದಲ್ಲಿ ಸ್ವತಃ ಸ್ವಾಗತಿಸಿ, ರಸ್ತೆಯುದ್ದಕ್ಕೂ ಆರ್‌ಸಿಬಿ ಧ್ವಜ ಬೀಸಿದರು. ಇತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ತಾವೇನೂ ಕಡಿಮೆಯಲ್ಲ ಎಂಬಂತೆ ವಿಧಾನಸೌಧದ ಮೆಟ್ಟಿಲ ಮೇಲೆ ವಿಜೇತ ತಂಡಕ್ಕೆ ಸನ್ಮಾನ ಸಮಾರಂಭ ಏರ್ಪಡಿಸಿ, ಮೊಮ್ಮಗನೊಂದಿಗೆ ಸಂಭ್ರಮಿಸಲು ಮುಂದಾದರು. ಅವರ ಹಿಂಬಾಲಕರು, ಮುಂಬಾಲಕರು ಒಟ್ಟುಗೂಡಿದ್ದ ವಿಧಾನಸೌಧ ಬಳಿಯ ಕಾರ್ಯಕ್ರಮ ಸರ್ಕಾರದ್ದೋ, ರಾಜಕಾರಣಿಗಳ ಕುಟುಂಬದ್ದೋ, ಕ್ರಿಕೆಟ್ ಅಭಿಮಾನಿಗಳದ್ದೋ ಒಂದೂ ಅರ್ಥವಾಗದ ರೀತಿಯಲ್ಲಿ ವೇದಿಕೆಯ ಮೇಲೆ ಮತ್ತು ಎದುರಿಗೆ ಜನಜಂಗುಳಿ ಜಮಾಯಿಸಿತು. ಅಲ್ಲಿ ರಾಜ್ಯಪಾಲರ ಉಪಸ್ಥಿತಿ ಇದ್ದರೂ ಶಿಷ್ಟಾಚಾರದ ಅನುಪಸ್ಥಿತಿ ಎದ್ದು ಕಾಣುತ್ತಿತ್ತು.

ಇತ್ತ ಲಕ್ಷಾಂತರ ಅಭಿಮಾನಿಗಳ ಜಮಾವಣೆಯಿಂದ ಸ್ಟೇಡಿಯಂ ಪ್ರವೇಶ ದ್ವಾರದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ 11 ಕ್ರಿಕೆಟ್ ಪ್ರೇಮಿಗಳು ಕಾಲ್ತುಳಿತಕ್ಕೆ ಬಲಿಯಾದರು; 50ಕ್ಕಿಂತ ಹೆಚ್ಚು ಜನ ಗಾಯಗೊಂಡರು. ಆರಂಭದಲ್ಲಿ ಸಾವುನೋವುಗಳಿಗೆ ಕಾರಣವಾದ ದುರಂತದ ಹೊಣೆಯನ್ನು ಪರಸ್ಪರ ಹೊತ್ತುಹಾಕಲು ಪ್ರಯತ್ನಿಸಲಾಯಿತು. ಕೊನೆಗೆ ಪೊಲೀಸರ ವೈಫಲ್ಯವೇ ಕಾರಣವೆಂದು ತೀರ್ಮಾನಿಸಿದ ಸರ್ಕಾರ, ಮಹಾನಗರ ಪೊಲೀಸ್ ಆಯುಕ್ತ ಬಿ. ದಯಾನಂದ, ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಟೆಕ್ಕಣ್ಣನವರ್, ಕಬ್ಬನ್ ಪಾರ್ಕ್ ಉಪವಿಭಾಗದ ಎಸಿಪಿ ಎಚ್.ಟಿ. ಬಾಲಕೃಷ್ಣ ಹಾಗೂ ಇನ್‌ಸ್ಪೆಕ್ಟರ್ ಗಿರೀಶ್ ಅವರನ್ನು ಅಮಾನತು ಮಾಡುವ ಮೂಲಕ ಜನಾಕ್ರೋಶಕ್ಕೆ ಗುರಾಣಿ ಹಿಡಿದಿದ್ದರು. ಆಗ ಸರ್ಕಾರದ ಹಿತಾಸಕ್ತಿ ಕಾಯಲು ಬಲಿಯಾದ ಅಧಿಕಾರಿಗಳ ಹಿತವನ್ನು ಈಗ ಸರ್ಕಾರ ಕಾಪಾಡಲು ಮುಂದಾಗಿರುವುದು ಸ್ವಯಂವೇದ್ಯ.

ಪ್ರಕರಣದಲ್ಲಿ ಅಮಾನತುಗೊಂಡಿದ್ದ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಗೆ (ಸಿಎಟಿ) ದೂರು ನೀಡಿದ್ದರು. ನ್ಯಾಯಮಂಡಳಿಯು ಅವರ ಅಮಾನತು ರದ್ದುಗೊಳಿಸಿದ್ದಲ್ಲದೇ ಅಮಾನತು ಅವಧಿಯನ್ನು ಸೇವೆಯ ಭಾಗವೆಂದು ಪರಿಗಣಿಸಲು ಆದೇಶಿಸಿತ್ತು. ಈ ಘಟನೆಗೆ ಆರ್‌ಸಿಬಿಯನ್ನೇ ಹೊಣೆ ಮಾಡಿರುವ ನ್ಯಾಯಮಂಡಳಿ, ಪೊಲೀಸರ ಅನುಮತಿಯಿಲ್ಲದೆ ವಿಜಯೋತ್ಸವ ಮೆರವಣಿಗೆಯ ಆಹ್ವಾನ ಪತ್ರಿಕೆಯನ್ನು ಆರ್‌ಸಿಬಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರಿಂದ ಭಾರೀ ಜನಸಮೂಹ ಸೇರಲು ಕಾರಣವಾಯಿತು ಮತ್ತು ಪೊಲೀಸರಿಗೆ ತಯಾರಿಗೆ ಸಮಯವಿರಲಿಲ್ಲ ಎಂಬುದನ್ನು ಉಲ್ಲೇಖಿಸಿದೆ. ಜೊತೆಗೆ, ಇನ್ನಿಬ್ಬರು ಐಪಿಎಸ್ ಅಧಿಕಾರಿಗಳಾದ ಬಿ. ದಯಾನಂದ ಮತ್ತು ಶೇಖರ್ ತೆಕ್ಕಣ್ಣವರ್ ಅವರ ಅಮಾನತು ಆದೇಶವನ್ನು ಮರುಪರಿಶೀಲಿಸುವಂತೆ ನ್ಯಾಯಮಂಡಳಿ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು.

ಎಲ್ಲದಕ್ಕೂ ಮೊದಲು ಬೆಂಗಳೂರಿನ ಕೇಂದ್ರ ಅಪರಾಧ ಶಾಖೆಯು (ಸಿಸಿಬಿ) ಆರ್‌ಸಿಬಿ ಮತ್ತು ಡಿಎನ್‌ಎ ಸಂಸ್ಥೆಗಳ ಅಧಿಕಾರಿಗಳನ್ನು ನಿರ್ಲಕ್ಷ್ಯದ ಆರೋಪದ ಮೇಲೆ ಬಂಧಿಸಿತ್ತು. ಸಿಸಿಬಿಯ ಕಾರ್ಯವ್ಯಾಪ್ತಿ ಮತ್ತು ಕಾರ್ಯವಿಧಾನದ ಲೋಪಕ್ಕಾಗಿ ಕರ್ನಾಟಕ ಹೈಕೋರ್ಟ್ ಅವರ ಬಂಧನವನ್ನು ರದ್ದುಗೊಳಿಸಿತು. ಈ ಮಧ್ಯೆ ಆ ಅಧಿಕಾರಿಗಳಿಗೆ ನಿರೀಕ್ಷಣಾ ಜಾಮೀನೂ ಸಿಕ್ಕಾಗಿದೆ. ಈಗ ತನಿಖೆಯನ್ನು ಸಿಐಡಿ ಮುಂದುವರಿಸಿದೆ. ಹೈಕೋರ್ಟ್ ಕೂಡ ಸ್ವಯಂಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ದಾಖಲಿಸಿಕೊಂಡಿದೆ.

ನಡೆದಿರುವುದು ಒಂದೇ ಘಟನೆ. ಆದರೆ, ಎಷ್ಟೊಂದು ಬಗೆಯ ವಿಚಾರಣೆ-ತನಿಖೆ? ಸಿಐಡಿ ತನಿಖೆ, ಇಲಾಖಾ ವಿಚಾರಣೆ, ನ್ಯಾಯಾಂಗ ಆಯೋಗದ ವಿಚಾರಣೆ, ಸಿಎಟಿಯ ಅವಲೋಕನ ಹಾಗೂ ಹೈಕೋರ್ಟ್‌ನ ಪಿಐಎಲ್, ಇವೆಲ್ಲವೂ ಸೇರಿ ಸತ್ಯಕ್ಕೆ ತೊಡಕುಗಳ ಉರುಳು ಹಾಕಬಾರದಲ್ಲವೇ?

ಹನ್ನೊಂದು ಜೀವಗಳ ದುರ್ಮರಣಕ್ಕೆ ಕಾರಣವಾದ ದುರ್ಘಟನೆ ಸಂಭವಿಸಿದ ದಿನ ಕ್ರಿಕೆಟ್ ಅಭಿಮಾನಿಗಳ ಸಂಖ್ಯಾಬಲವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವ ಸ್ಪಷ್ಟ ಲೆಕ್ಕಾಚಾರ ನಡೆದಿತ್ತು ಎಂಬ ಸತ್ಯಾಂಶವನ್ನು ಯಾವ ತನಿಖಾ ಸಂಸ್ಥೆಯೂ, ಯಾವ ಆಯೋಗವೂ ಹೊರಗೆಳೆಯಲಾರವು. ಆ ಅಂಶ ತನಿಖಾ ವಿಷಯದ ಭಾಗವಾಗಿರಲೂ ಸಾಧ್ಯವಿಲ್ಲ. ಆದರೆ ಅದು ಜನರನ್ನು ಈಗಾಗಲೇ ತಲುಪಿಯಾಗಿದೆ!



ವಾಚಕರ ವಾಣಿ

ದ್ವಿದಳ ಧಾನ್ಯ: ಉತ್ತೇಜನ ಅಗತ್ಯ

ದ್ವಿದಳ ಧಾನ್ಯಗಳು ಪ್ರೋಟೀನ್‌ನ ಸಮೃದ್ಧ ಮೂಲವಾಗಿದ್ದು, ಪೌಷ್ಟಿಕ ಆಹಾರವನ್ನು ಒದಗಿಸುತ್ತವೆ. ತೊಗರಿ, ಹೆಸರು, ಕಡಲೆ, ಅವರೆ ಮುಂತಾದವುಗಳು ಪ್ರಮುಖ ದ್ವಿದಳ ಧಾನ್ಯಗಳಾಗಿವೆ. ಆರೋಗ್ಯಕರ ಆಹಾರದ ದೃಷ್ಟಿಯಿಂದ ಅವುಗಳ ಮಹತ್ವ ಅಪಾರ. ಮಣ್ಣಿನಲ್ಲಿ ನೈಟ್ರೋಜನ್ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ. ನೀರಿನ ಅಗತ್ಯ ಕಡಿಮೆ ಇರುವುದರಿಂದ ಬಯಲು ಪ್ರದೇಶಗಳಲ್ಲಿಯೂ ಸುಲಭವಾಗಿ ಬೆಳೆಯಬಹುದು. ಅತಿವೃಷ್ಟಿ ಅಥವಾ ಅನಾವೃಷ್ಟಿಯಂತಹ ವಾತಾವರಣಕ್ಕೂ ಪ್ರತಿರೋಧ ತೋರುವ ಶಕ್ತಿ ಹೊಂದಿವೆ.

ಕಡಿಮೆ ಬಂಡವಾಳದಲ್ಲಿ ಹೆಚ್ಚು ಲಾಭ ನೀಡುವ ದ್ವಿದಳ ಬೆಳೆಗಳು ರೈತರಿಗೆ ಆರ್ಥಿಕ ಸಹಾಯದ ಜೊತೆಗೆ ಪರಿಸರ ರಕ್ಷಣೆಯತ್ತ ದಾರಿಯನ್ನೂ ತೋರಿಸುತ್ತವೆ. ಈ ಬೆಳೆಗಳನ್ನು ಬೆಳೆಯುವಂತೆ ಸರ್ಕಾರ, ಕೃಷಿ ಇಲಾಖೆ ಹಾಗೂ ಸಂಶೋಧನಾ ಸಂಸ್ಥೆಗಳು ರೈತರಿಗೆ ಉತ್ತೇಜನ ನೀಡಬೇಕು. ಉತ್ತಮ ಗುಣಮಟ್ಟದ ಬೀಜಗಳ ವಿತರಣೆಯಿಂದ ಹಿಡಿದು, ತರಬೇತಿ ಮತ್ತು ಮಾರುಕಟ್ಟೆ ಸೌಲಭ್ಯಗಳವರೆಗೆ ಹಲವು ಹಂತಗಳಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ನೌಕರರ ಬೇಡಿಕೆಗೆ ಸರ್ಕಾರ ಸ್ಪಂದಿಸಲಿ

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರು ಮುಷ್ಕರ ಮಾಡುವ ದಾರಿಯಲ್ಲಿದ್ದಾರೆ. ಮುಖ್ಯಮಂತ್ರಿಗಳು ಅವರ ಬೇಡಿಕೆಗಳಿಗೆ ಸಹಾನುಭೂತಿಯಿಂದ ಸ್ಪಂದಿಸದೇ ಇರುವುದರಿಂದ ಮುಷ್ಕರ ಅನಿವಾರ್ಯ ಎಂದು ಯೂನಿಯನ್‌ಗಳ ಮುಖ್ಯಸ್ಥರು ಹೇಳಿರುವುದು ವರದಿಯಾಗಿದೆ. ಸಾರಿಗೆ ನೌಕರರ ಬಗ್ಗೆ ಸರ್ಕಾರವು ಮಾನವೀಯತೆಯಿಂದ ನಡೆದುಕೊಳ್ಳಲಿ. ಕಡ್ಡಿತುಂಡು ಮಾಡುವ ಬದಲು, ಕೊಟ್ಟು ತೆಗೆದುಕೊಳ್ಳುವುದು ಆಗಲಿ.

ಗುರು ಜಗಳೂರು, ಹರಿಹರ

ನ್ಯಾಯಾಲಯದಲ್ಲಿ 'ನ್ಯಾಯ' ಇದೆ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿರುವುದು ಸಾಬೀತಾಗಿದೆ. ನ್ಯಾಯಾಲಯವು ಗರಿಷ್ಠ ಪ್ರಮಾಣದ ಜೀವಾವಧಿ ಶಿಕ್ಷೆಯನ್ನು ನೀಡಿದೆ. ಅಪರಾಧಿಯ ಆರ್ಥಿಕ ಅಥವಾ ರಾಜಕೀಯ ಅಧಿಕಾರದ ಹಿನ್ನೆಲೆಯನ್ನು ಬದಿಗಿಟ್ಟು, ಕೇವಲ ಅಪರಾಧವನ್ನು ಮಾತ್ರ ಗಣನೆಗೆ ತೆಗೆದುಕೊಂಡು ಶಿಕ್ಷೆ ವಿಧಿಸಿದ ನ್ಯಾಯಾಂಗದ ಮೇಲೆ ಜನರ ಗೌರವ ಹೆಚ್ಚಾಗಿದೆ. ಅಧಿಕಾರಸ್ಥರಾದವರು ಏನು ಮಾಡಿದರೂ ದಕ್ಕಿಸಿಕೊಳ್ಳಬಹುದು ಎಂಬುದು ಸುಳ್ಳಾಗಿದೆ. ಕಾನೂನನ್ನು ರೂಪಿಸಬೇಕಾದ ಸ್ಥಾನದಲ್ಲಿ ಕುಳಿತು ಅತ್ಯಾಚಾರದಂತಹ ಘೋರ ಅಪರಾಧ ಎಸಗಿದ ವ್ಯಕ್ತಿಗೆ ತಕ್ಕ ಶಿಕ್ಷೆ ಆಗಿದೆ. ಈ ತೀರ್ಪು ಅಪರಾಧ ಮಾಡುವ ಮನಃಸ್ಥಿತಿ ಇರುವವರಿಗೆ ಪಾಠವಾಗಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸ್ವದೇಶಿ: ಅದಾನಿ, ಅಂಬಾನಿಯಾಚೆಗೆ...

ಪ್ರಧಾನಿ ನರೇಂದ್ರ ಮೋದಿ ಅವರು, ಭಾರತದ ಉತ್ಪನ್ನಗಳ ಮೇಲೆ ಅಮೆರಿಕ ಹೇರುತ್ತಿರುವ ಹೆಚ್ಚಿನ ತೆರಿಗೆಯನ್ನು ಖಂಡಿಸಿ, ಈ 'ಸುಂಕ ಸಮರ'ದಿಂದ ಬಿಡುಗಡೆ ಹೊಂದಲು ಸ್ವದೇಶಿ ಉತ್ಪನ್ನಗಳನ್ನು ಭಾರತೀಯರು ಬಳಸಲು ಕರೆ ಕೊಟ್ಟಿದ್ದಾರೆ.

ಸ್ವದೇಶಿ ಉತ್ಪನ್ನ ಬಳಸಬೇಕೆನ್ನುವುದು ಸ್ವಾಗತಾರ್ಹ. ಆದರೆ, ಸ್ವದೇಶಿ ಉತ್ಪನ್ನ ಎಂದರೆ ಅದಾನಿ- ಅಂಬಾನಿಗಳು ದೇಶದಲ್ಲಿ ಉತ್ಪಾದಿಸಿದ ವಸ್ತುಗಳು ಅಲ್ಲ. ಸ್ವದೇಶಿ ಎಂದರೆ, ಜನ ಸಮುದಾಯಗಳು ಹೆಚ್ಚಿನ ಉತ್ಪನ್ನಗಳನ್ನು ತಮ್ಮ ಪ್ರದೇಶದಲ್ಲೇ ಉತ್ಪಾದಿಸಿ ಬಳಸುವುದೇ ಆಗಿದೆ. ಇದು ಗಾಂಧೀಚಿಂತನೆಯ ಸ್ವರಾಜ್ಯವಾಗಿದೆ. ಆದರೆ, ಎನ್‌ಡಿಎ ಸರ್ಕಾರ ಬಂದ ಮೇಲೆ, ಸ್ಥಳೀಯ ಉತ್ಪನ್ನಗಳ ಮೇಲೆ, ಮುಖ್ಯವಾಗಿ ಖಾದಿ, ಕೈಮಗ್ಗ ಮತ್ತು ಇತರ ಗ್ರಾಮೋದ್ಯೋಗಗಳ ಮೇಲೆ ಜಿಎಸ್‌ಟಿ ಹೇರಿ ಆ ಉದ್ಯಮಗಳ ಉಸಿರುಗಟ್ಟಿಸುವ ಕೆಲಸ ವ್ಯವಸ್ಥಿತವಾಗಿ ನಡೆದಿದೆ.

ದೊಡ್ಡ ಕಂಪನಿಗಳು ಖಾದಿ ಮಾರ್ಕ್ ಮತ್ತು ಕೈಮಗ್ಗದ ಮಾರ್ಕ್‌ಗಳನ್ನು ಇಲಾಖೆಗಳಿಂದ ಖರೀದಿಸಿ, ಖಾದಿ ಹೆಸರಿನಲ್ಲಿ ಗಿರಣಿ ಬಟ್ಟೆಗಳನ್ನು ರಾಜಾರೋಷವಾಗಿ ಮಾರುತ್ತಿವೆ. ಏಕರೂಪ ತೆರಿಗೆ ರೂಪಿಸುವ ಉದ್ದೇಶದಿಂದ ಬಟ್ಟೆಗಳ ಮೇಲೆ ಸಾರಾಸಗಟು ಶೇ 12ರಷ್ಟು ತೆರಿಗೆ ವಿಧಿಸುವ ಉದ್ದೇಶವಿದೆ ಎನ್ನುವ ಸುದ್ದಿ ಬರುತ್ತಿದೆ. ಅಂದರೆ, ಶೇ 5 ತೆರಿಗೆಯ ಜಾಗದಲ್ಲಿ ಶೇ 12 ತೆರಿಗೆ ಪಾವತಿಸಬೇಕಾಗುತ್ತದೆ. ಖಾದಿ ಗ್ರಾಮೋದ್ಯೋಗ ಮತ್ತು ಕೈ ಮಗ್ಗದ ಉತ್ಪನ್ನಗಳನ್ನು ಜಿಎಸ್‌ಟಿಯಿಂದ ಸಂಪೂರ್ಣವಾಗಿ ಮುಕ್ತ ಮಾಡಿದರೆ, ಅವುಗಳ ಉಳಿವಿಗೆ ದೊಡ್ಡ ನೆರವಾಗುತ್ತದೆ ಹಾಗೂ 'ಸ್ವದೇಶಿ ಕರೆ'ಗೆ ಅರ್ಥ ಬರುತ್ತದೆ.

ಸಂತೋಷ ಕೌಲಗಿ, ಮೇಲುಕೋಟೆ

ಬ್ರಿಟಿಷ್ ಎದುರು ನಿಂತ ಪುಣ್ಯಕೋಟಿ!

'ಅಹಿಂಸೆ ದೌರ್ಬಲ್ಯವಲ್ಲ, ಅನಿವಾರ್ಯ' (ಲೇ: ಅರವಿಂದ ಚೊಕ್ಕಾಡಿ, ಆಗಸ್ಟ್ 2) ಲೇಖನ ಸಮಂಜಸವೂ, ಸಕಾಲಿಕವೂ, ಸಂಗ್ರಹಾತ್ಮಕ ಭಾರತ ಸ್ವಾತಂತ್ರ್ಯ ಚಳವಳಿಯ ಇತಿಹಾಸವೂ ಆಗಿದೆ. ಗಾಂಧೀಜಿ ಬಗ್ಗೆ ಲಘುವಾಗಿ ಮಾತನಾಡುವವರಿಗೆ ತಕ್ಕ ಉತ್ತರವಾಗಿ 'ಎದೆಯಿದ್ದರಿಲ್ಲಿ ನಿಂತು ನಗು ನೋಡುವಾ' ಎಂಬಂತಿದೆ. ಯುಗಯಾತ್ರೀ ಭಾರತೀಯ ಸಂಸ್ಕೃತಿಯ ಅಹಿಂಸಾ ಸಾರಸರ್ವಸ್ವ ಗ್ರಹಿಸಲಾರದ ಬರಡು ಬಣಗುಗಳು ಏನೇ ಅನ್ನಲಿ, ಗಾಂಧಿ ಎಂದರೆ ಕುರುಡರು ಮುಟ್ಟಿದ ಆನೆಯಂತಲ್ಲ; ಯಾವ ಕೊಟ್ಟಿಗೆಗೂ ಕಟ್ಟಲಾರದ ದೇವ ದಿಗ್ಗಜ!

ಕಾರಣಿಕ ಪುರುಷ ಶ್ರೀಕೃಷ್ಣನಾದರೋ ಒಮ್ಮೊಮ್ಮೆ ದುಷ್ಟನಿಗ್ರಹ ಶಿಷ್ಟ ರಕ್ಷಣೆಗಾಗಿ ತನ್ನ ಚಕ್ರ ಹಿಡಿದದ್ದುಂಟು. ಆದರೆ ಅಹಿಂಸೆ–ಸತ್ಯಾಗ್ರಹವೆಂಬ ಅಸ್ತ್ರವನ್ನಿಡಿದ ಗಾಂಧೀಜಿ ಯಾವ ಕಾರಣಕ್ಕೂ ಹಿಂಸೆಗೆ ಪ್ರಚೋದನೆ, ಪ್ರಲೋಭನೆ ಗೈದವರಲ್ಲ. ಈ ಬಡಕಲು ಬೈರಾಗಿ ಕೊಂದು ತಿನ್ನುವೆನೆಂಬ ಹಿಂಸಾರಭಸಮತಿ ಬ್ರಿಟಿಷ್ ವ್ಯಾಘ್ರನೆದುರು ತನ್ನ ಬಿಸಿರಕ್ತದ ಗುಂಡಿಗೆಯನೊಡ್ಡಿ ನಿಂತ ಪುಣ್ಯಕೋಟಿ!

ಅಹಿಂಸೆ ಅವರ ನಾಡಿಮಿಡಿತ; ಸತ್ಯಾಗ್ರಹ ಅವರ ಗಾಯತ್ರಿ! ಭಾರತೀಯ ಜನತಾಪ್ರಜ್ಞೆಯ ಕೆನೆಪದರ ಅವರು. ಸರ್ವಜನಾಂಗದ ಶಾಂತಿಯ ತೋಟದ ಕಾವಲು ಕಾಯುತ್ತಾ ಅದಕ್ಕಾಗಿ ನೆತ್ತರು ಹರಿಸಿದವರು. ಜನರಿಂದ, ಜನರಿಗಾಗಿ, ಜನರ ಹಿತಕ್ಕಾಗಿ ಮಾಡಿ ಮಡಿದವರು. ಆದ್ದರಿಂದಲೇ ಅವರು ಮಹಾತ್ಮರಾದರು.

ಪ್ರೊ. ಶಿವರಾಮಯ್ಯ, ಬೆಂಗಳೂರು

ಚುರುಮುರಿ



ಹೀಗೂ ಉಂಟೆ?!

• ಸುಮಂಗಲಾ

'ಮೋದಿ ಮಾಮಾ ಫೆಬ್ರುವರಿ ವಳಗೆ ಯುಎಸ್‌ಗೆ ಭೇಟಿ ಕೊಟ್ಟಾಗ, ನಾನೂ ನೀನೂ ಮಸ್ತ್ ದೋಸ್ತ್ ಅಂತ ಟ್ರಂಪಣ್ಣ ಹೇಳಿದ್ದ. ಐದೇ ತಿಂಗಳಿನಾಗೆ ಭಾರತ ಸತ್ತ ಆರ್ಥಿಕತೆ ಅಂತ ಜರೀತಾನೆ... ಹೀಗೂ ಉಂಟೆ!' ಎಂದು ಬೆಕ್ಕಣ್ಣ ಉದ್ಗರಿಸಿತು.

'ನಮ್ಮ ಸರಕುಗಳ ಮ್ಯಾಲೆ 25 ಪರ್ಸೆಂಟ್ ಸುಂಕ ಬೇರೆ ಹಾಕ್ಯಾನೆ. ಮೈತ್ರಿ ಸಂಕದ ಮ್ಯಾಲೆ ಸುಂಕ ಕಟ್ಟಳೆ ದಾಟಕ್ಕೆ ಆಗಂಗಿಲ್ಲಲೇ!' ಎಂದೆ.

'ಈ ಟ್ರಂಪಣ್ಣ ಯಾವಾಗ ಮೈತ್ರಿ ಮಾತಾಡತಾನೆ, ಯಾವಾಗ ಬಾಯಿಗೆ ಬಂದಂತೆ ಜರೀತಾನೆ ಅಂತ ಆ ದೇವರಿಗೂ ಗೊತ್ತಿಲ್ಲ! ಹೀಗೂ ಉಂಟೆ!' ಎಂದ ಬೆಕ್ಕಣ್ಣ, 'ಇವತ್ತು ಹೀಗೂ ಉಂಟೆ ಆಟ ಆಡೂಣು... ನೀ ಒಂದ್ ಹೀಗೂ ಉಂಟೆ ಹೇಳು' ಎಂದಿತು.

'ಗಾಜಾವಳಗೆ ಸಾವಿರಗಟ್ಟಲೆ ಮಂದಿಯನ್ನ, ಅದರಲ್ಲೂ ಮಕ್ಕಳನ್ನ ಕೊಂದಾರೆ. ಬದುಕುಳಿದವರು ಹಸಿವೆಯಿಂದ ನರಳೂ ಹಂಗೆ ಮಾಡ್ಯಾರೆ. ಒಂದು ಕಾಲಕ್ಕೆ ನಾಜಿಗಳ ಬರ್ಬರತೆಯನ್ನು ಅನುಭವಿಸಿದವರೇ ಇವತ್ತು ಹಿಂಗೆ ಮುಗ್ಧ ನಾಗರಿಕರನ್ನು ಕ್ಷಿಪಣಿ, ಡ್ರೋನ್ ದಾಳಿಯಲ್ಲಿ ಕೊಲ್ಲತಾರೆ... ಹೀಗೂ ಉಂಟೆ!' ಎಂದು ನಾನು ವಿಷಾದದಿಂದ ಹೇಳಿದೆ.

'ನಮ್ಮ ಕರುನಾಡಿನ ಹೀಗೂ ಉಂಟೆ ಕೇಳು. ಕೊಪ್ಪಳದಾಗೆ ಗುತ್ತಿಗೆ ನೌಕರನೊಬ್ಬ 24 ಮನೆ, ಆರು ಸೈಟು, 40 ಎಕರೆ ಜಮೀನು, 350 ಗ್ರಾಂ ಬಂಗಾರ, ಕೋಟ್ಯಂತರ ಆಸ್ತಿ ಮಾಡ್ಯಾನಂತೆ. ಸಸ್ಪೆಂಡ್ ಆಗದಕ್ಕಿಂತ ಮದ್ಲು ಜುಜುಬಿ 15 ಸಾವಿರ ಸಂಬಳ ತಗೋತಿದ್ದಂವ ಇಷ್ಟಕೊಂದು ಆಸ್ತಿ ಮಾಡಿರೂದು ಕಂಡು ಲೋಕಾ ಅಧಿಕಾರಿಗಳು ದಂಗಾದರಂತೆ! ಹೀಗೂ ಉಂಟೆ!' ಎಂದು ಬೆಕ್ಕಣ್ಣ ನಕ್ಕಿತು.

'ಅಂತೂ ಕೊನೆಗೂ ಹಾಸನದ ಯುವಸಂಸದನ ವಿಕೃತ ಹುಚ್ಚಾಟಗಳೆಲ್ಲ ಸಾಬೀತಾಗಿ ಜೀವಾವಧಿ ಶಿಕ್ಷೆ ವಿಧಿಸ್ಯಾರೆ. ನ್ಯಾಯಕ್ಕೆ ಜಯ ಸಿಕ್ಕಿತಲ್ಲ... ಹೀಗೂ ಉಂಟು ಎಂದು ಸಮಾಧಾನ ಪಡಬಹುದು' ಎಂದು ನಾನು ಆಟ ಮುಗಿಸಿದೆ.

ಸಂಗತ

ರಾಷ್ಟ್ರಪ್ರಶಸ್ತಿ: ಗುಣಮಟ್ಟ ನಾಸ್ತಿ

ರಾಷ್ಟ್ರಪ್ರಶಸ್ತಿ ಪಡೆದ ಚಲನಚಿತ್ರಗಳು ರಾಜಕೀಯ ಕಾರಣಗಳಿಗಾಗಿ ಸುದ್ದಿಯಲ್ಲಿವೆ. ಇದು, ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಬಗ್ಗೆ ಅನುಮಾನ ಮೂಡಿಸುವಂತಿದೆ.

• ವಿಶಾಖ ಎನ್.

ಚಲನಚಿತ್ರಗಳಿಗೆ ನೀಡುವ ರಾಷ್ಟ್ರ ಪ್ರಶಸ್ತಿಯ ಗುಣಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ. ಶಾರುಕ್ ಖಾನ್ ಅವರಿಗೆ 'ಜವಾನ್' ಹಿಂದಿ ಸಿನಿಮಾ ಅಭಿನಯಕ್ಕೆ ಶ್ರೇಷ್ಠ ನಟ ಪ್ರಶಸ್ತಿ ನೀಡಲಾಗಿದೆ. ಅದೀಗ ಸಹಜವಾಗಿ ಪ್ರಶ್ನೆಗೆ ಒಳಪಟ್ಟಿದೆ.

ಶಾರುಕ್ ಖಾನ್ ಮೂರು ದಶಕಗಳಿಗೂ ಹೆಚ್ಚು ಕಾಲ ಸೂಪರ್ ಸ್ಟಾರ್ ಆಗಿ ಮೆರೆದವರು. ಅತಿ ನಟನೆಯಿಂದ ಮೊದಲು ಛಾಪು ಮೂಡಿಸಿದ ಅವರು, ಆಮೇಲೆ ಪ್ರಯೋಗಮುಖಿಯೂ ಆದರು. 'ದಿಲ್ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಸಿನಿಮಾದಲ್ಲಿ ನಿರ್ದೇಶಕ ಯಶ್ ಚೋಪ್ರಾ, ಅವರಲ್ಲಿನ ಲವರ್ ಬಾಯ್ ಅನ್ನು ಹೊರಗೆ ತೆಗೆದಿದ್ದರು. ಕನ್ನಡದ 'ಚಿಗುರಿದ ಕನಸು' ಚಿತ್ರದ ಆತ್ಮವನ್ನೇ ಹೊಂದಿದ್ದ 'ಸ್ವದೇಸ್' (ಅಂದಹಾಗೆ, ಈ ಸಿನಿಮಾ ನಿರ್ದೇಶಿಸಿದ್ದು ಆಶುತೋಷ್ ಗೋವಾರಿಕರ್) ಸಿನಿಮಾದಲ್ಲಿ ಅವರ ನಿಯಂತ್ರಿತ ಅಭಿನಯ, 'ಚಕ್ ದೇ' ಇಂಡಿಯಾ ಚಿತ್ರದ ಹಾಕಿ ಕೋಚ್ ಪಾತ್ರದಲ್ಲಿನ ಖದರು, 'ಮೈ ನೇಮ್ ಈಸ್ ಖಾನ್'ನಲ್ಲಿನ ಮಾನಸಿಕ ಹೊಯ್ದಾಟದ ಭಾವುಕತೆಯ ಬಿಂಬ... ಇವೆಲ್ಲವೂ ಶಾರುಕ್ ಅಭಿನಯದ ಹಲವು ಮಜಲುಗಳಿಗೆ ಉದಾಹರಣೆ.

ಆದರೆ, 'ಜವಾನ್' ಸಿನಿಮಾದಲ್ಲಿನ ಅವರ ಪಾತ್ರದ ರೂಹನ್ನು ಈ ಯಾವುದರ ಜೊತೆಗೂ ತುಲನೆ ಮಾಡಲು ಆಗದು.



ಶಾರುಕ್ ಆ ಸಿನಿಮಾದಲ್ಲಿ ತ್ರಿಪಾತ್ರಗಳಲ್ಲಿ ಅಭಿನಯಿಸಿದ್ದಾರೆ, ನಿಜ. ಅವುಗಳಲ್ಲಿ ಅಭಿನಯಾವಕಾಶಕ್ಕಿಂತ ಹೆಚ್ಚಾಗಿ ಕಾಸ್ಮೆಟಿಕ್ ಆದಂಥ ಬಿಂಬಗಳು ಹೆಚ್ಚಾಗಿವೆ. ಒಂದು ಮೂಲದ ಪ್ರಕಾರ, ಮಲಯಾಳದ 'ಆಡು ಜೀವಿತಂ: ದಿ ಗೋಟ್ ಲೈಫ್' ಸಿನಿಮಾ ಪಾತ್ರಕ್ಕಾಗಿ ಪೃಥ್ವಿರಾಜ್ ಸುಕುಮಾರನ್ ಅವರೂ ಶ್ರೇಷ್ಠ ನಟ ಸ್ಪರ್ಧೆಯಲ್ಲಿ ಇದ್ದರು. ಆದರೆ, ಆ ಸಿನಿಮಾ ಸಹಜವಾಗಿ ಇಲ್ಲ, ಅಭಿನಯವೂ ನೈಜತೆಯಿಂದ ಕೂಡಿಲ್ಲ ಎಂದು 71ನೇ ರಾಷ್ಟ್ರ ಪಶಸ್ತಿಯ ತೀರ್ಪುಗಾರರ ಸಮಿತಿಯ ಅಧ್ಯಕ್ಷ ಆಶುತೋಷ್ ಗೋವಾರಿಕರ್ ಅಭಿಪ್ರಾಯಪಟ್ಟರೆಂದು ಮಲಯಾಳ ನಿರ್ದೇಶಕ ಪ್ರದೀಪ್ ನಾಯರ್ ತಿಳಿಸಿದ್ದಾರೆ. ಪ್ರದೀಪ್ ಅವರೂ ತೀರ್ಪುಗಾರರ ಸಮಿತಿಯಲ್ಲಿ ಒಬ್ಬರಾಗಿದ್ದರು.

'ಕೇರಳ ಸ್ಟೋರಿ' ಸಿನಿಮಾ ನಿರ್ದೇಶನಕ್ಕೆ (ನಿರ್ದೇಶಕ: ಸುದೀಪ್ತೋ ಸೇನ್) ಶ್ರೇಷ್ಠ ಪ್ರಶಸ್ತಿ ಕೊಡುವುದು ಸರಿಯಲ್ಲ, ಅದು ಒಂದು ರಾಜ್ಯದ ವಿರುದ್ಧ ರಾಜಕೀಯ ಅಜೆಂಡಾ ಇಟ್ಟುಕೊಂಡಿರುವ ಸಿನಿಮಾ ಎಂದು ಕೂಡ ತಾವು ಪ್ರತಿಪಾದಿಸಿದ್ದಾಗಿ ಪ್ರದೀಪ್ ಹೇಳಿಕೊಂಡಿದ್ದಾರೆ. ಸಮಿತಿಯಲ್ಲಿ ತಮ್ಮನ್ನು ಹೊರತುಪಡಿಸಿ ಮಿಕ್ಕೆಲ್ಲರೂ ಆ ಚಿತ್ರದ ನಿರ್ದೇಶನಕ್ಕೆ ಪ್ರಶಸ್ತಿ ಕೊಡಲು ಒಪ್ಪಿಗೆ ಸೂಚಿಸಿದ್ದು, ತಾವು ಒಬ್ಬರೇ ಗುಂಪಿಗೆ ಸೇರದ ಪದದ ಹಾಗೆ ಹೊರಗೆ ಉಳಿದಂತೆ ಆಯಿತು ಎಂದೂ ಭಾವುಕರಾಗಿ ಅಳಲು ತೋಡಿಕೊಂಡಿದ್ದಾರೆ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ ಸೌಹಾರ್ದ ಕದಡುವ ಚಿತ್ರಕ್ಕೆ ಮನ್ನಣೆ ಕೊಟ್ಟಂತಾಗಿದೆ ಎಂದು ಟೀಕಿಸಿಯೂ ಆಗಿದೆ.

ಆಶುತೋಷ್ ಗೋವಾರಿಕರ್ ಅವರ ಸಹಜತೆಯ ಅಪೇಕ್ಷೆಯನ್ನೇ ಇಟ್ಟುಕೊಂಡು ಒರೆಗೆಹಚ್ಚಿದರೂ ಶಾರುಕ್ ಅಭಿನಯಕ್ಕೆ 'ಜವಾನ್' ಸಿನಿಮಾದಲ್ಲಿ ಹೆಚ್ಚು ಅಂಕ ಸಿಗಲಾರದು. 2023ರ 'ಮಾಮಣ್ಣನ್' ತಮಿಳು ಚಿತ್ರದಲ್ಲಿನ ವಡಿವೇಲು ಅವರ ಅಭಿನಯವನ್ನು ನೆನಪಿಸಿಕೊಳ್ಳೋಣ. ತೆಲುಗಿನ 'ಹಾಯ್ ನಾನ್ನ' ಚಿತ್ರದಲ್ಲಿ ಜನಪ್ರಿಯ ನಟ ನಾನಿ ಭಾವಾಭಿನಯದ ನಿಯಂತ್ರಿತ ವರಸೆಯನ್ನೂ ಮೆಲುಕುಹಾಕೋಣ. ಅದೇ ಭಾಷೆಯ, ಕನ್ನಡವನ್ನೂ ಹದವರಿತಂತೆ ಬೆರೆಸಿಕೊಂಡಿದ್ದ 'ಬಳಗಂ' ಸಿನಿಮಾದ ಪ್ರಿಯದರ್ಶಿ ಪುಲಿಕೊಂಡ ಅವರ ಪಾತ್ರ ತೀವ್ರತೆಯನ್ನು ಜ್ಞಾಪಿಸಿಕೊಳ್ಳೋಣ. ಅಷ್ಟೇ ಏಕೆ, ಕನ್ನಡದ್ದೇ 'ಸಪ್ತಸಾಗರದಾಚೆ ಎಲ್ಲೋ' ಚಿತ್ರದಲ್ಲಿನ ರಕ್ಷಿತ್ ಶೆಟ್ಟಿ ಅವರ ಸಹಜಾಭಿನಯ ಮರೆಯಲಾದೀತೆ? ಇವೆಲ್ಲ ಚಿತ್ರಗಳು ವಸ್ತು, ಸಮಕಾಲೀನತೆ ಹಾಗೂ ಮಾನಸಿಕ ಸಂಕೀರ್ಣತೆಯ ದೃಷ್ಟಿಯಿಂದ ಮುಖ್ಯವಾದವು. ಈ ಯಾವುದೂ ಅಥವಾ ಇಂತಹ ಬೇರೆ ಭಾಷೆಯ ಸಿನಿಮಾಗಳು ಯಾಕೆ ರಾಷ್ಟ್ರಪ್ರಶಸ್ತಿ ತೀರ್ಪುಗಾರರ ಸಮಿತಿಗೆ ರುಚಿಸಲಿಲ್ಲ ಎನ್ನುವ ಪ್ರಶ್ನೆ ಮೂಡುತ್ತದೆ.


ಶಾರುಕ್ ಖಾನ್ ನಟರಾಗಿ ಚಿತ್ರರಂಗಕ್ಕೆ ಕೊಟ್ಟಿರುವ ಕೊಡುಗೆ ಮುಖ್ಯವಾದುದು, ನಿಜ. ಹಾಗೆಂದು ಅಭಿನಯ ಕೌಶಲ ಗಣನೆಗೆ ತೆಗೆದುಕೊಂಡೇ ಶ್ರೇಷ್ಠ ನಟ ಪ್ರಶಸ್ತಿಗೆ ಆಯ್ಕೆ ಮಾಡಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಅವರ ಆಯ್ಕೆ ಸಮರ್ಥನೀಯ ಅಲ್ಲವೇ ಅಲ್ಲ.

ಕಳೆದ ವರ್ಷ 'ಕಾಂತಾರ' ಕನ್ನಡ ಸಿನಿಮಾ ನಟನೆಗೆ ರಿಷಭ್ ಶೆಟ್ಟಿ ಅವರಿಗೆ ಶ್ರೇಷ್ಠ ನಟ ರಾಷ್ಟ್ರಪ್ರಶಸ್ತಿ ಬಂದಿತ್ತು. ಅದಕ್ಕೂ ಮೊದಲು 'ಪುಷ್ಪಾ' ಸಿನಿಮಾದಲ್ಲಿನ ಅಭಿನಯಕ್ಕಾಗಿ ಅಲ್ಲು ಅರ್ಜುನ್ ಅವರಿಗೆ ಪ್ರಶಸ್ತಿ ನೀಡಲಾಗಿತ್ತು. ಆ ಎರಡೂ ಆಯ್ಕೆಗಳು ಕೇವಲ ಜನಪ್ರಿಯ ಚಿತ್ರಗಳನ್ನೇ ಮುಖ್ಯ ಪ್ರಶಸ್ತಿಗೆ ಪರಿಗಣಿಸಲಾಗುತ್ತಿದೆ ಎಂಬ ಚರ್ಚೆಗೆ ಕಾರಣವಾಗಿದ್ದವು. ಈಗ ಆ ಚರ್ಚೆ ವಿಸ್ತೃತಗೊಳ್ಳುವ ರೀತಿಯಲ್ಲಿ ಪ್ರಶಸ್ತಿಗೆ ಆಯ್ಕೆಗಳನ್ನು ಮಾಡಲಾಗಿದೆ. ಹಿಂದೆ, 'ಪಾ' ಸಿನಿಮಾ ಅಭಿನಯಕ್ಕೆ ಅಮಿತಾಭ್ ಬಚ್ಚನ್ ಅವರಿಗೆ ಪ್ರಶಸ್ತಿ ನೀಡುವುದಕ್ಕಾಗಿ, ಕನ್ನಡದ ನಟ ಬಿರಾದಾರ್ ಅವರಿಗೆ ಪ್ರಶಸ್ತಿ ತಪ್ಪಿಸಿದ್ದನ್ನು ಮತ್ತೆ ನೆನಪಿಸಿಕೊಳ್ಳುತ್ತಲೇ ಈ ವಿದ್ಯಮಾನವನ್ನು ನಾವು ಗಮನಿಸಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನಟಿ ರಮ್ಯಾ ಅವರು 'ದರ್ಶನ್ ಅವರ ಅಭಿಮಾನಿ'ಗಳು ಎಂದು ಹೇಳಲಾದ ಕೆಲವು ವ್ಯಕ್ತಿಗಳಿಂದ ಭಾರಿ ಟ್ರೋಲ್‌ಗೆ, ಬೆದರಿಕೆಗಳಿಗೆ ಗುರಿಯಾಗಿದ್ದು, ಪೊಲೀಸರಿಗೆ ದೂರನ್ನೂ ನೀಡಿದ್ದಾರೆ. ಡಿಜಿಟಲ್ ದಾಳಿಕೋರರ ಬೆನ್ನು ಹತ್ತಿರುವ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಮಹಿಳೆಯರನ್ನು, ಅದರಲ್ಲೂ ಚಿತ್ರನಟಿಯರನ್ನು ಟ್ರೋಲ್ ಮಾಡುವುದು ಹಲವು ವರ್ಷಗಳಿಂದ ನಡೆಯುತ್ತಲೇ ಇದೆ. ನಟಿಯರನ್ನಷ್ಟೇ ಅಲ್ಲ, ಸಾಮಾಜಿಕ ಕಾರ್ಯಕರ್ತರನ್ನು, ರಾಜಕಾರಣಿಗಳನ್ನು, ಸಾರ್ವಜನಿಕ ಜೀವನದಲ್ಲಿರುವ ಗಣ್ಯರನ್ನು ಟ್ರೋಲ್ ಮಾಡುವ ಪ್ರವೃತ್ತಿ ವ್ಯಾಪಕವಾಗಿದೆ. ತಮಗೆ ಒಲ್ಲದ ಸಿದ್ಧಾಂತ, ವಿಚಾರ, ಭಾಷೆ, ಲಿಂಗ, ಧರ್ಮಕ್ಕೆ ಸೇರಿದವರನ್ನು ಟ್ರೋಲ್ ಮಾಡುವುದು, ಹೆದರಿಸುವುದು, ಅವರ ಕಾರ್ಯಯೋಜನೆಗಳಿಗೆ ಅಡ್ಡಿಪಡಿಸುವುದು ನಿರ್ದಿಷ್ಟ ವರ್ಗ, ಗುಂಪು ಮತ್ತು ಹಿತಾಸಕ್ತಿಗಳ ಒಂದು ವ್ಯವಸ್ಥಿತ ಕಾರ್ಯತಂತ್ರವೇ ಆಗಿದೆ

ಟ್ರೋಲಿಂಗ್ 'ಮುಖರಹಿತ'ರ ಡಿಜಿಟಲ್ ದಾಳಿ



ಆನ್‌ಲೈನ್‌ನಲ್ಲಿ (ಸಾಮಾಜಿಕ ಜಾಲತಾಣಗಳಲ್ಲಿ) ಇತರರಿಗೆ ಕಿರುಕುಳ ನೀಡುವ/ಕೇಡು ಬಗೆಯುವ ಉದ್ದೇಶದಿಂದ ಪ್ರತಿಕ್ರಿಯೆಗಳನ್ನು ಹಾಕುವುದೇ ಟ್ರೋಲಿಂಗ್. ಈ ಪ್ರತಿಕ್ರಿಯೆಗಳು ಬೆದರಿಕೆ ಹಾಕುವ ರೂಪದಲ್ಲಿ ಅಥವಾ ಬೇರೊಬ್ಬರ ಗೌರವ/ಘನತೆಗೆ ಚ್ಯುತಿ ತರುವಂತೆ ಇರುತ್ತವೆ

ಪ್ರಜಾವಾಣಿ ವಾರ್ತೆ

ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಮಾಡುವವರು ಯಾವ ಮಟ್ಟಕ್ಕೆ ಇಳಿಯಬಲ್ಲರು ಎನ್ನುವುದು ನಟಿ ರಮ್ಯಾ ಅವರ ಪ್ರಕರಣದಲ್ಲಿ ಸಾಬೀತಾಗಿದೆ. ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಅವರಿಗೆ ಜಾಮೀನು ನೀಡಿದ್ದಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು. ಅದನ್ನು ಉಲ್ಲೇಖಿಸಿದ್ದ ರಮ್ಯಾ ಅವರು, 'ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗುವ ಭರವಸೆ ಮೂಡಿದೆ' ಎಂದು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದರು. ಅಷ್ಟಕ್ಕೇ ದರ್ಶನ್ ಅಭಿಮಾನಿಗಳು ಎನ್ನಿಸಿಕೊಂಡ ಕೆಲವರು ರಮ್ಯಾ ಅವರ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ಮುಗಿಬಿದ್ದರು. ಅತ್ಯಂತ ಅಶ್ಲೀಲ, ಅಸಭ್ಯ, ನಿಂದನಾತ್ಮಕ ಭಾಷೆಯಲ್ಲಿ ಅವರನ್ನು ಟೀಕೆ, ಗೇಲಿ ಮಾಡಿದರು. ಅತ್ಯಾಚಾರ, ಕೊಲೆಯ ಬೆದರಿಕೆಗಳನ್ನೂ ಹಾಕಿದರು.

'ಸೆಲೆಬ್ರಿಟಿಯಾಗಿ ನನಗೆ ಟ್ರೋಲಿಂಗ್ ಹೊಸದೇನಲ್ಲ. ಆದರೆ, ಈ ಪ್ರಮಾಣದಲ್ಲಿ ಟ್ರೋಲ್‌ಗೆ ಗುರಿಯಾಗಿದ್ದು ಇದೇ ಮೊದಲು. ರೇಣುಕಸ್ವಾಮಿ ಅವರು ಪವಿತ್ರ ಗೌಡ ಅವರಿಗೆ ಕಳಿಸಿದ್ದರು ಎನ್ನಲಾದ ಅಶ್ಲೀಲ ಸಂದೇಶಗಳಿಗೂ ಈ ಟ್ರೋಲ್‌ಗಳಿಗೂ ವ್ಯತ್ಯಾಸವೇನಿಲ್ಲ' ಎಂದು ರಮ್ಯಾ ಹೇಳಿದ್ದಾರೆ. ಅಷ್ಟೇ ಅಲ್ಲ, ಪೊಲೀಸರಿಗೆ ದೂರನ್ನೂ ನೀಡಿದ್ದಾರೆ. ಅಂತರ್ಜಾಲ ಕಿರುಕುಳದಿಂದ ಅನೇಕ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಿಳೆಯರ ಪರವಾಗಿ ತಾನು ಪೊಲೀಸರಿಗೆ ದೂರು ನೀಡಿರುವುದಾಗಿ ಅವರು ಹೇಳಿದ್ದಾರೆ.

ಚಿತ್ರರಂಗದ ಅನೇಕ ನಟ ನಟಿಯರು ಈ ಹಿಂದೆ ಟ್ರೋಲ್‌ಗೆ ಒಳಗಾಗಿದ್ದಾರೆ. ರಶ್ಮಿಕಾ ಅವರ ಕನ್ನಡಪ್ರೇಮ ಮತ್ತು ಭಾಷಾ ನಿಷ್ಠೆ ಹಲವು ಬಾರಿ ಟ್ರೋಲ್‌ಗೆ ಒಳಗಾಗಿದೆ. ರಶ್ಮಿಕಾ ಮಂದಣ್ಣ ಅವರು ಟ್ರೋಲ್‌ಗೆ ಒಳಗಾಗಿದ್ದಾಗ ನಟಿ ರಮ್ಯಾ ಅವರು ರಶ್ಮಿಕಾ ನೆರವಿಗೆ ಧಾವಿಸಿದ್ದರು. ಈಗ ರಮ್ಯಾ ಅವರೇ ಟ್ರೋಲ್‌ಗೆ ಗುರಿಯಾಗಿದ್ದು, ವಿವಿಧ ಸಾಮಾಜಿಕ ಜಾಲತಾಣಗಳ 43 ಖಾತೆಗಳ ವಿರುದ್ಧ ದೂರು ನೀಡಿದ್ದಾರೆ.

ಟ್ರೋಲಿಂಗ್ ಎನ್ನುವುದು ಮುಖರಹಿತ ಡಿಜಿಟಲ್ ದಾಳಿಯಾಗಿದೆ. ಹೀಗೆ ದಾಳಿ ಮಾಡುವವರ ಪೈಕಿ ಬಹುತೇಕರು ನಕಲಿ ಹೆಸರು ಮತ್ತಿತರ ಮಾಹಿತಿ ನೀಡಿ ಸಾಮಾಜಿಕ ಜಾಲತಾಣಗಳಲ್ಲಿ ಖಾತೆಗಳನ್ನು ಆರಂಭಿಸಿರುವವರೇ ಆಗಿರುತ್ತಾರೆ. ಕೆಲವು ಸಮಾನ ಮನಸ್ಕರು ಸಮಾನ ಹಿತಾಸಕ್ತಿಗಾಗಿ ಜಾಲತಾಣಗಳಲ್ಲಿ ಗುಂಪುಗಳನ್ನೂ ರಚಿಸಿಕೊಂಡಿರುತ್ತಾರೆ. ತಮ್ಮ ಧರ್ಮ, ಭಾಷೆ, ಲಿಂಗ, ಅಭಿಪ್ರಾಯ, ಪಂಥವೇ ಶ್ರೇಷ್ಠ ಎಂದು ಪ್ರತಿಪಾದಿಸುವವರು, ಎಲ್ಲೆ ಮೀರಿ ಅದರ ಸಮರ್ಥನೆಗೆ ಅಥವಾ ವಿರೋಧಿಗಳ ದಮನಕ್ಕೆ ಮುಂದಾದಾಗ, ಅದು ಡಿಜಿಟಲ್ ದಾಳಿಯ ರೂಪ ಪಡೆಯುತ್ತಿದೆ. ಅವರ ಹಿತಾಸಕ್ತಿಗಳನ್ನು ಯಾರಾದರೂ ವಿರೋಧಿಸಿದರೆ, ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದರೆ, ಅವರ ವಿರುದ್ಧ ಸಂಘಟಿತ ಮತ್ತು ವ್ಯಾಪಕ ದಾಳಿ ನಡೆಸುತ್ತಾರೆ. ಕೆಲವರಂತೂ ಹೀಗೆ ಮಾಡುವ ಭರದಲ್ಲಿ ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಾರೆ. ಹೀಗೆ ಮಾಡುವ ಮೂಲಕ ಅನೇಕ ಬಾರಿ ಮಹಿಳೆಯರು, ದಲಿತರು, ಲಿಂಗತ್ವ ಅಲ್ಪಸಂಖ್ಯಾತರು, ಧಾರ್ಮಿಕ ಅಲ್ಪಸಂಖ್ಯಾತರು, ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯಗಳನ್ನು ಹತ್ತಿಕ್ಕಲಾಗುತ್ತಿದೆ, ಅವರ ಬಾಯಿ ಮುಚ್ಚಿಸಲಾಗುತ್ತಿದೆ.

ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ಇದೆಯಾದರೂ, ಇನ್ನೊಬ್ಬರ ಅಭಿಪ್ರಾಯವನ್ನು ಸಂವಾದದ ಚೌಕಟ್ಟು ಮೀರಿ ಟೀಕಿಸುವುದು, ವಿರೋಧಿಸುವುದು, ದಮನ ಮಾಡಲು ಯತ್ನಿಸುವುದು ಅಸಾಂವಿಧಾನಿಕವಾಗುತ್ತದೆ. ಟ್ರೋಲರ್‌ಗಳು ಯಥಾಸ್ಥಿತಿವಾದಿಗಳಾಗಿದ್ದು, ಬದಲಾವಣೆಯ ವಿರೋಧಿಗಳಾಗಿರುತ್ತಾರೆ; ಹೀಗಾಗಿಯೇ ಮಹಿಳೆಯರು, ಅದರಲ್ಲೂ ಸಾರ್ವಜನಿಕ ಬದುಕಿನಲ್ಲಿರುವವರು ಹೆಚ್ಚು ಟ್ರೋಲ್‌ಗಳಿಗೆ ಗುರಿಯಾಗುತ್ತಿದ್ದಾರೆ ಎಂದು ತಜ್ಞರು ಹೇಳುತ್ತಾರೆ. ಮಹಿಳೆಯರು ಮತ್ತು ಪುರುಷರ ನಡುವಿನ ಡಿಜಿಟಲ್ ಅಂತರ ಹೆಚ್ಚಾಗಿರುವುದು ಕೂಡ ಮಹಿಳೆಯರ ಮೇಲೆ ಹೆಚ್ಚು ಡಿಜಿಟಲ್ ದಾಳಿ ನಡೆಯಲು ಒಂದು ಕಾರಣ. ಟ್ರೋಲಿಂಗ್ ಬಗ್ಗೆ 'ಅಮ್ನೆಸ್ಟಿ ಇಂಟರ್‌ನ್ಯಾಷನಲ್' 2020ರಲ್ಲಿ ಒಂದು ಅಧ್ಯಯನ ನಡೆಸಿತ್ತು. 95 ಮಹಿಳಾ ರಾಜಕಾರಣಿಗಳ ಬಗ್ಗೆ ಚುನಾವಣಾ ಸಮಯದಲ್ಲಿ 1.14 ಲಕ್ಷ ಟ್ವೀಟ್‌ಗಳು ಪ್ರಕಟವಾಗಿದ್ದವು; ಅವುಗಳಲ್ಲಿ ಶೇ 13.8ರಷ್ಟು ಪೋಸ್ಟ್‌ಗಳು ನಿಂದನಾತ್ಮಕವಾಗಿದ್ದವು ಎಂದು ಆ ವರದಿ ಉಲ್ಲೇಖಿಸಿದೆ.

ಆನ್‌ಲೈನ್ ವೇದಿಕೆಗಳು ಒಂದು ರೀತಿಯ ಮುಖರಹಿತ ವೇದಿಕೆಗಳಾಗಿಯೇ ಉಳಿದಿವೆ. ಜತೆಗೆ, ಈ ವೇದಿಕೆಗಳಲ್ಲಿ ತಮ್ಮ ವಾದ, ಅನಿಸಿಕೆ, ಅಭಿಪ್ರಾಯವನ್ನು ವ್ಯಕ್ತಪಡಿಸುವ ಅನಿಯಂತ್ರಿತ ಹಾಗೂ ಮುಕ್ತ ಅವಕಾಶ ಇದೆ. ಈ ಕಾರಣದಿಂದಲೇ ಕೆಲವರು ಮನಸೋಇಚ್ಛೆ ವರ್ತಿಸುತ್ತಿದ್ದು, ಹಲವು ಬಾರಿ ಅದು ವಿಕೃತ ದಾಳಿಯ ರೂಪ ಪಡೆಯುತ್ತಿದೆ. ಇಂಥವರ ವಿರುದ್ಧ ಕ್ರಮ ಕೈಗೊಳ್ಳಲು ಸೂಕ್ತ ವ್ಯವಸ್ಥೆ ರೂಪಿಸಬೇಕು ಎನ್ನುವ ಒತ್ತಾಯವಿದೆ.

ಆಧಾರ: ಪಿಟಿಐ, ಅಮ್ನೆಸ್ಟಿ ಇಂಟರ್‌ನ್ಯಾಷನಲ್




'ತಕ್ಷಣವೇ ಕ್ರಮ'

ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತೊಬ್ಬರನ್ನು ಹೀಗಳೆಯುವ, ಕೆಟ್ಟದಾಗಿ ಸಂದೇಶ ಕಳುಹಿಸುವ ಹಾಗೂ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಡಿ ಅವಕಾಶವಿದೆ. ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಬಂಧಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲು ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಲ್ಲೂ ತಂಡಗಳಿವೆ. ಆ ತಂಡಗಳ ಸಿಬ್ಬಂದಿ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುವ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿರುತ್ತಾರೆ

ಎಂ.ಎ.ಸಲೀಂ
ರಾಜ್ಯ ಪೊಲೀಸ್ ಮಹಾನಿರ್ದೇಶಕ

ಯಾರಿವರು ಟ್ರೋಲಿಗರು?

- ನಕಲಿ ಖಾತೆದಾರರು. ತಮ್ಮ ಗುರುತನ್ನು ಮುಚ್ಚಿಟ್ಟು ಮನಸೋಇಚ್ಛೆ ಕಮೆಂಟ್‌ಗಳನ್ನು ಮಾಡುತ್ತಾರೆ
- ನಟ, ಕ್ರಿಕೆಟಿಗ ಅಥವಾ ಇನ್ಯಾವುದೇ ಸೆಲೆಬ್ರಿಟಿಯ ಕಟ್ಟಾ ಅಭಿಮಾನಿಗಳು. ತಾವು ಮೆಚ್ಚಿರುವ ಸೆಲೆಬ್ರಿಟಿಯ ಬಗ್ಗೆ ಬೇರೆ ಯಾರಾದರೂ ನಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದರೆ ಇವರು ಅವರಿಗೆ ಬೆದರಿಕೆ ಒಡ್ಡುವುದು, ಹೀಯಾಳಿಸುವುದು, ಗೌರವಕ್ಕೆ ಚ್ಯುತಿ ತರುವಂತೆ ಪ್ರತಿಕ್ರಿಯಿಸುತ್ತಾರೆ
- ತಮಾಷೆಯ ಉದ್ದೇಶದಿಂದ ಮಾಡುವವರು. ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಅಭಿಪ್ರಾಯವನ್ನು ಹಾಕಿ ತಮಾಷೆ ನೋಡುವ ಬಳಕೆದಾರರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಇಂತಹ ಪ್ರತಿಕ್ರಿಯೆಗಳನ್ನು ಹಾಕುವಾಗ ತಮಗೆ ಯಾವುದೇ ದುರುದ್ದೇಶ ಇಲ್ಲದಂತೆ ಅವರು ನಟಿಸುತ್ತಾರೆ
- ಇನ್ನೊಬ್ಬರ ಮೇಲೆ ಅಧಿಕಾರ ಚಲಾಯಿಸುವ ಮನೋಧರ್ಮ ಉಳ್ಳವರು
- ಬೇರೆಯರ ಬಗ್ಗೆ ಹೊಟ್ಟೆಕಿಚ್ಚು ಪಡುವವರು ಮತ್ತು ಹತಾಶರಾಗಿರುವವರು
- ಬೇರೆಯವರ ಗಮನ ಸೆಳೆಯುವ ಉದ್ದೇಶದವರು. ಎಲ್ಲರಿಗಿಂತ ಭಿನ್ನವಾದ ಪ್ರತಿಕ್ರಿಯೆ ಹಾಕಿದರೆ ತಮ್ಮನ್ನು ಜನ ಗುರುತಿಸುತ್ತಾರೆ ಎಂಬ ಲೆಕ್ಕಾಚಾರ ಇವರದ್ದು
- ಜೀವನದಲ್ಲಿ ಗಂಭೀರವಾದ ಉದ್ಯೋಗ ಯಾವುದೂ ಇಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ದಿನಪೂರ್ತಿ ಕಾಲ ಕಳೆಯುವವರು ಟ್ರೋಲಿಂಗ್‌ನಲ್ಲಿ ತೊಡಗುವುದು ಹೆಚ್ಚು
- ಸಾಮಾಜಿಕ ಸಭ್ಯತೆ ಅರಿಯದವರು. ಸಾರ್ವಜನಿಕವಾಗಿ ಹೇಗೆ ಮಾತನಾಡಬೇಕು, ನಡೆದುಕೊಳ್ಳಬೇಕು, ತಮ್ಮ ಮಾತು ಅಥವಾ ಪ್ರತಿಕ್ರಿಯೆ ಇನ್ನೊಬ್ಬರನ್ನು ಗಾಸಿಗೊಳಿಸುವಂತೆ ಇರಬಾರದು ಎಂಬ ಸಾಮಾನ್ಯ ಪ್ರಜ್ಞೆ ಇವರಿಗೆ ಇರುವುದಿಲ್ಲ
- ಕಾನೂನಿನ ಭಯ/ ಅರಿವು ಇಲ್ಲದವರು. ಬೇರೆಯವರಿಗೆ ಬೆದರಿಕೆ ಹಾಕುವುದು, ಹೀಯಾಳಿಸುವುದು, ಪ್ರತಿಕ್ರಿಯೆಗಳ ಮೂಲಕ ಸಾಮಾಜಿಕ ಸ್ವಾಸ್ಥ್ಯ ಹಾಳುಗೆಡವುವುದು ಮಾಡಿದರೆ ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬಹುದು ಎಂಬ ಅರಿವು ಇಲ್ಲದವರೂ ಇದ್ದಾರೆ; ಇದರ ಬಗ್ಗೆ ತಿಳಿವಳಿಕೆ ಇದ್ದು, ನೆಲದ ಕಾನೂನನ್ನು ಉಲ್ಲಂಘಿಸುವವರೂ ಇದ್ದಾರೆ



ಪರಿಣಾಮ ಏನು?

- ಟ್ರೋಲ್‌ಗಳು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಟ್ರೋಲ್‌ಗಳಿಂದ ಆಗುವ ಅವಮಾನದಿಂದ ಒತ್ತಡಕ್ಕೆ ಒಳಗಾಗುವ, ಖಿನ್ನತೆಗೆ ಜಾರುವ ಸಾಧ್ಯತೆ ಇರುತ್ತದೆ. ದುರ್ಬಲ ಮನಸ್ಸಿನವರಾದರೆ ಆತ್ಮಹತ್ಯೆಯಂತಹ ನಿರ್ಧಾರವನ್ನೂ ತೆಗೆದುಕೊಳ್ಳಬಹುದು
- ನಿರಂತರ ಟ್ರೋಲ್‌ಗಳು ವ್ಯಕ್ತಿಯೊಬ್ಬರ ಮೇಲೆ ಇಟ್ಟ ನಂಬಿಕೆಗೆ ಗಾಸಿ ಉಂಟುಮಾಡಬಹುದು
- ಒಬ್ಬ ವ್ಯಕ್ತಿಯ ಕುರಿತಾಗಿ ಭಿನ್ನ ಅಭಿಪ್ರಾಯಗಳನ್ನು ರೂಪಿಸಬಹುದು. ಇದು ಸಾಮಾಜಿಕವಾಗಿ ಆ ವ್ಯಕ್ತಿಯ ವರ್ಚಸ್ಸಿಗೆ ಧಕ್ಕೆ ಉಂಟುಮಾಡಬಹುದು



ಪ್ರತ್ಯೇಕ ನಿಯಮಗಳು ಇಲ್ಲ

ಸಾಮಾಜಿಕ ಜಾಲತಾಣ ಕಂಪನಿಗಳು ಟ್ರೋಲಿಂಗ್‌ಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನಿಯಮಗಳನ್ನು ಹೊಂದಿಲ್ಲ. ಆದರೆ, ಬಳಕೆದಾರರ ಅನುಚಿತ ವರ್ತನೆ, ಬೇರೆಯವರಿಗೆ ಕಿರುಕುಳ ನೀಡುವುದು, ಸಮಾಜದ ಸ್ವಾಸ್ಥ್ಯ ಹಾಳುಮಾಡುವಂತಹ ಅಭಿಪ್ರಾಯಗಳ ವಿರುದ್ಧ, ಜಾತಿ, ಧರ್ಮದ ಅವಹೇಳನ, ದ್ವೇಷಕಾರುವ ಸಾಹಿತ್ಯದ ಪ್ರಕಟಣೆಯಂತಹ ನಡವಳಿಕೆಗಳ ವಿರುದ್ಧ ನಿಯಮಗಳನ್ನು ಹೊಂದಿವೆ. ಈ ನಿಯಮಗಳು 'ಕಮ್ಯುನಿಟಿ ಸ್ಟ್ಯಾಂಡರ್ಡ್ಸ್' ಅಡಿಯಲ್ಲಿ ಬರುತ್ತವೆ. ಪೋಸ್ಟ್ ಬರೆದ ಅಥವಾ ಕಮೆಂಟ್ ಮಾಡಿದ ತಕ್ಷಣವೇ ಅವು ಕಮ್ಯುನಿಟಿ ಸ್ಟ್ಯಾಂಡರ್ಡ್‌ಗೆ ಅನುಸಾರವಾಗಿದೆಯೇ ಎಂಬುದನ್ನು ಸಾಮಾಜಿಕ ಜಾಲತಾಣಗಳು ಪರಿಶೀಲಿಸುವುದಿಲ್ಲ. ಜನರು ಅದನ್ನು ರಿಪೋರ್ಟ್ ಮಾಡಿದ ನಂತರ ಅದರ ಆಧಾರದಲ್ಲಿ ಪರಿಶೀಲಿಸುತ್ತವೆ.

ತಮ್ಮ ವೇದಿಕೆಯಲ್ಲಿ ಜನರು ಮುಕ್ತವಾಗಿ ಅಭಿಪ್ರಾಯ ಹಂಚಿಕೊಳ್ಳಬಹುದು ಎಂಬುದು ಬಹುತೇಕ ಸಾಮಾಜಿಕ ಜಾಲತಾಣ ಕಂಪನಿಗಳ ಘೋಷಣೆ. ಏಕಾಏಕಿಯಾಗಿ ಟ್ರೋಲಿಂಗ್ ಅನ್ನು ನಿರ್ಬಂಧಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಕ್ರಮವಾಗಬಹುದು ಎಂಬುದು ಅವುಗಳ ನಿಲುವು.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಟ್ರೋಲ್ ಆದಾಗ ಏನು ಮಾಡಬೇಕು?

- ಭಯಪಡಬೇಕಾಗಿಲ್ಲ, ಒತ್ತಡಕ್ಕೂ ಒಳಗಾಗಬೇಕಾಗಿಲ್ಲ. ಧೈರ್ಯವಾಗಿರಿ
- ಟ್ರೋಲ್ ಮಾಡುವವರಿಗೆ ಪ್ರತಿಕ್ರಿಯಿಸುವುದು ಜಾಣತನವಲ್ಲ. ದಿಟ್ಟವಾಗಿ ಪ್ರತಿಕ್ರಿಯಿಸಿದರೂ ಟ್ರೋಲಿಗರು ಮತ್ತಷ್ಟು ತೀವ್ರವಾಗಿ ಪ್ರತಿಕ್ರಿಯಿಸುವ ಸಾಧ್ಯತೆ ಇರುತ್ತದೆ
- ಟ್ರೋಲ್ ಮಾಡಿದವರ ಮಾಹಿತಿ ಕಲೆ ಹಾಕಿ. ಅವರು ನೀಡಿರುವ ಪ್ರತಿಕ್ರಿಯೆಗಳು, ಸಂದೇಶಗಳ ಸ್ಕ್ರೀನ್‌ಶಾಟ್ ತೆಗೆದಿಡಿ
- ಅವರ ಪ್ರೊಫೈಲ್ ಬ್ಲಾಕ್ ಮಾಡಿ ಅಥವಾ ರಿಪೋರ್ಟ್ ಮಾಡಿ
- ಧೈರ್ಯವಾಗಿ ಪೊಲೀಸರಿಗೆ ದೂರು ನೀಡಿ. ಪೂರಕವಾಗಿ ಟ್ರೋಲಿಗರು ಹಾಕಿದ ಕಮೆಂಟ್‌ಗಳ ವಿವರಗಳನ್ನು ನೀಡಿ

ತಡೆಯುವುದು ಹೇಗೆ?

- ಸಾಮಾಜಿಕ ಜಾಲತಾಣಗಳಲ್ಲಿ ನಿಮ್ಮ ಚಟುವಟಿಕೆ ಸ್ನೇಹಿತರ ವ್ಯಾಪ್ತಿಗೆ ಸೀಮಿತವಾಗಿರಲಿ. ಅಂದರೆ, ಅಭಿಪ್ರಾಯಗಳು, ಚರ್ಚೆಗಳು ಸ್ನೇಹಿತರ ನಡುವೆ ಮಾತ್ರ ಇರಲಿ. ಅದಕ್ಕಾಗಿ ನಿಮ್ಮ ಖಾತೆಯ ಪ್ರೈವೆಟ್ ಸೆಟ್ಟಿಂಗ್ ಅನ್ನು ಬದಲಾಯಿಸಿಕೊಳ್ಳಿ
- ಕುಟುಂಬ, ಮಕ್ಕಳಿರುವ ಫೋಟೊ, ವಿಡಿಯೊಗಳನ್ನು ಹಂಚಿಕೊಳ್ಳುವುದನ್ನು ಕಡಿಮೆ ಮಾಡಿ. ಕಿಡಿಗೇಡಿಗಳು ಫೋಟೊ, ವಿಡಿಯೊಗಳನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ
- ಹಾಕುವ ಪೋಸ್ಟ್‌ಗಳು, ವ್ಯಕ್ತಪಡಿಸುವ ಅಭಿಪ್ರಾಯಗಳು ಘನತೆಯಿಂದ ಮತ್ತು ವೃತ್ತಿಪರತೆಯಿಂದ ಕೂಡಿರಲಿ
- ವಿವಾದಿತ ಸಂಗತಿಗಳ ಬಗ್ಗೆ ಪೋಸ್ಟ್ ಮಾಡುವುದನ್ನು ಆದಷ್ಟೂ ತಪ್ಪಿಸಿ
- ಕಮೆಂಟ್‌ಗಳು ಬಾರದಂತೆ ಮಾಡುವುದಕ್ಕೆ ಅಥವಾ ಯಾರು ನಿಮ್ಮ ಪೋಸ್ಟ್‌ಗೆ ಕಮೆಂಟ್ ಮಾಡಬಹುದು ಎಂದು ಸೆಟ್ಟಿಂಗ್ ಮಾಡುವುದಕ್ಕೂ ಸಾಮಾಜಿಕ ಜಾಲತಾಣಗಳಲ್ಲಿ ಅವಕಾಶ ಇದೆ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಮೆರಿಕವು ಭಾರತದ ಮೇಲೆ ಶೇ 25ರಷ್ಟು ಸುಂಕ ವಿಧಿಸುವ ಬಗ್ಗೆ ಹಾಗೂ ಈ ವಿಚಾರವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿರುವ ಟ್ವೀಟ್‌ಗಳ ಬಗ್ಗೆ ಪ್ರಧಾನಿ ಮೋದಿ ಅವರು ಪ್ರತಿಕ್ರಿಯೆ ನೀಡದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಟ್ರಂಪ್ ಅವರು ಟ್ರುಥ್ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ ಎಂದು ಪ್ರತಿಪಾದಿಸಿ, 'ಟ್ರುಥ್'ನಲ್ಲಿ ಟ್ರಂಪ್ ಮಾಡಿದ್ದಾರೆ ಎನ್ನಲಾದ ಪೋಸ್ಟ್ ಒಂದರ ಚಿತ್ರವನ್ನು 'ಎಕ್ಸ್'ನಲ್ಲಿ ಹಂಚಲಾಗುತ್ತಿದೆ. ಆದರೆ, ಇದು ಸುಳ್ಳು.

ಟ್ರಂಪ್ ಅವರ ಅಧಿಕೃತ 'ಎಕ್ಸ್' ಖಾತೆ ಮತ್ತು 'ಟ್ರುಥ್ ಸೋಷಿಯಲ್' ಜಾಲತಾಣದ ಖಾತೆಯನ್ನು ಪರಿಶೀಲನೆಗೆ ಒಳಪಡಿಸಿದಾಗ, ಈ ಬಗ್ಗೆ ಅವರು ಇತ್ತೀಚೆಗೆ ಮಾಡಿರುವ ಪೋಸ್ಟ್ ಸಿಗಲಿಲ್ಲ. ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ 'WOKEFLIX' ಎಂಬ ವಾಟರ್ ಮಾರ್ಕ್ ಕಂಡು ಬಂತು. ಇದು ನಿಜವಾದ ಪೋಸ್ಟ್‌ನ ಚಿತ್ರವಲ್ಲ, ತಮಾಷೆಗಾಗಿ ಮಾಡಿರಬಹುದಾದ ಗ್ರಾಫಿಕ್ ಎಂಬ ಅನುಮಾನ ವ್ಯಕ್ತವಾಯಿತು. 'ಟ್ರುಥ್'ನಲ್ಲಿ ಪ್ರಕಟವಾಗುವ ಪೋಸ್ಟ್‌ನ ವಿನ್ಯಾಸಕ್ಕೆ ಹೋಲಿಸಿದರೆ, ಈ ಪೋಸ್ಟ್ ಭಿನ್ನವಾಗಿತ್ತು. ಅಲ್ಲದೇ, ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ ಟ್ರಂಪ್ ಅವರು ಮೋದಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸುದ್ದಿ ಎಲ್ಲೂ ಪ್ರಕಟವಾಗಿಲ್ಲ. ಹಾಗಾಗಿ, ಇದೊಂದು ನಕಲಿ ಪೋಸ್ಟ್ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಹೇಳಿದೆ.

ಸಮಾನತೆಯಲ್ಲಿದೆ ಸುಖ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಅರಮನೆಯ ಅಪರಿಮಿತ ಸುಖದಲ್ಲಿ ನರಳುತ್ತಿದ್ದ ಸಿದ್ಧಾರ್ಥ ಹೊರಗೆ ಕಾಲಿಡಲು ತವಕಿಸುತ್ತಿದ್ದ. ಅದೊಂದು ದಿನ ಬಯಲಿಗೆ ಬಂದವನು ಆಕಸ್ಮಿಕವಾಗಿ ಭಿಕ್ಷುಕನನ್ನು ಕಂಡು ತೀವ್ರ ತಳಮಳಕ್ಕೆ ಒಳಗಾದ. ಮನುಷ್ಯನೊಬ್ಬ ಉಣ್ಣುವುದಕ್ಕೆ ಉಡುವುದಕ್ಕೆ ಇನ್ನೊಬ್ಬರತ್ತ ಕೈ ಚಾಚುವುದೇ? ಬೇಡುವ ಮನಸ್ಥಿತಿ ಹೇಗೆ ಬರುತ್ತದೆ? ಯಾಕೆ ಹೀಗೆ? ನಿಸರ್ಗದ ಪಂಚಭೂತಗಳು ಎಲ್ಲ ಜೀವಿಗಳಿಗೆ ತಾನೇ ತಾನಾಗಿ ದೊರೆಯಬೇಕಲ್ಲವೇ? ದುಡಿದು ತಿನ್ನಬೇಕಲ್ಲವೇ? ಅಂತ ಯೋಚಿಸಿದ. ಯೋಚಿಸುತ್ತಾ ಹೋದಂತೆ ಮನುಷ್ಯ ಸಮಾಜದ ತರತಮಗಳು, ದುಡಿಯುವುದಕ್ಕೆ ಇಲ್ಲದ ಅವಕಾಶಗಳು ಕಣ್ಣೆದುರು ಬಂದು ತಾನು ಅನುಭವಿಸುತ್ತಿರುವ ಸಂಪತ್ತು ತಾನು ದುಡಿದದ್ದಲ್ಲ ಅನ್ನಿಸಿ ಅವನಲ್ಲಿ ಅಸಹ್ಯ ಹುಟ್ಟಿಸಿತು.


ಇಲ್ಲಿಂದ ಹೊರಡಬೇಕು ಅಂತ ಅನಿಸಿತು. ಅವನ ಮನಸ್ಸು, ಚಿಂತನೆ ಇನ್ನಷ್ಟು ಮಾಗಬೇಕಿತ್ತೋ ಏನೋ. ತಳಮಳಿಸುತ್ತಾ ಕಾಯುತ್ತಿದ್ದ. ಮನುಷ್ಯ ಹುಟ್ಟುತ್ತಾನೆ, ಸಾಯುತ್ತಾನೆ. ಇದು ನಿಲ್ಲದ ಚಕ್ರ. ಇರುವಷ್ಟು ದಿನ ಎಲ್ಲರೂ ಎಲ್ಲವನ್ನೂ ಹಂಚಿಕೊಂಡು ಬಾಳುವುದು ಸಾಧ್ಯ. ಆದರೆ ಒಂದು ಹೊತ್ತು ತಿನ್ನುವುದಕ್ಕೂ ಬೇಡುವ ಭಿಕ್ಷುಕನಿದ್ದಾನೆ. ನೂರಾರು ವರ್ಷ ಕುಳಿತು ತಿಂದರೂ ಸವೆಯದಷ್ಟು ಸಂಪತ್ತನ್ನು ಸಂಪಾದಿಸಿದವರೂ ಇದ್ದಾರೆ. ಯಾಕೆ ಹೀಗೆ? ಅಂತ ಮೊದಲು ಪ್ರಶ್ನಿಸಿ ಕೊಂಡವನು ಸಿದ್ಧಾರ್ಥ. ಇದನ್ನು ಆಧುನಿಕ ಸಮಾಜ ಆರ್ಥಿಕ ಅಸಮಾನತೆ ಅಂತ ಗುರುತಿಸುತ್ತದೆ. ಸಿದ್ಧಾರ್ಥನಿಗೆ ಇದು ಯಾಕೋ ಸರಿಯಿಲ್ಲ ಅಂತ ಅನಿಸಿತು. ಅವನ ಉದ್ದೇಶ ಸರಳವಾಗಿತ್ತು. ಹುಟ್ಟಿದವರೆಲ್ಲರಿಗೂ ಗಾಳಿ ನೀರು ಅನ್ನ ಸಹಜವಾಗಿ ಸಮಾನವಾಗಿ ದೊರೆಯಬೇಕಿತ್ತು ಅಷ್ಟೇ. ಆದರೆ, ಹಾಗೆ ದೊರೆಯುತ್ತಿಲ್ಲ ಎನ್ನುವುದು ಕ್ರೂರವಾಗಿ ಕಾಡುತ್ತಿತ್ತು. ಸಿದ್ಧಾರ್ಥನ ಒಳಗೆ ಯಾರೋ ತಿದಿ ಒತ್ತಿದಂತೆ ಇದು ಉರಿಯತೊಡಗಿತು. ಆ ಕುಲುಮೆಯಲ್ಲಿ ಬೆಂದು ಬೆಂದು ಅಸಮಾನತೆಯ ಸ್ವರೂಪ ಅಮೂರ್ತವಾಗಿ ಜೀವ ಪಡೆಯುತ್ತಾ ಹೋಯಿತು. ಸಿದ್ಧಾರ್ಥ ಗೌತಮನಾಗುವ, ಗೌತಮ ಬುದ್ಧನಾಗುವ ಪರಿ ಸ್ಪಷ್ಟವಾದಂತೆ ಅರಮನೆಯಿಂದ ಹೊರಬಂದ ಸಿದ್ಧಾರ್ಥ ಬಯಲಿನಲ್ಲಿ, ಬೀದಿಯಲ್ಲಿ ಆಕಾರ ಪಡೆಯುತ್ತಾ ಮುನ್ನಡೆದ.

ಸರಳ ಚಿಂತನೆ ಬಹಳ ಸಲ ಅನೇಕರಿಗೆ ತಲುಪುವುದಿಲ್ಲ, ಅಂದರೆ ಗ್ರಹಿಕೆಗೆ ನಿಲುಕುವುದಿಲ್ಲ. ಮನುಷ್ಯನ ಅರಿವಿಗೆ ಬಂದದ್ದು ಮಾತ್ರ ನೋವುಂಟು ಮಾಡುತ್ತದೆ. ತನಗೆ ಮಾತ್ರ ಯಾಕೆ ಹೀಗೆ? ಅವಮಾನ ಅನ್ನುವುದು ಅರಿವಿಗೆ ಬಂದರೆ ನೋವು. ಇದು ಎಂದೂ ಅವಮಾನಕ್ಕೆ ಒಳಗಾಗದ ಸಿದ್ಧಾರ್ಥನ ಅರಿವಿಗೆ ಬಂದಿತ್ತು. ಅವನು ನರಳುತ್ತಿದ್ದ. ಅರಮನೆಯಲ್ಲಿ, ಸುಖದ ಉತ್ತುಂಗದಲ್ಲಿ, ಅಂತಃಪುರದಲ್ಲಿ ಆತ ಅವಿಶ್ರಾಂತನಾಗಿದ್ದ. ಸಮಾನತೆ ಇಲ್ಲದಿರುವುದು ಒಂದು ಸಮಾಜವೇ? ಅದೊಂದು ಬದುಕೇ? ದೀನನಾಗಿ ಬೇಡುವುದು ದೈವಲಿಖಿತವೇ? ಶಾಪವೇ? ದೇವರೋ ಹಣೆಬರಹವೋ ಇದಕ್ಕೆ ಕಾರಣವಾಗಿದ್ದರೆ ಧಿಕ್ಕಾರವಿರಲಿ. ಅವನ ಮನಸ್ಸು ತಳಮಳಿಸುತ್ತಿತ್ತು.

ಇಂಥದೇ ಕಾರಣಕ್ಕೆ ಅರಮನೆ ತೊರೆದ ಸಿದ್ಧಾರ್ಥ ಭಿಕ್ಷುಕ ಎದುರಾದ ನೆಪದಲ್ಲಿ ಅಸಮಾನತೆಗೆ ಕಾರಣಗಳನ್ನು ಹುಡುಕಲು ಬಯಲಿಗೆ ಕಾಲಿಟ್ಟ. ಅಲ್ಲಿ ಪ್ರತಿ ಹೆಜ್ಜೆಗೆ ನೂರು ಕಾರಣಗಳು ಕಂಡವು. ಸೋಮಾರಿತನ, ದುರಾಸೆ, ದರ್ಪ, ದೌರ್ಜನ್ಯ, ಮೇಲು-ಕೀಳು, ದಾಸ್ಯ ಹೀಗೆ ಮನುಷ್ಯಕುಲ ಪುಡಿ ಪುಡಿಯಾಗಿ ಹೋಗಿತ್ತು. ಇವುಗಳಿಂದ ಹೊರಬರುವ ಪ್ರೀತಿ, ದಯೆ ದಾರಿಗಳನ್ನು ಶೋಧಿಸಿಕೊಳ್ಳದೆ ಮುಕ್ತಿ ಸಾಧ್ಯವಿಲ್ಲ ಅಂತ ಅನ್ನಿಸಿಬಿಟ್ಟಿತು. ಬೀದಿ ಮತ್ತು ಬಯಲು ಸವಾಲುಗಳ ಕುಸ್ತಿ ಮನೆಯಂತೆ ಕಂಡವು. ಗೋಡೆ ಕಿಟಕಿ ಬಾಗಿಲುಗಳೇ ಇಲ್ಲದ ಸರ್ವಸ್ವತಂತ್ರ ಅಖಾಡದಲ್ಲಿ ಬಡತನವೆಂಬ ಮಂತ್ರವಾದಿಯ ಸಹವಾಸ ಆಪ್ತವೆನಿಸಿತು. ಬಯಲಿಗೆ ಬಂದ ಬುದ್ಧ ಬಡವನಾದ. ಬಡತನವನ್ನು ಉಂಡು ಹಾಸಿ ಹೊದ್ದು ಸಾಮಾನ್ಯರಲ್ಲಿ ಕರಗಿದ. ನೂರಾರು ಪೀಳಿಗೆಗೆ ಸಾಕಾಗುವಷ್ಟು ಸಂಪಾದಿಸುವ ಆಧುನಿಕ ರಾಜಕುಮಾರರು ಒಂದು ಕ್ಷಣ ಸಿದ್ಧಾರ್ಥ ಬಯಲಿಗೆ ಬಂದು ಬುದ್ಧನಾದ ಪರಿಯನ್ನು ಅನುಸಂಧಾನಿಸಬೇಕು, ಅನುಭವಿಸಬೇಕು. ಸಮಾನತೆಯಲ್ಲಿ ಸಿಗುವ ಪರಮಸುಖ ಮತ್ತೆಲ್ಲಿ ಸಿಕ್ಕೀತು? ಸಮಾನತೆ ಇಲ್ಲದೆ ಸ್ವಾತಂತ್ರ್ಯಕ್ಕೆ ಸಹೋದರತೆಗೆ ಅರ್ಥವೆಲ್ಲಿಯದು? ಅದೊಂದು ಅನುಭಾವ. ಅರ್ಥಮೀಮಾಂಸೆಯ ಮೂಲ ಚೈತನ್ಯವೆಂದು ಪರಿಭಾವಿಸಲೇಬೇಕಾದ ಬುದ್ಧ ನೈತಿಕವಾಗಿ ನಿತ್ಯ ನಿದರ್ಶನ. ❖

ಪದಬಂಧ 6124

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

3.ತಕ್ಕಡಿಯನ್ನು ಹಿಡಿದಿರುವ ಮಂಕ! (5)
4.ಕೊನೆಗೆ ಬೆಲೆಯಿಟ್ಟರೆ ಸಲುಗೆಯೇ? (3)
5.ಜಿಪುಣ ಇಲ್ಲಿದ್ದಾನೆ (3)
7.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
10.ಕಾರಿರುಳಲಿ ಕೊಳ್ಳಿ ಕಾಣುವುದೇ? (2)
11.ಕೊನೆಗೆ ಲವನಿದ್ದರೆ ಮಸುಕಾದುದು ಕಾಣುತ್ತದೆ (3)
12.ಪಂಕಜಳಿಗೆ ಮೆತ್ತಿರುವ ಕೆಸರು (2)
13.ನಗರದಲ್ಲಿ ಖರೀದಿಸಿರುವ ಆಭರಣ (2)
15.ಸೊಂಟದಿಂದ ಪ್ರಾರಂಭವಾದ ಕಂಪನ (3)
18.ಪರಿಶುದ್ಧತೆಯಿಂದಾದ ನಿರಿಗೆ! (3)
19.ಶ್ರಾದ್ಧದ ಊಟ (5)

ಮೇಲಿಂದ ಕೆಳಕ್ಕೆ

1.ಆತಂಕವನ್ನುಂಟುಮಾಡಿದ ಕೊಲೆಗಾರ (3)
2.ಮಡಿವಂತೆಯ ಆಶ್ರಯವಿದು (3)
3.ಆಶ್ಚರ್ಯ ಅಥವಾ ವಿಸ್ಮಯ (3)
4.ಒಂದೇ ಕಾಲದಲ್ಲಿದ್ದವನು (5)
6.ಕಿವಿಯಿಂದ ಕಿವಿಗೆ ಹರಡುವ ಮಾತು (5)
8.ದುರಸ್ತಿಯನ್ನು ಹೀಗೆ ಹೇಳಿ (3)
9.ವನದ ಕೊನೆಗಿರುವ ಮನೆ (3)
14.ಮನಸ್ಸು ಕೊಡುವುದು (3)
16.ಕಪಿ ಹಿಡಿದಿರುವ ಬೇಲದ ಹಣ್ಣು (3)
17.ಭೋಗವುಳ್ಳ ಆಡಂಬರ (3)

6123ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುರಂಗಮಾರ್ಗ 3.ಕುಲಾವಿ 5.ವ್ಯವಕಲನ 7.ಗರುಡ 8.ಒಣಹರಟೆ 10.ಬಯಕೆ 11.ನವದಂಪತಿ 14.ಪವಾಡ 15.ಸುಲಿಗೆಗಾರ

ಮೇಲಿಂದ ಕೆಳಕ್ಕೆ: 1.ಸುಶ್ರಾವ್ಯ 2.ಗಮಕ 4.ವಿತಂಡ 6.ಲಕ್ಷಣ 7.ಗಲಾಟೆ 8.ಒನಕೆ 9.ರಕ್ತಾವ 10.ಬಳಪ 12.ದಂಡಿಗೆ 13.ತಿಮಿರ

ಸುಡೊಕು 6508

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5			8		1	9		2
	8						3	
3		1	2		9		5	6
	1	7			8	3		
				2				4
8		3	9				6	
1			7		2	4		3
		8		4			1	
	3		1		5		7	

6507 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ಆಗಸ್ಟ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದಶಮಿ ಗಂ. 11-42 **ನಕ್ಷತ್ರ:** ಅನುರಾಧ ಗಂ. 9-13 **ಯೋಗ:** ಬ್ರಹ್ಮ ಗಂ. 7-05 ಕರಣ: ಗರ ಗಂ. 11-42, ಕರ್ಕಾಟಕ ಮಾಸದ 19 ನೇ ದಿನ. **ಮಳೆ ನಕ್ಷತ್ರ :** ಆಶ್ಲೇಷ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 –09-00 **ಸೂರ್ಯೋದಯ :** 06-20 ಸೂರ್ಯಾಸ್ತ : 06-53, **ಮುಸ್ಲಿಂ ದಿನಾಂಕ :** 09 ಸಫರ್ **ಅದೃಷ್ಟ ಸಂಖ್ಯೆ :** 3, 9.

ಮೇಷ: ವ್ಯಾಪಾರ –ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಮುಂದುವರಿಯಲು ಸಹಾಯವಾಗುತ್ತದೆ. ಕೆಲಸ ಮತ್ತು ದುಡಿಮೆ ದೊಡ್ಡ ಪ್ರಮಾಣದಲ್ಲಿ ಇಲ್ಲವಾದರೂ ನೆಮ್ಮದಿಗೆ ಕೊರತೆ ಇಲ್ಲ. ಪರಿಸ್ಥಿತಿ ಸುಧಾರಿಸಲಿದೆ.

ವೃಷಭ: ಕೈಗೊಂಡ ಕಾರ್ಯ ಸಫಲವಾಗಲಿದೆ. ಆರೋಗ್ಯವು ಪಥ್ಯ ಮಾಡುವುದರಿಂದ ಸುಧಾರಣೆಗೆ ಬರುತ್ತದೆ. ಪರಿಚಯಸ್ಥರಿಂದ, ಸ್ನೇಹಿತರಿಂದ ಪಡೆದ ಸಾಲವನ್ನು ಮರುಪಾವತಿ ಮಾಡುವುದರಿಂದ ಗೌರವ ಸಿಗುತ್ತದೆ.

ಮಿಥುನ: ಕಷ್ಟ–ಸುಖಗಳಿಗೆ ನೆರವಾಗುವ ಮನೋಭಾವವನ್ನು ಬೆಳೆಸಿಕೊಳ್ಳಿ. ವೈದ್ಯರಿಗೆ ವೃತ್ತಿಯಲ್ಲಿ ಸಮಯ ಕಳೆಯಬೇಕಾದ ಅನಿವಾರ್ಯತೆ ಎದುರಾಗುವುದು. ವಿಘ್ನಗಳಿಗೆ ಹೆದರಬೇಡಿ.

ಕರ್ಕಾಟಕ: ವೈಯಕ್ತಿಕ ಕೆಲಸಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಟವು ಹೆಚ್ಚಾಗುವುದು . ಖರ್ಚಿಗೆ ಕಾರಣವಾದೀತು. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ.

ಸಿಂಹ: ದಾಯಾದಿಗಳು ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬಂದಾರು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅವಕಾಶಗಳು ಒದಗಿ ಬರುತ್ತವೆ. ನೌಕರರಿಗೆ ಆರ್ಥಿಕವಾಗಿ ಅನುಕೂಲ.

ಕನ್ಯಾ: ಅಲಸ್ಯತನ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಉತ್ಸಾಹಭರಿತರಾಗಿರಿ. ಅಗಾಧ ಜ್ಞಾನ ಶಕ್ತಿ ಹೊರಹೊಮ್ಮಿ ಬರಲು ಸೂಕ್ತ ಕಾಲ. ವಾದ–ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ತುಲಾ: ಬಂಧು–ಮಿತ್ರರ ಸಲಹೆಗಳಿಗೆ ಗಮನ ನೀಡಿ, ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲಿದ್ದೀರಿ. ಒತ್ತಡಕ್ಕೆ ಸಿಲುಕದೆ ಕಾರ್ಯನಿರ್ವಹಿಸುವ ಎಲ್ಲರಿಂದಲೂ ಗುರುತಿಸಲಾಗುತ್ತದೆ.

ವೃಶ್ಚಿಕ: ಪುತ್ರನಿಗೆ ಬಹುದಿನಗಳಿಂದ ನಿರೀಕ್ಷಿಸಿದ ಉದ್ಯೋಗ ಸಿಗುವುದರಿಂದ ಮನೆಯಲ್ಲಿ ಸಂಭ್ರಮದ ವಾತಾವರಣ. ನೂತನ ಶಿಶುವಿನ ಜನನ ಕುಟುಂಬದ ಸಂತೋಷಕ್ಕೆ ಕಾರಣವಾಗುತ್ತದೆ.

ಧನು: ಸುತ್ತಮುತ್ತಲಿನವರ ಬಗ್ಗೆ ಮೌನದಿಂದಿರುವುದು ಒಳಿತು. ನೆಚ್ಚಿನ ಬರವಣಿಗೆ ಹವ್ಯಾಸ ಪುನಃ ಆರಂಭಗೊಳ್ಳುವುದು. ಚಿಂತೆಯು ಆರೋಗ್ಯವನ್ನು ಹಾಳು ಮಾಡುತ್ತದೆ. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ.

ಮಕರ: ಕೋಪದ ಮತ್ತು ದಡ್ಡತನದ ತೀರ್ಮಾನದಿಂದ ಪಶ್ಚಾತ್ತಾಪ ಪಡುವಂಥ ಘಟನೆ ನಡೆಯುವುದು. ಪರಿಸ್ಥಿತಿ ಹಾಗೂ ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆ ಪ್ರಾಪ್ತಿ.

ಕುಂಭ: ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ. ಇತರರನ್ನು ನಂಬದಿರುವ ಪರಿಸ್ಥಿತಿ ಬರಬಹುದು. ನೆಮ್ಮದಿ ಹೆಚ್ಚಾಗುತ್ತದೆ.

ಮೀನ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ವಿದ್ಯಾರ್ಥಿಗಳು ಉನ್ನತ ಶಿಕ್ಷಣದಲ್ಲಿ ಉತ್ತಮವಾದ ಯಶಸ್ಸನ್ನು ಕಾಣುವರು. ಸಂಕಲ್ಪಿತ ಕಾರ್ಯಸಿದ್ಧಿಗೆ ಗಣೇಶನನ್ನು ಪೂಜಿಸಿ.

ಗುಂಡಣ್ಣ



ರೆಪೊ ದರ ಕಡಿತ ಸಾಧ್ಯತೆ

ಇಂದಿನಿಂದ ಎಂಪಿಸಿ ಸಭೆ ಆರಂಭ, ಬುಧವಾರ ನಿರ್ಧಾರ

● ಗ್ಯಾನೇಂದ್ರ ಕೇಶ್ರಿ

ನವದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ ಸಭೆಯು ಸೋಮವಾರದಿಂದ ಶುರುವಾಗಲಿದ್ದು, ರೆಪೊ ದರವನ್ನು ತಗ್ಗಿಸುವ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ಮಿತಿಯಲ್ಲಿ ಇದೆ. ಆದರೆ ಅಮೆರಿಕವು ಹೇರಿರುವ ಸುಂಕವು ದೇಶದ ಆರ್ಥಿಕ ಬೆಳವಣಿಗೆ ಪ್ರಮಾಣವನ್ನು ತಗ್ಗಿಸುವ ಸಾಧ್ಯತೆ ಇದೆ. ಹೀಗಾಗಿ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದ ರೆಪೊ ದರವನ್ನು ತಗ್ಗಿಸಬಹುದು ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಎಸ್‌ಬಿಐ ರಿಸರ್ಚ್ ತನ್ನ ವರದಿಯೊಂದರಲ್ಲಿ 'ಆರ್‌ಬಿಐ ರೆಪೊ ದರವನ್ನು ಆಗಸ್ಟ್‌ನಲ್ಲಿ ಶೇ 0.25ರಷ್ಟು ಕಡಿತ ಮಾಡಬಹುದು ಎಂಬುದು ನಮ್ಮ ನಿರೀಕ್ಷೆ' ಎಂದು ಹೇಳಿದೆ. ರೆಪೊ ದರ ಕುರಿತ ನಿರ್ಧಾರವನ್ನು ಆರ್‌ಬಿಐ ಬುಧವಾರ ಪ್ರಕಟಿಸಲಿದೆ.

ಜಿಡಿಪಿ ಹಾಗೂ ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ರೆಪೊ ದರ ಇಳಿಕೆಗೆ ಪೂರಕವಾಗಿ ಒದಗಿಬಂದಿವೆ ಎಂದು ಎಸ್‌ಬಿಎಂ ಬ್ಯಾಂಕ್ ಇಂಡಿಯಾದ ಹಣಕಾಸು ಮಾರುಕಟ್ಟೆಗಳ ಮುಖ್ಯಸ್ಥ ಮಂದಾರ್ ಪಿತಾಲೆ ಹೇಳಿದ್ದಾರೆ.

'ಹಣದುಬ್ಬರವು ಕಡಿಮೆ ಇದೆ. ಜಿಡಿಪಿ ಬೆಳವಣಿಗೆ ಕುಗ್ಗಬಹುದು ಎಂಬ ಅಂದಾಜು ಇದೆ. ಹೀಗಾಗಿ ರೆಪೊ ದರವನ್ನು ಶೇ 0.25ರಷ್ಟು ಇಳಿಕೆ ಮಾಡಲು ಇದು ಸೂಕ್ತ ಸಮಯ' ಎಂದು ಅವರು ಹೇಳಿದ್ದಾರೆ.

ಅಮೆರಿಕವು ಭಾರತದ ಸರಕುಗಳ ಮೇಲೆ ಶೇ 25ರಷ್ಟು ಸುಂಕ ಹೇರಿರುವು ದರ ಪರಿಣಾಮವಾಗಿ ಜಿಡಿಪಿ ಬೆಳವಣಿಗೆ ದರವು ಶೇ 0.30ವರೆಗೆ ಇಳಿಕೆ ಆಗಬಹುದು ಎಂಬ ಅಂದಾಜು ಇದೆ. ರೆಪೊ ದರ ಕುರಿತ ತೀರ್ಮಾನವು ಮುಂದಿನ ಕೆಲವು ದಿನಗಳವರೆಗೆ ಷೇರುಪೇಟೆಯ ವಹಿವಾಟಿನ ಮೇಲೆಯೂ ಪ್ರಭಾವ ಬೀರುವ ನಿರೀಕ್ಷೆ ಇದೆ.

ಎಕ್ಸಿಸ್ ಎಂ.ಎಫ್.ನ ಮಾಜಿ ಅಧಿಕಾರಿ ಜೋಷಿ ಬಂಧನ

ನವದೆಹಲಿ (ಪಿಟಿಐ): ಹೂಡಿಕೆದಾರರಿಗೆ ₹2 ಲಕ್ಷ ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಕ್ಸಿಸ್ ಮ್ಯೂಚುವಲ್ ಫಂಡ್‌ನ ಮಾಜಿ ನಿಧಿ ನಿರ್ವಾಹಕ ವೀರೇಶ್ ಜೋಷಿ ಅವರನ್ನು ಇ.ಡಿ ಬಂಧಿಸಿದೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯವೊಂದು ಜೋಷಿ ಅವರನ್ನು ಆಗಸ್ಟ್ 8ರವರೆಗೆ ಇ.ಡಿ ವಶಕ್ಕೆ ಒಪ್ಪಿಸಿದೆ.

ಕೆಲವು ಮಾಹಿತಿಗಳನ್ನು ಮೊದಲೇ ಪಡೆದುಕೊಳ್ಳುವ ಬ್ರೋಕರ್‌ಗಳು ಅಥವಾ ವರ್ತಕರು ತಮ್ಮ ಲಾಭಕ್ಕಾಗಿ ಷೇರುಗಳ ವಹಿವಾಟು ನಡೆಸುವುದನ್ನು 'ಫ್ರಂಟ್ ರನ್ನಿಂಗ್' ಎಂದು ಕರೆಯಲಾಗುತ್ತದೆ. ಈ ಬಗೆಯ ವಹಿವಾಟನ್ನು ಅನೈತಿಕ, ಅಕ್ರಮ ಎಂದು ಗುರುತಿಸಲಾಗಿದೆ. 'ಫ್ರಂಟ್ ರನ್ನಿಂಗ್' ಚಟುವಟಿಕೆಗಳಲ್ಲಿ ತೊಡಗಿಕೊಂಡು ಹೂಡಿಕೆದಾರರಿಗೆ ₹2 ಲಕ್ಷ ಕೋಟಿವರೆಗೆ ವಂಚಿಸಿದ್ದಕ್ಕೆ ಸಂಬಂಧಿಸಿದ ಪ್ರಕರಣ ಇದು.

ಈ ಪ್ರಕರಣದಲ್ಲಿ ಆದಾಯ ತೆರಿಗೆ ಇಲಾಖೆಯು 2022ರಲ್ಲಿ ಶೋಧ ಕಾರ್ಯ ಕೈಗೊಂಡಿತ್ತು.

ನಿಮ್ಮ ಎಂ.ಎಫ್ ನಿರ್ವಹಣೆ ಸರಿ ಇದೆಯೇ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ನೀವು ಮ್ಯೂಚುವಲ್ ಫಂಡ್‌ನಲ್ಲಿ (ಎಂ.ಎಫ್) ಹೂಡಿಕೆ ಮಾಡಿದಾಗ ನಿಮ್ಮ ಹಣ ವೃತ್ತಿಪರ ನಿಧಿ ನಿರ್ವಾಹಕರ ಕೈಸೇರುತ್ತದೆ. ನಿಮ್ಮ ದುಡ್ಡನ್ನು ಯಾವ ಷೇರಿನ ಮೇಲೆ ತೊಡಗಿಸಬೇಕು, ಯಾವುದರಿಂದ ಹಿಂಪಡೆದುಕೊಳ್ಳಬೇಕು ಎಂಬಿತ್ಯಾದಿ ತೀರ್ಮಾನಗಳನ್ನು ಅವರು ಮಾಡುತ್ತಾರೆ. ಆದರೆ ಅವರ ನಿರ್ಧಾರಗಳು ಸರಿ ಇರುತ್ತವೆಯೇ?

ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸಿದ ದುಡ್ಡು ಬೆಳೆಸಲು ನಿಧಿ ನಿರ್ವಾಹಕರು ಪ್ರಾಮಾಣಿಕವಾಗಿ ಪ್ರಯತ್ನಿಸುವರೇ? ಇಂತಹ ಅನೇಕ ಪ್ರಶ್ನೆಗಳು ಪ್ರತಿ ಹೂಡಿಕೆದಾರನನ್ನೂ ಕಾಡುತ್ತವೆ. ಇದಕ್ಕೆ ಉತ್ತರ ನೀಡುತ್ತದೆ ಮ್ಯೂಚುವಲ್ ಫಂಡ್ ವಹಿವಾಟು ಅನುಪಾತ (ಮ್ಯೂಚುವಲ್ ಫಂಡ್ ಟರ್ನೋವರ್ ರೇಷಿಯೋ). ಹೌದು ಈ ಅನುಪಾತವು, ನಿಧಿ ನಿರ್ವಾಹಕರು ಹೂಡಿಕೆದಾರರ ದುಡ್ಡನ್ನು ಎಷ್ಟು ದಕ್ಷವಾಗಿ ದುಡಿಸುತ್ತಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಈ ಪರಿಕಲ್ಪನೆ ಅರ್ಥ ಮಾಡಿಕೊಂಡರೆ ಮ್ಯೂಚುವಲ್ ಫಂಡ್ ಆಯ್ಕೆ ಮಾಡುವಾಗ ಜಾಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಟರ್ನೋವರ್ ರೇಷಿಯೋ ಎಂದರೇನು? ಅದು ಹೂಡಿಕೆದಾರನಿಗೆ ಏಕೆ ಮುಖ್ಯವಾಗುತ್ತದೆ? ವಿವಿಧ ಮ್ಯೂಚುವಲ್ ಫಂಡ್‌ಗಳ ಟರ್ನೋವರ್ ರೇಷಿಯೋ ಏಕೆ ಭಿನ್ನವಾಗಿರುತ್ತದೆ? ಇಂತಹ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ.

ಎಂ.ಎಫ್ ಟರ್ನೋವರ್ ರೇಷಿಯೋ ಅಂದರೆ?: ಮ್ಯೂಚುವಲ್ ಫಂಡ್‌ಗಳನ್ನು ನಿರ್ವಹಿಸುವ ನಿರ್ವಾಹಕ, ಒಂದು ವರ್ಷದ ಅವಧಿಯಲ್ಲಿ ಎಷ್ಟು ಸಲ ಷೇರುಗಳು, ಬಾಂಡ್‌ಗಳ ಖರೀದಿ ಮತ್ತು ಮಾರಾಟ ಮಾಡುತ್ತಾರೆ ಎಂಬುದನ್ನು ಈ ಅನುಪಾತವು ತಿಳಿಸುತ್ತದೆ. ಟರ್ನೋವರ್ ರೇಷಿಯೋ ಶೇಕಡವಾರು ಲೆಕ್ಕಾಚಾರದಲ್ಲಿ ಇದ್ದು, ನಿರ್ದಿಷ್ಟ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ ಎಂಬ ಮಾಹಿತಿ ಇದರಿಂದ ಸಿಗುತ್ತದೆ. ಒಂದು ಮ್ಯೂಚುವಲ್ ಫಂಡ್ ಅನ್ನು ಎಷ್ಟು ದಕ್ಷತೆಯಿಂದ ನಿರ್ವಹಿಸಲಾಗುತ್ತಿದೆ ಎನ್ನುವುದು ಈ ಅನುಪಾತದಿಂದ ಗೊತ್ತಾಗುತ್ತದೆ.

ಏಕೆ ಟರ್ನೋವರ್ ರೇಷಿಯೋ ಮುಖ್ಯ?

ವಹಿವಾಟು ವೆಚ್ಚ (ಟ್ರೇಡಿಂಗ್ ಕಾಸ್ಟ್): ನಿಧಿ ನಿರ್ವಾಹಕ ನಿರ್ದಿಷ್ಟ ಮ್ಯೂಚುವಲ್ ಫಂಡ್‌ನಲ್ಲಿ ಅತಿ ಹೆಚ್ಚು ಬಾರಿ ಷೇರುಗಳ ಖರೀದಿ ಮತ್ತು ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ ಅಂದರೆ ಫಂಡ್ ನಿರ್ವಹಣೆ ವೆಚ್ಚ, ಬ್ರೋಕರೇಜ್ ಶುಲ್ಕ ಹೆಚ್ಚಾಗುತ್ತದೆ. ಪರೋಕ್ಷವಾಗಿ ಇದು ನಿಮ್ಮ ಹೂಡಿಕೆ ಮೇಲಿನ ಒಟ್ಟಾರೆ ಗಳಿಕೆಯ ಮೇಲೆ ಪರಿಣಾಮ ಬೀರುತ್ತದೆ.

ತೆರಿಗೆ ಭಾರ: ನಿರ್ದಿಷ್ಟ ಮ್ಯೂಚುವಲ್ ಫಂಡ್‌ನ ನಿಧಿ ನಿರ್ವಾಹಕ ಷೇರುಗಳು ಲಾಭದಲ್ಲಿದ್ದಾಗ ಅದನ್ನು ಮಾರಾಟ ಮಾಡಿದರೆ ಬಂಡವಾಳ ಗಳಿಕೆ ತೆರಿಗೆ (ಕ್ಯಾಪಿಟಲ್ ಗೇನ್ಸ್ ಟ್ಯಾಕ್ಸ್) ಅನ್ವಯಿಸುತ್ತದೆ. ಪದೇ ಪದೇ ಷೇರು ಖರೀದಿ ಮತ್ತು ಮಾರಾಟ ಮಾಡುವುದರಿಂದ ತೆರಿಗೆ ಹೊರೆ ಹೆಚ್ಚಾಗಿ ನಿಮ್ಮ ಗಳಿಕೆಯ ಮೇಲೆ ಅದು ಪರಿಣಾಮ ಬೀರುತ್ತದೆ.

ನಿಧಿ ನಿರ್ವಾಹಕನ ಹೂಡಿಕೆ ಮಾದರಿ: ಟರ್ನೋವರ್ ರೇಷಿಯೋ ಕಡಿಮೆ ಇದ್ದಾಗ ನಿಧಿ ನಿರ್ವಾಹಕ ಉತ್ತಮ ಷೇರುಗಳನ್ನು ಖರೀದಿಸಿ ದೀರ್ಘಾವಧಿಯಲ್ಲಿ ಅವುಗಳಿಂದ ಲಾಭಗಳಿಸುವ ಉದ್ದೇಶ ಹೊಂದಿದ್ದಾರೆ ಎಂದು ಅಂದಾಜಿಸಬೇಕಾಗುತ್ತದೆ. ಅದೇ ರೀತಿ ಟರ್ನೋವರ್ ರೇಷಿಯೋ ಜಾಸ್ತಿ ಇದ್ದಾಗ ನಿಧಿ ನಿರ್ವಾಹಕ ಪದೇ ಪದೇ ಷೇರುಗಳ ಆಯ್ಕೆ ಬದಲಿಸುತ್ತಿದ್ದು ಹೆಚ್ಚೆಚ್ಚು ಲಾಭವನ್ನು ವೇಗವಾಗಿ ಗಳಿಸುವ ಇರಾದೆಯಲ್ಲಿದ್ದಾರೆ ಎಂದು ಲೆಕ್ಕಾಚಾರ ಮಾಡಬೇಕಾಗುತ್ತದೆ. (ಪಟ್ಟಿ ಗಮನಿಸಿ)

ಟರ್ನೋವರ್ ರೇಷಿಯೋ ಲೆಕ್ಕಾಚಾರ ಮಾಡುವುದು ಹೇಗೆ? ಯಾವುದು ಹೆಚ್ಚು, ಯಾವುದು ಕಡಿಮೆ?


ಟರ್ನೋವರ್ ರೇಷಿಯೋ	ಏನು ಸೂಚಿಸುತ್ತದೆ	ಪರಿಣಾಮ
ಶೇ 30ರ ಒಳಗೆ	ಷೇರುಗಳನ್ನು ಖರೀದಿಸಿ ದೀರ್ಘಾವಧಿಯಲ್ಲಿ ಲಾಭ ಗಳಿಸುವ ಉದ್ದೇಶ. ಪದೇ ಪದೇ ಷೇರುಗಳ ಖರೀದಿ ಮಾರಾಟ ಇರುವುದಿಲ್ಲ	ಕಡಿಮೆ ನಿರ್ವಹಣಾ ವೆಚ್ಚ, ಕಡಿಮೆ ತೆರಿಗೆ, ಹೆಚ್ಚು ಸ್ಥಿರತೆ.
ಶೇ 30ರಿಂದ ಶೇ 70ರ ಒಳಗೆ	ಮಧ್ಯಮ ಪ್ರಮಾಣದಲ್ಲಿ ಷೇರುಗಳ ವಹಿವಾಟು	ಮಧ್ಯಮ ಪ್ರಮಾಣದ ವೆಚ್ಚ, ನಿಧಿ ನಿರ್ವಾಹಕ ಕೊಂಚ ಹೆಚ್ಚು ಕಾರ್ಯೋನ್ಮುಖರಾಗಿದ್ದಾರೆ ಎಂದು ಅರ್ಥ
ಶೇ 70ಕ್ಕಿಂತ ಹೆಚ್ಚು	ಪದೇ ಪದೇ ಷೇರುಗಳ ಖರೀದಿ ಮತ್ತು ಮಾರಾಟದ ತಂತ್ರಗಾರಿಕೆ	ಹೆಚ್ಚು ವೆಚ್ಚ, ಹೆಚ್ಚು ತೆರಿಗೆ, ಹೆಚ್ಚು ರಿಸ್ಕ್ ಸಾಧ್ಯತೆ

ಟರ್ನೋವರ್ ರೇಷಿಯೋ ಮಾತ್ರ ಆಧರಿಸಿ ಹೂಡಿಕೆ ತೀರ್ಮಾನ ಬೇಡ

ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಟರ್ನೋವರ್ ರೇಷಿಯೋ ಜೊತೆಗೆ ಮ್ಯೂಚುವಲ್ ಫಂಡ್‌ನ ಗಳಿಕೆ ಸಾಮರ್ಥ್ಯ, ರಿಸ್ಕ್, ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೋ), ಫಂಡ್ ಮ್ಯಾನೇಜರ್‌ನ ಈ ಹಿಂದಿನ ಕಾರ್ಯಕ್ಷಮತೆ ಬಗ್ಗೆ ಗಮನಕೊಟ್ಟು ಮುಂದುವರಿಯಿರಿ. ಆದರೆ ಹೆಚ್ಚು ನಿರ್ವಹಣಾ ವೆಚ್ಚ, ತೆರಿಗೆ ಭಾರದ ಬಗ್ಗೆ ಗಮನವಿರಲಿ. ನೆನಪಿಡಿ, ಮ್ಯೂಚುವಲ್ ಫಂಡ್ ಹೂಡಿಕೆ ಮಾಡುವಾಗ ಟರ್ನೋವರ್ ರೇಷಿಯೋ ಮಾತ್ರವೇ ನಿಮ್ಮ ಮಾನದಂಡವಾಗದಿರಲಿ, ಬೇರೆ ಅನುಪಾತಗಳೊಂದಿಗೆ ಅದನ್ನು ತುಲನೆ ಮಾಡಿ ಅಂತಿಮ ನಿರ್ಧಾರ ತೆಗೆದುಕೊಳ್ಳಿ.

ಷೇರುಪೇಟೆ ಸೂಚ್ಯಂಕಗಳ ಅನುಕರಣೆ ಮಾಡಿ ಹೂಡಿಕೆ ಮಾಡುವ ಇಂಡೆಕ್ಸ್ ಫಂಡ್‌ಗಳಲ್ಲಿ (ಪ್ಯಾಸಿವ್ ಫಂಡ್‌ಗಳು) ಷೇರುಗಳನ್ನು ಖರೀದಿಸಿ ದೀರ್ಘಾವಧಿಯಲ್ಲಿ ಲಾಭ ಗಳಿಸುವ ಉದ್ದೇಶವಿರುವುದರಿಂದ ಇಲ್ಲಿ ಟರ್ನೋವರ್ ರೇಷಿಯೋ ಕಡಿಮೆ ಇರುತ್ತದೆ. ಆದರೆ ನಿಧಿ ನಿರ್ವಾಹಕರು ನಿರ್ವಹಣೆ ಮಾಡುವ ಆ್ಯಕ್ಟಿವ್ ಮ್ಯೂಚುವಲ್ ಫಂಡ್‌ಗಳ ಉದ್ದೇಶ ಷೇರು ಮಾರುಕಟ್ಟೆ ಸೂಚ್ಯಂಕಗಳಿಗಿಂತ ಹೆಚ್ಚು ಲಾಭ ಮಾಡಬೇಕು ಎನ್ನುವುದಾಗಿರುವುದರಿಂದ ಇಲ್ಲಿ ಟರ್ನೋವರ್ ರೇಷಿಯೋ ಹೆಚ್ಚಿರುತ್ತದೆ. ಇದಲ್ಲದೆ ಮಾರುಕಟ್ಟೆ ಸ್ಥಿತಿಗತಿ, ಉತ್ತಮ ಷೇರುಗಳ ಮೇಲೆ ದಿಢೀರ್ ಹೂಡಿಕೆ ಅವಕಾಶಗಳು, ರಿಸ್ಕ್ ನಿರ್ವಹಣೆ ಕಾರಣಕ್ಕೆ ಮ್ಯೂಚುವಲ್ ಫಂಡ್ ವಹಿವಾಟು ಜಾಸ್ತಿಯಾದರೆ ಅದು ಕೂಡ ಟರ್ನೋವರ್ ರೇಷಿಯೋ ಮೇಲೆ ಪರಿಣಾಮ ಬೀರುತ್ತದೆ.

ಹೆಚ್ಚು ಟರ್ನೋವರ್ ರೇಷಿಯೋ ಬಗ್ಗೆ ಚಿಂತಿಸಬೇಕೇ?: ಟರ್ನೋವರ್ ಜಾಸ್ತಿ ಇದ್ದರೆ ಎಲ್ಲಾ ಸಂದರ್ಭಗಳಲ್ಲೂ ಅದರ ಬಗ್ಗೆ ಚಿಂತೆ ಮಾಡುವ ಅಗತ್ಯವಿರುವುದಿಲ್ಲ. ಆದರೆ ಅದೇ ಬಗೆಯ ಮ್ಯೂಚುವಲ್ ಫಂಡ್‌ಗಿಂತ, ನೀವು ಹೂಡಿಕೆ ಮಾಡಿರುವ ಮ್ಯೂಚುವಲ್ ಫಂಡ್‌ನ ಟರ್ನೋವರ್ ರೇಷಿಯೋ ಜಾಸ್ತಿ ಇದ್ದು, ಗಳಿಕೆಯೂ ಕಡಿಮೆ ಇದ್ದರೆ ಅದರ ಬಗ್ಗೆ ಗಮನ ನೀಡಬೇಕಾಗುತ್ತದೆ. ನಿಮ್ಮ ನಿಧಿ ನಿರ್ವಾಹಕ ಹೆಚ್ಚು ಬಾರಿ ಷೇರುಗಳ ಖರೀದಿ ಮತ್ತು ಮಾರಾಟ ಮಾಡಿದರೂ ಹೆಚ್ಚು ಲಾಭ ತಂದುಕೊಡಲು ವಿಫಲರಾದರೆ ಟರ್ನೋವರ್ ರೇಷಿಯೋ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗುತ್ತದೆ. ❖



ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹426-612
ದ್ವಿತಳಿ (ಬಿ.ವಿ) ₹422-702

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹485	100 ಕ್ಕೆ	₹495
12 ಕ್ಕೆ	₹66		

ತೈಲ ಉತ್ಪಾದನೆ ಹೆಚ್ಚಳಕ್ಕೆ ಒಪೆಕ್+ ನಿರ್ಧಾರ

ಲಂಡನ್/ವಿಯೆನ್ನಾ (ರಾಯಿಟರ್ಸ್/ಎಎಫ್‌ಪಿ): ಕಚ್ಚಾ ತೈಲ ಉತ್ಪಾದನೆಯನ್ನು ಪ್ರತಿನಿತ್ಯ 5.47 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಿಸಲು ಒಪೆಕ್ + ಒಕ್ಕೂಟದ ಎಂಟು ರಾಷ್ಟ್ರಗಳು ಭಾನುವಾರ ನಡೆದ ಸಭೆಯಲ್ಲಿ ನಿರ್ಧರಿಸಿವೆ. ಸೆಪ್ಟೆಂಬರ್‌ನಲ್ಲಿ ಈ ಹೆಚ್ಚಳ ಆಗಲಿದೆ.

ಒಪೆಕ್ + ಒಕ್ಕೂಟದ ಸದಸ್ಯ ರಾಷ್ಟ್ರಗಳಾದ ಸೌದಿ ಅರೇಬಿಯಾ, ರಷ್ಯಾ, ಇರಾಕ್, ಯುಎಇ, ಕುವೈತ್, ಕಜಕಸ್ತಾನ್, ಅಲ್ಜೀರಿಯಾ ಮತ್ತು ಒಮಾನ್ ಉತ್ಪಾದನೆ ಹೆಚ್ಚು ಮಾಡಲು ತೀರ್ಮಾನಿಸಿವೆ. ಈ ರಾಷ್ಟ್ರಗಳು ಈಗ ಪ್ರತಿದಿನ 4.1 ಕೋಟಿಯಿಂದ 4.2 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾತೈಲ ಉತ್ಪಾದನೆ ಮಾಡುತ್ತಿವೆ. ಉತ್ಪಾದನೆಯನ್ನು ಶೇ 1.5ರಷ್ಟು ಹೆಚ್ಚಳ ಮಾಡುವುದಾಗಿ ತಿಳಿಸಿವೆ.

ಈ ರಾಷ್ಟ್ರಗಳು ಜಗತ್ತಿನ ಒಟ್ಟು ತೈಲ ಉತ್ಪಾದನೆಯಲ್ಲಿ ಶೇ 50ರಷ್ಟು ಪಾಲು ಹೊಂದಿವೆ. ಮಾರುಕಟ್ಟೆಯಲ್ಲಿ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುವ ಗುರಿಯೊಂದಿಗೆ ಉತ್ಪಾದನೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿವೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಈಗ ಬ್ಯಾರೆಲ್‌ಗೆ 70 ಡಾಲರ್‌ನಷ್ಟು ಇದೆ. ಉತ್ಪಾದನೆ ಹೆಚ್ಚಳವು ದರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸಹಕಾರ ಸಂಘಗಳಿಂದ ಟ್ಯಾಕ್ಸಿ ಸೇವೆ

'ಭಾರತ್' ಬ್ರ್ಯಾಂಡ್ ಅಡಿಯಲ್ಲಿ ಸೇವೆ ನೀಡಲು ಒಗ್ಗೂಡಿದ ಸಂಘಗಳು

ನವದೆಹಲಿ (ಪಿಟಿಐ): ಆ್ಯಪ್ ಆಧಾರಿತ ಸಾರಿಗೆ ಸೇವಾ ಕಂಪನಿಗಳಾದ ಓಲಾ ಮತ್ತು ಉಬರ್‌ಗೆ ಸ್ಪರ್ಧೆ ನೀಡಲು ದೇಶದ ಸಹಕಾರ ರಂಗ ಸಜ್ಜಾಗಿದೆ. 'ಭಾರತ್' ಹೆಸರಿನ ಬ್ರ್ಯಾಂಡ್ ಅಡಿಯಲ್ಲಿ ಈ ವರ್ಷದ ಅಂತ್ಯದೊಳಗೆ ದೇಶದಲ್ಲಿ ಟ್ಯಾಕ್ಸಿ ಸೇವೆ ನೀಡಲು ಕೆಲವು ಸಹಕಾರ ಸಂಘಗಳು ಒಗ್ಗೂಡಿವೆ.

ಈ ಪ್ರಯತ್ನಕ್ಕೆ ₹300 ಕೋಟಿಯ ಅಧಿಕೃತ ಬಂಡವಾಳ ಇದೆ, ನಾಲ್ಕು ರಾಜ್ಯಗಳಲ್ಲಿ 200 ಚಾಲಕರು ಹೆಸರು ನೋಂದಾಯಿಸಿದ್ದಾರೆ. ಬಹುರಾಜ್ಯ ಟ್ಯಾಕ್ಸಿ ಸಹಕಾರ ಸಂಘವನ್ನು ಜೂನ್ 6ರಂದು ನೋಂದಾಯಿಸಲಾಗಿದೆ.

ಟ್ಯಾಕ್ಸಿ ಸಹಕಾರ ಸಂಘವು ದೇಶದ ಎಂಟು ಪ್ರಮುಖ ಸಹಕಾರ ಸಂಘಗಳನ್ನು ಪ್ರತಿನಿಧಿಸುತ್ತದೆ. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ), ಇಫ್ಕೊ, ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟ, ಕೃಷಕ್ ಭಾರತಿ ಸಹಕಾರ ನಿಯಮಿತ, ನಬಾರ್ಡ್, ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಸಹಕಾರ ರಫ್ತು ನಿಯಮಿತ ಈ ಎಂಟು ಸಹಕಾರ ಸಂಘಗಳ ಸಾಲಿಗೆ ಸೇರಿವೆ.

ಮುಖ್ಯಾಂಶಗಳು

- ಓಲಾ ಮತ್ತು ಉಬರ್‌ಗೆ ಸ್ಪರ್ಧೆ ನೀಡಲು ದೇಶದ ಸಹಕಾರ ರಂಗ ಸಜ್ಜು
- ಈಗಾಗಲೇ ನಾಲ್ಕು ರಾಜ್ಯಗಳಲ್ಲಿ 200 ಚಾಲಕರು ನೋಂದಣಿ
- ಪ್ರಚಾರ ತಂತ್ರ ಸಿದ್ಧ ಪಡಿಸಲು ಐಐಎಂ–ಬಿ ಜೊತೆ ಒಪ್ಪಂದ



ದೇಶದಲ್ಲಿ ಈ ವರ್ಷಾಂತ್ಯದ ವೇಳೆಗೆ ಸಹಕಾರ ಮಾದರಿಯಲ್ಲಿ ಟ್ಯಾಕ್ಸಿ ಸೇವೆ ಆರಂಭಿಸಲಾಗುತ್ತದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಈಚೆಗೆ ಹೇಳಿದ್ದರು. 'ಚಾಲಕರಿಗೆ ಉತ್ತಮ ಪ್ರತಿಫಲ ಸಿಗಬೇಕು, ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಹಾಗೂ ಸುರಕ್ಷಿತವಾದ ಸೇವೆಯು ಕೈಗೆಟಕುವ ದರದಲ್ಲಿ ಸಿಗಬೇಕು ಎಂಬುದು ನಮ್ಮ ಪ್ರಮುಖ ಉದ್ದೇಶ' ಎಂದು ಎನ್‌ಸಿಡಿಸಿ ಉಪ ವ್ಯವಸ್ಥಾಪಕ ನಿರ್ದೇಶಕ ರೋಹಿತ್ ಗುಪ್ತ ಹೇಳಿದ್ದಾರೆ.

ಟ್ಯಾಕ್ಸಿ ಸಹಕಾರ ಸಂಘದಲ್ಲಿ ಸರ್ಕಾರದ ಪಾಲು ಇಲ್ಲ. ಇದಕ್ಕೆ ಅಗತ್ಯವಿರುವ ಹಣಕಾಸಿನ ನೆರವನ್ನು ಸಹಕಾರ ಸಂಘಗಳಿಂದ ಪಡೆಯಲಾಗಿದೆ. ದೆಹಲಿ, ಗುಜರಾತ್, ಉತ್ತರ ಪ್ರದೇಶ, ಮಹಾರಾಷ್ಟ್ರದ ಚಾಲಕರು ಈ ಸಹಕಾರ ಸಂಘದಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಜಾಲವನ್ನು ವಿಸ್ತರಿಸಲು ಇತರ ಸಹಕಾರ ಸಂಘಗಳನ್ನು ಸಂಪರ್ಕ ಮಾಡುವ ಕೆಲಸ ನಡೆದಿದೆ.

ಸೇವೆಯನ್ನು ಒದಗಿಸಲು ಅಗತ್ಯವಿರುವ ಆ್ಯಪ್ ಅಭಿವೃದ್ಧಿಪಡಿಸಲು ತಂತ್ರಜ್ಞಾನ ಪಾಲುದಾರರನ್ನು ಆಯ್ಕೆ ಮಾಡಲು ಟೆಂಡರ್ ಹೊರಡಿಸಲಾಗಿದೆ. ಕೆಲವು ದಿನಗಳಲ್ಲಿ ಇದು ಅಂತಿಮಗೊಳ್ಳಲಿದೆ ಎಂದು ಗುಪ್ತ ತಿಳಿಸಿದ್ದಾರೆ. ಡಿಸೆಂಬರ್ ವೇಳೆಗೆ ಆ್ಯಪ್ ಸಿದ್ಧವಾಗುವ ನಿರೀಕ್ಷೆ ಇದೆ ಎಂದಿದ್ದಾರೆ.

ಮಾರುಕಟ್ಟೆ ಪ್ರಚಾರ ತಂತ್ರವನ್ನು ಸಿದ್ಧಪಡಿಸಲು ಐಐಎಂ–ಬೆಂಗಳೂರು ಜೊತೆ ಒಪ್ಪಂದ ಆಗಿದೆ. ಸೇವೆಗಳು ಎಲ್ಲೆಡೆ ವ್ಯಾಪಕವಾಗಿ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಈಗ ಸದಸ್ಯತ್ವ ನೋಂದಣಿ ಕಾರ್ಯ ಪ್ರಗತಿಯಲ್ಲಿದೆ.

ಸಹಪಾಠಿಗಳಿಂದ ಬಾಲಕನ ಕೊಲೆ

ನಾಸಿಕ್(ಪಿಟಿಐ): ನಗರದ ಕೋಚಿಂಗ್ ಕೇಂದ್ರವೊಂದರಲ್ಲಿ 10ನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ಆತನ ಇಬ್ಬರು ಸಹಪಾಠಿಗಳೇ ಹೊಡೆದು ಕೊಲೆ ಮಾಡಿದ್ದಾರೆ. ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಇಬ್ಬರು ಬಾಲಕರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಮೃತ ಬಾಲಕನನ್ನು ಯಶರಾಜ್ ತುಕಾರಾಂ ಗಂಗುರ್ದೆ ಎಂಬುದಾಗಿ ಗುರುತಿಸಲಾಗಿದೆ.

'ಸೀಟುಗಳ ವ್ಯವಸ್ಥೆಗೆ ಸಂಬಂಧಿಸಿ ಶಾಲೆಯಲ್ಲಿ ಜುಲೈ 31ರಂದು ಈ ಇಬ್ಬರು ಸಹಪಾಠಿಗಳು ಹಾಗೂ ಗಂಗುರ್ದೆ ನಡುವೆ ಮಾತಿನ ಚಕಮಕಿ ನಡೆದಿತ್ತು. ನಂತರ, ಸಮಸ್ಯೆಯನ್ನು ಬಗೆಹರಿಸಲಾಗಿತ್ತು. ಕೋಚಿಂಗ್ ಕೇಂದ್ರದಲ್ಲಿ ಶನಿವಾರ ರಾತ್ರಿ ಭೇಟಿಯಾದ ವೇಳೆ, ಇದೇ ವಿಚಾರವಾಗಿ ಮತ್ತೆ ಜಗಳವಾಗಿದೆ. ಮಾತಿಗೆ ಮಾತು ಬೆಳೆದಿದೆ. ಇಬ್ಬರೂ ಗಂಗುರ್ದೆಗೆ ಹಲ್ಲೆ ಮಾಡಿದ್ದರು. ಆಗ ಕುಸಿದು ಬಿದ್ದಿದ್ದ ಬಾಲಕನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ಆತ ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದರು' ಎಂದು ತಿಳಿಸಿದ್ದಾರೆ.

ಸಚಿವ ಪೀಯೂಷ್ ಗೋಯಲ್ ನೇತೃತ್ವದಲ್ಲಿ ನಡೆದ ಸಭೆ

ಸರ್ಕಾರದ ನೆರವು ಕೇಳಿದ ರಫ್ತುದಾರರು

ನವದೆಹಲಿ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕ ಹೇರಿರುವ ಶೇಕಡ 25ರಷ್ಟು ಸುಂಕದ ಹೊರೆಯನ್ನು ನಿಭಾಯಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು, ಹಣಕಾಸಿನ ನೆರವು ಒದಗಿಸಬೇಕು ಎಂದು ಆಹಾರ ಉತ್ಪನ್ನಗಳು, ಸಮುದ್ರ ಉತ್ಪನ್ನಗಳು, ಜವಳಿ ಉತ್ಪನ್ನಗಳ ರಫ್ತು ವಹಿವಾಟಿನಲ್ಲಿ ತೊಡಗಿರುವವರು ಕೇಂದ್ರ ಸರ್ಕಾರವನ್ನು ಕೋರಿದ್ದಾರೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರ ಜೊತೆ ಮುಂಬೈನಲ್ಲಿ ನಡೆದ ಸಭೆಯಲ್ಲಿ ಈ ವಲಯಗಳ ಕೆಲವು ಪ್ರತಿನಿಧಿಗಳು ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಮಾದರಿಯಲ್ಲಿ ತಮಗೂ ನೆರವು ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.



ಪೀಯೂಷ್ ಗೋಯಲ್

ರಫ್ತು ವಹಿವಾಟಿನಲ್ಲಿ ತೊಡಗಿರುವವರು ತಮ್ಮ ಸಲಹೆಗಳನ್ನು ಲಿಖಿತ ರೂಪದಲ್ಲಿ ನೀಡಬೇಕು ಎಂದು ಸಚಿವರು ಸಲಹೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದಲ್ಲಿ ಸಾಲದ ಮೇಲಿನ ಬಡ್ಡಿ ದರವು ಶೇ 8ರಿಂದ ಶೇ 12ರವರೆಗೆ ಇದೆ. ಕೆಲವು ಸಂದರ್ಭಗಳಲ್ಲಿ ಇದು ಇನ್ನೂ ಹೆಚ್ಚಿರುವುದೂ ಇದೆ. ಆದರೆ ಭಾರತಕ್ಕೆ ಅಮೆರಿಕದ ಮಾರುಕಟ್ಟೆಯಲ್ಲಿ ಸ್ಪರ್ಧೆ ಒಡ್ಡುತ್ತಿರುವ ಚೀನಾ, ಮಲೇಷ್ಯಾ, ಥಾಯ್ಲೆಂಡ್, ವಿಯೆಟ್ನಾಂ ದೇಶಗಳಲ್ಲಿ ಬಡ್ಡಿ ದರವು ಕಡಿಮೆ ಇದೆ ಎಂದು ರಫ್ತುದಾರರು ಹೇಳಿದ್ದಾರೆ.

ವಸ್ತ್ರ ಹಾಗೂ ಸೀಗಡಿ ರಫ್ತುದಾರರ ಪರಿಸ್ಥಿತಿ ಚೆನ್ನಾಗಿಲ್ಲ. ಅಮೆರಿಕದ ಗ್ರಾಹಕರು ಖರೀದಿಯನ್ನು ರದ್ದುಗೊಳಿಸಲು ಶುರು ಮಾಡಿದ್ದಾರೆ, ಇನ್ನು ಕೆಲವರು ಖರೀದಿಯನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದು ಸಮಸ್ಯೆ ಸೃಷ್ಟಿಸಲಿದೆ. ಉದ್ಯೋಗ ನಷ್ಟವೂ ಆಗಬಹುದು ಎಂದು ರಫ್ತುದಾರರು ವಿವರಿಸಿದ್ದಾರೆ ಎಂದು ಅಧಿಕಾರಿ ವರ್ಗದ ಮೂಲಗಳು ಹೇಳಿವೆ.

ತೇಲಿದ ಸಿಲಿಂಡರ್‌ಗಳು


ಪಿಟಿಐ ಚಿತ್ರ



ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ಗಂಗಾ ನದಿಯಿಂದ ಉಂಟಾದ ಪ್ರವಾಹದಿಂದಾಗಿ ಎಲ್‌ಪಿಜಿ ಸಿಲಿಂಡರ್ ಗೋದಾಮಿಗೆ ಭಾನುವಾರ ನೀರು ನುಗ್ಗಿತ್ತು

ಎ.ಐ ಪಲ್ಲಟಗಳು ಅಲ್ಪಕಾಲಿಕ: ಖರ್ಗೆ

ನವದೆಹಲಿ (ಪಿಟಿಐ): 'ಕೃತಕ ಬುದ್ಧಿಮತ್ತೆಯಿಂದ (ಎ.ಐ) ಉಂಟಾಗುವ ಪಲ್ಲಟಗಳು ಅಲ್ಪಕಾಲ ಮಾತ್ರ ಇರುತ್ತದೆ, ಮುಂದೆ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ' ಎಂದು ರಾಜ್ಯದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಪ್ರಿಯಾಂಕ್ ಖರ್ಗೆ

ಹೊಸ ಯುಗದ ತಂತ್ರಜ್ಞಾನಗಳಿಗೆ ತಕ್ಕಂತೆ ಪ್ರತಿಭೆಗಳನ್ನು ಸಿದ್ಧಪಡಿಸಲು ರಾಜ್ಯದಲ್ಲಿ ದೊಡ್ಡ ಪ್ರಮಾಣದ ಮರುಕೌಶಲ ಕ್ರಮಗಳು ಜಾರಿಯಲ್ಲಿವೆ. ರಾಜ್ಯ ಸರ್ಕಾರವು ನಾವೀನ್ಯ ಮತ್ತು ಸಹಭಾಗಿತ್ವಕ್ಕೆ ಉತ್ತೇಜನ ನೀಡುತ್ತಿದೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಎ.ಐನಿಂದ ಕೆಲವು ಉದ್ಯೋಗ ನಷ್ಟ ಆಗಬಹುದು. ಆದರೆ ಕೌಶಲ ಹೆಚ್ಚಳದಿಂದ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಅದಕ್ಕಾಗಿಯೇ ನಮಗೆ ಬೃಹತ್ ಮರುಕೌಶಲ ಕಾರ್ಯಕ್ರಮದ ಅಗತ್ಯವಿದೆ' ಎಂದು ಹೇಳಿದ್ದಾರೆ.

ಮುಂಬರುವ ಆರ್ಥಿಕ ವರ್ಷದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ಸೈಬರ್ ಭದ್ರತೆ, ಡಿಜಿಟಲ್ ಫೊರೆನ್ಸಿಕ್ಸ್ ಸೇರಿದಂತೆ ಜಾಗತಿಕವಾಗಿ ಬೇಡಿಕೆ ಇರುವ ತಂತ್ರಜ್ಞಾನದ ಬಗ್ಗೆ 5 ಲಕ್ಷಕ್ಕೂ ಅಧಿಕ ಜನರಿಗೆ ಕೌಶಲ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಹೊಸ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡುವ ಕುರಿತು ಕೌಶಲ ಮಂಡಳಿ ಜೊತೆ ಮಾತುಕತೆ ನಡೆಸಲಾಗುತ್ತಿದ್ದು, ಅವರಿಂದ ಪ್ರತಿಕ್ರಿಯೆ ಪಡೆದು ತರಬೇತಿ ನೀಡುವುದನ್ನು ನಿರ್ಧರಿಸಲಾಗುವುದು ಎಂದಿದ್ದಾರೆ.

ಹಸೀನಾ ವಿಚಾರಣೆ ಆರಂಭಿಸಿದ ಐಸಿಟಿ

ಢಾಕಾ(ಪಿಟಿಐ): ವಿವಿಧ ಆರೋಪ ಗಳನ್ನು ಎದುರಿಸುತ್ತಿರುವ, ಬಾಂಗ್ಲಾ ದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ವಿಚಾರಣೆಯನ್ನು ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಾಲಯವು (ಐಸಿಟಿ) ಭಾನುವಾರ ಆರಂಭಿಸಿತು.

ಹಸೀನಾ ಅವರ ಆಪ್ತರಾದ, ಮಾಜಿ ಗೃಹ ಸಚಿವ ಅಸಾದುಜ್ಜಮಾನ್ ಖಾನ್ ಕಮಾಲ್ ಹಾಗೂ ಮಾಜಿ ಐಜಿಪಿ ಚೌಧರಿ ಅಬ್ದುಲ್ಲಾ ಅಲ್ ಮಾಮೂನ್ ಈ ಪ್ರಕರಣದಲ್ಲಿ ಸಹ ಆರೋಪಿಗಳಾಗಿದ್ದಾರೆ.

ಶೇಖ್ ಹಸೀನಾ ಹಾಗೂ ಕಮಾಲ್ ಅವರ ಅನುಪಸ್ಥಿತಿಯಲ್ಲಿ ವಿಚಾರಣೆ ನಡೆಯಿತು. ಮಾಮೂನ್ ಅವರು ಸದ್ಯ ಪೊಲೀಸ್ ಕಸ್ಟಡಿಯಲ್ಲಿದ್ದು, ಮಾಫಿ ಸಾಕ್ಷಿಯಾಗಲು ಒಪ್ಪಿದ್ದಾರೆ.

ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ನೇಮಿಸಿರುವ ಮುಖ್ಯ ಪ್ರಾಸಿಕ್ಯೂಟರ್ ತಜುಲ್ ಇಸ್ಲಾಂ ವಾದ ಮಂಡಿಸಿದರು. 'ಕಳೆದ ವರ್ಷ ದೇಶದಲ್ಲಿ ನಡೆದ ಹಿಂಸಾಚಾರ ಹಾಗೂ ಅಪರಾಧಿಕ ಕೃತ್ಯಗಳಿಗೆ ಶೇಖ್ ಹಸೀನಾ ಅವರೇ ನೇರ ಕಾರಣ. ಅವರಿಗೆ ಗರಿಷ್ಠ ಶಿಕ್ಷೆ ವಿಧಿಸಬೇಕು' ಎಂದು ತಜುಲ್ ಇಸ್ಲಾಂ, ನ್ಯಾಯಾಲಯಕ್ಕೆ ಕೋರಿದರು.

'ದೇವದಾಸಿ ಮಕ್ಕಳಿಗೆ ಪಿತೃತ್ವ ಹಕ್ಕು'

ಒಂದನೇ ಪುಟದಿಂದ...

ಮಸೂದೆಯಲ್ಲಿ ಏನಿದೆ?: ನಾಗರಿಕ ಸಮಾಜದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ದಮನಿತ ದೇವದಾಸಿ ಮಹಿಳೆಯರನ್ನು ಎಲ್ಲ ರೀತಿಯ ಶೋಷಣೆಗಳಿಂದ, ಅವರ ಮಕ್ಕಳನ್ನು ಸಾಮಾಜಿಕ ನಿಷೇಧದಿಂದ ಮುಕ್ತಗೊಳಿಸಿ ಸಬಲೀಕರಣಗೊಳಿಸುವುದು ಮಸೂದೆಯ ಉದ್ದೇಶ. ಅಲ್ಲದೆ ಅಂತಹ ಮಕ್ಕಳ ಜೈವಿಕ ತಂದೆಯನ್ನು ವಿಶೇಷ ಕಾನೂನಿನಡಿ ಹೊಣೆಗಾರರನ್ನಾಗಿ ಮಾಡಲು ಸಾಕ್ಷ್ಯಗಳನ್ನು ಒದಗಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ. ದೇವದಾಸಿ ಕುಟುಂಬಕ್ಕೆ ಸಮಗ್ರ ಪುನರ್ವಸತಿ ಮತ್ತು ದೇವದಾಸಿ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ವಿವರಿಸಲಾಗಿದೆ.

'ದೇವದಾಸಿ ಕುಟುಂಬ'ವು ದೇವದಾಸಿ ಮತ್ತು ದೇವದಾಸಿಯ ಎರಡನೇ ತಲೆಮಾರಿನವರೆಗಿನ ವಂಶಾವಳಿಯನ್ನು ಒಳಗೊಂಡಿದೆ ಮತ್ತು ಅವರಿಗೆ ಸೀಮಿತವಾಗಿ ಇರಲಿದೆ. ಅಂದರೆ, ದೇವದಾಸಿ ಮಕ್ಕಳು ಮತ್ತು ಆಕೆಯ ಮೊಮ್ಮಕ್ಕಳು. ಪ್ರತಿಯೊಬ್ಬ ದೇವದಾಸಿ ಮತ್ತು ಅವಳ ಮಗುವು ಎಲ್ಲ ರೀತಿಯಿಂದ ಮತ್ತು ನ್ಯಾಯಾಂಗ ಪ್ರಕ್ರಿಯೆಯ ಉದ್ದಕ್ಕೂ ಗೋಪ್ಯತೆ ಮತ್ತು ಗೋಪ್ಯತೆಯ ರಕ್ಷಣೆಯ ಹಕ್ಕು ಹೊಂದಿರುತ್ತಾರೆ ಎಂದೂ ಮಸೂದೆಯಲ್ಲಿದೆ.

ಪಿತೃತ್ವ ಹಕ್ಕು, ಜೀವನಾಂಶ, ಪುನರ್ವಸತಿ

ಒಂದನೇ ಪುಟದಿಂದ...

ದೇವದಾಸಿಯ ಮಗು ಕಾನೂನಿನ ಅಡಿಯಲ್ಲಿ ಜೀವನಾಂಶ ಪಡೆಯಲು ಹಕ್ಕು ಹೊಂದಿರುತ್ತದೆ. ಅಂತಹ ಅರ್ಜಿಗಳನ್ನು ನ್ಯಾಯಾಲಯದ ಮುಂದೆ ಪ್ರಸ್ತುತಪಡಿಸುವ ಸಾಕ್ಷ್ಯಗಳು ಮತ್ತು ಸಂದರ್ಭಗಳ ಆಧಾರದಲ್ಲಿ ಕಾನೂನು ಪ್ರಕಾರ ಪರಿಗಣಿಸಲಾಗುತ್ತದೆ. ಗಂಡು ಮಗುವು ಪ್ರೌಢಾವಸ್ಥೆವರೆಗೆ ಮತ್ತು ಹೆಣ್ಣು ಮಗುವು ಪ್ರೌಢಾವಸ್ಥೆವರೆಗೆ ಅಥವಾ ವಿವಾಹವಾಗುವವರೆಗೆ ಜೀವನಾಂಶದ ಹಕ್ಕು ಪಡೆಯಬಹುದು. ಪುನರ್ವಸತಿ ಪ್ರಕ್ರಿಯೆಯಡಿ ದೇವದಾಸಿ ಕುಟುಂಬಕ್ಕೆ ಎಲ್ಲ ಅಗತ್ಯ ಮೂಲಸೌಲಭ್ಯಗಳಿರುವ ವಸತಿ ವ್ಯವಸ್ಥೆ ಕಲ್ಪಿಸಬೇಕು ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ದೇವದಾಸಿಗೆ ಜನಿಸುವ ಮಗುವನ್ನು ಹಿಂದೂ ಧರ್ಮದ ವೈಯಕ್ತಿಕ ಕಾನೂನಿನ ಪ್ರಕಾರ ಕಾನೂನುಬದ್ಧ ಮಗು ಎಂದು ಪರಿಗಣಿಸಲಾಗುತ್ತದೆ. ಇಬ್ಬರೂ ಪೋಷಕರ ಆಸ್ತಿಯ ಉತ್ತರಾಧಿಕಾರಿ ಮತ್ತು ಉತ್ತರಾಧಿಕಾರ ಹೊಂದುವ ಅರ್ಹತೆ ಮಗುವಿಗೆ ಇರಲಿದೆ.

ದೇವದಾಸಿ ಮಗುವಿಗೆ ತನ್ನ ತಂದೆ ತಿಳಿದಿಲ್ಲ ಎಂಬ ಕಾರಣಕ್ಕೆ ತಾರತಮ್ಯ ಮಾಡಲು ಅವಕಾಶ ಇಲ್ಲ. ದೇವದಾಸಿಯ ಮಕ್ಕಳು ಶಿಕ್ಷಣ, ಆರೋಗ್ಯ ಮತ್ತು ಪರವಾನಗಿಗಳು, ಪಾಸ್‌ಪೋರ್ಟ್, ಪಾನ್ ಕಾರ್ಡ್, ಪಡಿತರ ಚೀಟಿ ಮತ್ತಿತರ ದಾಖಲೆಗಳಿಗೆ ಅರ್ಜಿ ಸಲ್ಲಿಸುವಾಗ ತನ್ನ ತಂದೆಯ ಹೆಸರು ಘೋಷಿಸುವುದು ಕಡ್ಡಾಯವಾಗಿದೆ. ಯಾವುದೇ ಅರ್ಜಿಯನ್ನು ಸಲ್ಲಿಸುವಾಗ ತಂದೆಯ ಹೆಸರಿನ ಭಾಗವು ಕಡ್ಡಾಯವಲ್ಲ ಎಂದು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳಬೇಕು. ಪ್ರತಿಯೊಬ್ಬ ದೇವದಾಸಿ ಮಹಿಳೆಯು ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮದ ಹಕ್ಕು ಹೊಂದಲಿದ್ದು ಅದನ್ನು ಸರ್ಕಾರ ಒದಗಿಸಬೇಕು ಎಂದೂ ಮಸೂದೆಯಲ್ಲಿದೆ.

ನಿಷೇಧ ಹೇಗೆ?: ದೇವದಾಸಿಯಾಗಿ ಮಹಿಳೆಯನ್ನು ಸಮರ್ಪಿಸುವುದು, ಆಕೆಯೇ ಸಮರ್ಪಿಸಿಕೊಳ್ಳುವುದನ್ನು ಈ ಮಸೂದೆಯು ಕಾನೂನುಬಾಹಿರವೆಂದು ಘೋಷಿಸಲಿದೆ. ಈ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ, ದೇವದಾಸಿ ನಿಷೇಧ ಮತ್ತು ಪುನರ್ವಸತಿ ಅಧಿಕಾರಿ ಅಥವಾ ತಾಲ್ಲೂಕು ಅಥವಾ ರಾಜ್ಯ ಸಮಿತಿಯು ಅಂತಹ ಸಮರ್ಪಣೆಯನ್ನು ನಿಷೇಧಿಸಿ ತಡೆಯಾಜ್ಞೆ ಹೊರಡಿಸಬಹುದು.

ಈ ಕುರಿತು ಅರ್ಜಿ ಅಥವಾ ದೂರನ್ನು ವೈಯಕ್ತಿಕವಾಗಿ ಅಥವಾ ನಂಬಲರ್ಹ ವ್ಯಕ್ತಿ ಸಲ್ಲಿಸಬಹುದು. ಅಂತಹ ಸಮರ್ಪಣೆ ನಡೆಯುವ ಸಾಧ್ಯತೆಯ ಬಗ್ಗೆ ಸೂಕ್ತ ಮಾಹಿತಿ ಇರುವ ಸರ್ಕಾರೇತರ ಸಂಸ್ಥೆಯೂ ದೂರು ನೀಡಬಹುದು. ಸಮಿತಿಯು ಸ್ವಯಂಪ್ರೇರಿತವಾಗಿಯೂ ತನಿಖೆ ನಡೆಸಬಹುದು.

ಜಾತ್ರೆಗಳ ಸಮಯದಲ್ಲಿ ಹುಣ್ಣಿಮೆಯಂಥ ಕೆಲವು ದಿನಗಳಲ್ಲಿ ದೇವದಾಸಿಯರಾಗಿ ಸಾಮೂಹಿಕ ಸಮರ್ಪಣೆಯನ್ನು ತಡೆಗಟ್ಟಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯನ್ನು ದೇವದಾಸಿ ನಿಷೇಧ ಮತ್ತು ಪುನರ್ವಸತಿ ಅಧಿಕಾರಿ ಎಂದು ಪರಿಗಣಿಸಲಾಗುವುದು. ಯಾವುದೇ ಸಮರ್ಪಣೆಯನ್ನು ದೇವಾಲಯದ ಆವರಣದಲ್ಲಿ ನಡೆಸಲಾಗಿದೆ ಎಂದು ಕಂಡುಬಂದರೆ, ತಾಲ್ಲೂಕು ಸಮಿತಿಯು ಸಂಬಂಧಪಟ್ಟ ದೇವಾಲಯ ಸಮಿತಿಗೆ ನೋಟಿಸ್ ನೀಡಲಿದೆ ಎಂದೂ ಮಸೂದೆಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
ಪ್ರಜಾಪ್ಲಸ್
ಸೋಮವಾರ • ಆಗಸ್ಟ್ 4, 2025
ಮನರಂಜನ
ಜಾಹೀರಾತು
ಪ್ರೋತ್ಸಾಹ
ಉದ್ಯಮ ಅಭಿವೃದ್ಧಿ

ಲವ್ ಮಾಕ್ಟೇಲ್‌–3ಗೆ ಸಜ್ಜಾದ ಕೃಷ್ಣ ಜೋಡಿ

ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್ 'ಲವ್ ಮಾಕ್ಟೇಲ್‌–3' ಚಿತ್ರಕ್ಕೆ ಚಾಲನೆ ನೀಡಿದ್ದಾರೆ. ಸದ್ಯ ಎರಡು ಸಿನಿಮಾಗಳ ಚಿತ್ರೀಕರಣ ಮುಗಿಸಿರುವ ಡಾರ್ಲಿಂಗ್ ಕೃಷ್ಣ ತಮ್ಮ ಮುಂದಿನ ಯೋಜನೆಗಳ ಕುರಿತು ಮಾತಿಗೆ ಸಿಕ್ಕರು...


ಲವ್ ಮಾಕ್ಟೇಲ್ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್



ಆರ್.ಚಂದ್ರು ನಿರ್ಮಾಣದ 'ಫಾದರ್' ಚಿತ್ರದ ಚಿತ್ರೀಕರಣ ಮುಗಿದು, ಪೋಸ್ಟ್ ಪ್ರೊಡಕ್ಷನ್ ಕೂಡ ಮುಕ್ತಾಯದ ಹಂತದಲ್ಲಿದೆ. ಶಶಾಂಕ್ ನಿರ್ದೇಶನದ 'ಬ್ರಾಟ್' ಚಿತ್ರ ಕೂಡ ಅಂತಿಮ ಹಂತದಲ್ಲಿದೆ. ಈ ಚಿತ್ರಕ್ಕಾಗಿ ಕೇಶವಿನ್ಯಾಸ ಬದಲಿಸಿದ್ದೆ. ಹೀಗಾಗಿ ಕೂದಲು ಬೆಳೆಯುತ್ತಿದ್ದಂತೆ 'ಲವ್ ಮಾಕ್ಟೇಲ್‌–3' ಚಿತ್ರೀಕರಣ ಪ್ರಾರಂಭವಾಗಲಿದೆ. ಈಗಾಗಲೇ ಒಂದು ದಿನ ಚಿತ್ರೀಕರಣಗೊಂಡಿದೆ' ಎಂದು ಮಾತು ಪ್ರಾರಂಭಿಸಿದರು ಕೃಷ್ಣ.

'ಲವ್ ಮಾಕ್ಟೇಲ್‌–3' ಹಿಂದಿನ ಎರಡು ಭಾಗಗಳಿಂತ ಭಿನ್ನವಾಗಿರುತ್ತದೆ. ಅಲ್ಲಿನ ಪಾತ್ರಗಳು ಮುಂದುವರಿಯುತ್ತವೆ. ಆದರೆ ಇದು ಬೇರೆ ರೀತಿಯದ್ದೇ ಸಿನಿಮಾ. ತುಂಬಾ ಹೊಸ ಪಾತ್ರಗಳು ಬರುತ್ತವೆ. ವಿಭಿನ್ನವಾದ, ಜನಕ್ಕೆ ಖುಷಿ ಕೊಡುವ ಪಾತ್ರಗಳು ಇಲ್ಲಿವೆ. ತಾಂತ್ರಿಕ ತಂಡ ಅದೇ ಇರುತ್ತದೆ. ಬೆಂಗಳೂರಿನಲ್ಲಿ ಕಥೆ ನಡೆದರೂ ಕಥೆ ಬೇರೆ ಬೇರೆ ಊರುಗಳಲ್ಲಿ ಪಯಣಿಸುತ್ತದೆ. ಈ ಜಾನರ್‌ಗೆ ಲೊಕೇಷನ್ ತುಂಬ ಮಹತ್ವದ್ದು. ಜನ ಕಥೆಯ ಮೂಡ್‌ಗೆ ಹೋಗಬೇಕು ಎಂದರೆ ಕಣ್ಣಿಗೆ ಸುಂದರವಾದ ದೃಶ್ಯಗಳು ಕಾಣಿಸಬೇಕು. ಅದಕ್ಕಾಗಿ ಕಥೆ ಬೇರೆಬೇರೆ ಊರುಗಳಲ್ಲಿ ನಡೆಯುತ್ತದೆ' ಎಂದು ಅವರು ಮಾಹಿತಿ ನೀಡಿದರು.

'ಲವ್ ಮಾಕ್ಟೇಲ್‌–2', ಮೊದಲನೆ ಭಾಗಕ್ಕಿಂತ ದೊಡ್ಡ ಹಿಟ್ ಆಗಿತ್ತು. ಮೂರನೇ ಭಾಗ ಇವೆರಡಕ್ಕಿಂತ ದೊಡ್ಡ ಬಜೆಟ್‌ನ ಸಿನಿಮಾ. ಈ ಶೀರ್ಷಿಕೆಗೆ ಒಂದಷ್ಟು ಕನಿಷ್ಠ ವಹಿವಾಟುಗಳು ಆಗುತ್ತವೆ ಎಂಬುದು ಗೊತ್ತಿದೆ. ಹೀಗಾಗಿ ನಿರ್ಮಾಪಕನಾಗಿ ನನಗೆ ಹೆಚ್ಚೇನು ರಿಸ್ಕ್ ಇಲ್ಲ. ಆದರೆ ಕಥೆಯಿಂದಾಗಿ ಬಜೆಟ್ ಹಿಂದಿನ ಸಿನಿಮಾಗಳಿಗಿಂತ ಮೂರು ಪಟ್ಟು ಹೆಚ್ಚಾಗುತ್ತಿದೆ. ಯಶಸ್ಸು ಅದೇ ಮಟ್ಟದಲ್ಲಿ ಸಿಗುತ್ತದೆಯಾ ಎಂಬುದು ಗೊತ್ತಿಲ್ಲ. ಒಟ್ಟಿನಲ್ಲಿ ಹಿಂದಿನ ಎರಡು ಭಾಗಕ್ಕಿಂತ ಅದ್ದೂರಿಯಾದ ಸಿನಿಮಾ ಮಾಡುವ ಇರಾದೆಯಿದೆ' ಎಂದರು.

'ಈ ಭಾಗವನ್ನು ಕನ್ನಡದಲ್ಲಿ ಮಾತ್ರ ಮಾಡುತ್ತಿದ್ದೇವೆ. ಉಳಿದ ಭಾಷೆಗಳಿಗೆ ಡಬ್ ಮಾಡುತ್ತೇವೆ. ಮೊದಲ ಭಾಗ ಮಾಡಿದ್ದಾಗ ಮುಂದಿನ ಭಾಗ ಮಾಡುವ ಆಲೋಚನೆ ಇರಲಿಲ್ಲ. ನಂತರ ಆ ಆಲೋಚನೆ ಬಂದಿದ್ದು. ಒಂದೇ ಕಥೆಯನ್ನು ವಿಸ್ತರಿಸಿಕೊಂಡು ಹೋಗುವುದು ಸುಲಭವಲ್ಲ. ವಿಷಯಗಳು ಖಾಲಿಯಾಗುತ್ತವೆ. 'ಲವ್ ಮಾಕ್ಟೇಲ್‌'ಗೆ 19 ದಿನಗಳಲ್ಲಿ ಸ್ಕ್ರಿಪ್ಟ್ ಬರೆದಿದ್ದೆ. ಆದರೆ ಮೂರನೇ ಭಾಗಕ್ಕೆ ಮೂರುವರೆ ವರ್ಷ ತೆಗೆದುಕೊಂಡಿರುವೆ. ಸೀಕ್ವೆಲ್ ಕಥೆಗಳನ್ನು ಹೇಳುವುದು ಸುಲಭವಲ್ಲ' ಎನ್ನುತ್ತಾರೆ ಅವರು.

'ನಾನು ನಿರ್ದೇಶಕ ಅಲ್ಲ, ಬರಹಗಾರ ಅಲ್ಲ. ಆಕಸ್ಮಿಕವಾಗಿ 'ಲವ್ ಮಾಕ್ಟೇಲ್‌' ಮಾಡಿದ್ದು. ಅದರ ಯಶಸ್ಸಿನಿಂದ ಮುಂದಿನ ಭಾಗಗಳು ಹುಟ್ಟಿಕೊಂಡಿದ್ದು. ಇದರ ಹೊರತಾಗಿ ಬೇರೇನೂ ಬರೆಯುತ್ತಿಲ್ಲ. ಮುಗಿದಿರುವ ಎರಡು ಸಿನಿಮಾಗಳಲ್ಲಿ ಯಾವುದು ಮೊದಲು ತೆರೆಗೆ ಬರುತ್ತದೆ ಗೊತ್ತಿಲ್ಲ. ಮೂರು ಸಿನಿಮಾಗಳು ಬೇರೆ ರೀತಿಯವು. 'ಬ್ರಾಟ್' ಯುವ ಮನಸ್ಸುಗಳನ್ನು ಸೆಳೆಯುವ ಸಿನಿಮಾ. 'ಫಾದರ್' ಭಾವನಾತ್ಮಕ ಚಿತ್ರ. ಎರಡೂ ಈ ವರ್ಷವೇ ತೆರೆ ಕಾಣಲಿವೆ' ಎಂದು ಮಾತಿಗೆ ವಿರಾಮವಿತ್ತರು.

'ಜಸ್ಟ್ ಮ್ಯಾರೀಡ್'ನ ಮತ್ತೊಂದು ಹಾಡು


ಅಂಕಿತಾ ಅಮರ್


ಅಂಕಿತಾ ಅಮರ್, ಶೈನ್ ಶೆಟ್ಟಿ ಜೋಡಿಯಾಗಿ ನಟಿಸಿರುವ 'ಜಸ್ಟ್ ಮ್ಯಾರೀಡ್' ಚಿತ್ರದ 'ತಪ್ಪು ಮಾಡೋದು ಸಹಜ' ಎಂಬ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಿ.ಆರ್.ಬಾಬಿ ಬರೆದು ನಿರ್ದೇಶಿಸಿರುವ ಚಿತ್ರಕ್ಕೆ ಖ್ಯಾತ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಬಂಡವಾಳ ಹೂಡಿದ್ದಾರೆ.

ಅನನ್ಯಾ ಭಟ್ ಅವರ ಧ್ವನಿಯಲ್ಲಿ ಮೂಡಿಬಂದಿರುವ ಈ ಹಾಡಿಗೆ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದು, ಧನಂಜಯ್ ರಂಜನ್ ಸಾಹಿತ್ಯವಿದೆ. ಖ್ಯಾತ ನಿರ್ದೇಶಕ ಮತ್ತು ನಟ ರಾಜ್ ಬಿ. ಶೆಟ್ಟಿ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

'ಈಗಷ್ಟೇ ಮದುವೆಯಾದವರ ಕಥೆ. ಪ್ರೇಮಕಥೆಯ ಚಿತ್ರವಾಗಿದ್ದರೂ, ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳೂ ಇವೆ' ಎಂದಿದ್ದಾರೆ ನಿರ್ದೇಶಕರು. ಅನುಪ್ ಭಂಡಾರಿ, ಸಾಕ್ಷಿ ಅಗರ್‌ವಾಲ್, ಶ್ರುತಿ ಹರಿಹರನ್, ದೇವರಾಜ್, ಅಚ್ಯುತ್ ಕುಮಾರ್, ಶ್ರುತಿ ಕೃಷ್ಣ, ಮತ್ತು ಶ್ರೀಮಾನ್ ಸೇರಿದಂತೆ ಸಾಕಷ್ಟು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಪಿ.ಜಿ ಛಾಯಾಚಿತ್ರಗ್ರಹಣ, ಶ್ರೀಕಾಂತ್ ಮತ್ತು ಪ್ರತೀಕ್ ಶೆಟ್ಟಿ ಸಂಕಲನ ಚಿತ್ರಕ್ಕಿದೆ. ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಶಶಿ ಕಾವೂರ್ ಸಾಹಿತ್ಯವಿದೆ.

ಚಿತ್ರದಲ್ಲಿ ಸುಮಧುರ ಹಾಡುಗಳ ಸರಮಾಲೆಯೇ ಇದೆ. ಜಸ್ಕರಣ್ ಸಿಂಗ್ ಕಂಠಸಿರಿಯಲ್ಲಿ 'ಇದು ಮೊದಲನೆ ಸ್ವಾಗತ' ಹಾಡು ಬಿಡುಗಡೆಗೊಂಡಿತ್ತು. ಸಂಜಿತ್ ಹೆಗಡೆ 'ಮಾಗಲ್ಯಂ ತಂತುನಾನೇನ' ಗೀತೆಯನ್ನು ಹಾಡಿದ್ದಾರೆ. 'ಕೇಳೋ ಮಚ್ಚ' ಎಂಬ ಗೀತೆ ಕೂಡ ಸಾಕಷ್ಟು ಸದ್ದು ಮಾಡಿದೆ.

ಹೊರಬಂತು 'ಕೂಲಿ' ಟ್ರೇಲರ್



ಪ್ರತಿ ಸಿನಿಮಾದಲ್ಲಿಯೂ ಹೊಸತೇನೋ ಹೊತ್ತುತರುವ ಲೋಕೇಶ್ ಕನಗರಾಜ್ ನಿರ್ದೇಶನದ 'ಕೂಲಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಜನಿಕಾಂತ್ ನಟನೆಯ ಚಿತ್ರ ಆ್ಯಕ್ಷನ್ ಜತೆಗೆ ಭರಪೂರ ಮನರಂಜನೆ ಹೊಂದಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಅಕ್ಕಿನೇನಿ ನಾಗಾರ್ಜುನ, ಅಮೀರ್ ಖಾನ್, ಉಪೇಂದ್ರ, ಸೋಬಿನ್ ಸಾಹಿರ್, ಶ್ರುತಿ ಹಾಸನ್, ಸತ್ಯರಾಜ್, ರಚಿತಾ ರಾಮ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಲೋಕೇಶ್ ಕನಗರಾಜ್ ತಮ್ಮ ಹಿಂದಿನ ಸಿನಿಮಾಗಳಂತೆಯೇ ಇಲ್ಲಿಯೂ ಪ್ರತಿ ಪಾತ್ರಕ್ಕೂ ಒಂದು ಭಿನ್ನ ಹಾವಭಾವ ನೀಡಿದ್ದಾರೆ. ಈ ಚಿತ್ರ ರಜನಿಕಾಂತ್ ಅಭಿಮಾನಿಗಳಿಗೆ ರಸದೌತಣ ಎಂಬುದನ್ನು ಟ್ರೇಲರ್ ಹೇಳುತ್ತಿದೆ.

ಖಳನಟರಾಗಿ ಅಕ್ಕಿನೇನಿ ನಾಗಾರ್ಜುನ, ಸೋಬಿನ್ ಸಾಹಿರ್, ಉಪೇಂದ್ರ ಪಾತ್ರಗಳು ಕುತೂಲಹ ಮೂಡಿಸುತ್ತಿವೆ. ಅಮೀರ್ ಖಾನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಗಾರ್ಜುನ ಸಖತ್ ಸ್ಟೈಲಿಷ್ ಆಗಿ ಕಾಣಿಸಿಕೊಂಡಿದ್ದಾರೆ. ರಜನಿಕಾಂತ್, ಸತ್ಯರಾಜ್ ಗೆಳೆಯರಾಗಿದ್ದು, ಸತ್ಯರಾಜ್ ಮಗಳ ಪಾತ್ರದಲ್ಲಿ ಶ್ರುತಿ ಹಾಸನ್ ನಟಿಸಿದ್ದಾರೆ. ರಚಿತಾ ರಾಮ್ ಕೂಡ ಟ್ರೇಲರ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಆಗಸ್ಟ್ 15ರಂದು ಚಿತ್ರ ತೆರೆಗೆ ಬರಲಿದೆ. ಚಿತ್ರಕ್ಕೆ ಅನಿರುದ್ಧ್ ರವಿಚಂದರ್ ಸಂಗೀತವಿದ್ದು, 'ಚಿಟಿಕು' ಎಂಬ ಹಾಡು ಈಗಾಗಲೇ ಸಾಕಷ್ಟು ಸದ್ದು ಮಾಡಿದೆ. 'ಮೋನಿಕಾ' ಹಾಡು ಸದ್ಯ ಎಲ್ಲೆಡೆ ಹರಿದಾಡುತ್ತಿದೆ. ನಟಿ ಪೂಜಾ ಹೆಗ್ಡೆ ಹಾಗೂ ಮಲಯಾಳ ನಟ ಸೋಬಿನ್ ಈ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ಈ ಚಿತ್ರ ರಜನಿಕಾಂತ್ ಅವರ 'ಭಾಷಾ' ಚಿತ್ರದ ಜತೆಗೆ ಥಳಕು ಹೊಂದಿದೆಯಾ ಎಂಬ ಕುತೂಹಲ ಮೂಡಿಸುವ ದೃಶ್ಯವೊಂದನ್ನು ಲೋಕೇಶ್ ಟ್ರೇಲರ್‌ನಲ್ಲಿಟ್ಟಿದ್ದಾರೆ.

ಚಿಟಿಕೆ ಸುದ್ದಿ

ಕಾಲುವೆಗೆ ಬಿದ್ದ ಕಾರು: 11 ಸಾವು


ಅಪಘಾತದ ದೃಶ್ಯ

ಗೊಂಡಾ: ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಎಸ್‌ಯುವಿ ಕಾರು ಸರಾಯು ಕಾಲುವೆಗೆ ಉರುಳಿ ಬಿದ್ದ ಪರಿಣಾಮ ಒಂದೇ ಕುಟುಂಬದ ಒಂಬತ್ತು ಮಂದಿ ಸೇರಿದಂತೆ ಒಟ್ಟು 11 ಜನ ಮೃತಪಟ್ಟಿದ್ದಾರೆ.

ಚಾಲಕ ಸೇರಿದಂತೆ ಕಾರಿನಲ್ಲಿ ಒಟ್ಟು 16 ಮಂದಿ ಪ್ರಯಾಣಿಸುತ್ತಿದ್ದರು. ಗಾಯಗೊಂಡಿರುವ ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆಎಂದು ಪೊಲೀಸರು ತಿಳಿಸಿದ್ದಾರೆ. ವಾಹನದಲ್ಲಿದ್ದ ಮಗು ನಾಪತ್ತೆಯಾಗಿದೆ.

'ಸಿಹಗಾಂವ್ ಗ್ರಾಮದಿಂದ ಖಾರ್ಗುಪುರದ ಪೃಥ್ವಿನಾಥ ದೇವಾಲಯಕ್ಕೆ ತೆರಳುತ್ತಿದ್ದಾಗ ಕಾರು ಬೆಲ್ವಾ ಬಹುತಾದಲ್ಲಿ ಕಾಲುವೆಗೆ ಬಿದ್ದಿದೆ. ಆರು ಮಹಿಳೆಯರು, ಇಬ್ಬರು ಪುರುಷರು ಮತ್ತು ಮೂರು ಮಕ್ಕಳು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

ಮೃತರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ ತಲಾ ₹5 ಲಕ್ಷ ನೀಡುವುದಾಗಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೂ ಪ್ರಕಟಿಸಿದ್ದಾರೆ.

₹350 ಕೋಟಿ ಮೌಲ್ಯದ ಮಾದಕವಸ್ತು ವಶ

ಐಜ್ವಾಲ್ (ಪಿಟಿಐ): ಮಿಜೋರಾಂ ಪೊಲೀಸರು ನಡೆಸಿದ ಅತಿ ದೊಡ್ಡ ಕಾರ್ಯಾಚರಣೆಯಲ್ಲಿ ಸುಮಾರು ₹350 ಕೋಟಿ ಮೌಲ್ಯದ ಕ್ರಿಸ್ಟಲ್ ಮೆಥಾಂಫೆಟ್‌ಮೈನ್ ಹಾಗೂ ಹೆರಾಯಿನ್ ವಶಪಡಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಐಜ್ವಾಲ್‌ನಲ್ಲಿರುವ ಮಾದಕವಸ್ತು ನಿಗ್ರಹ ವಿಶೇಷ ಪೊಲೀಸ್ ಠಾಣೆ ಸಿಬ್ಬಂದಿ ಹಾಗೂ ಅಪರಾಧ ತನಿಖಾ ಇಲಾಖೆಯ (ವಿಶೇಷ ವಿಭಾಗ) ಸಿಬ್ಬಂದಿ ಆಗಸ್ಟ್ 1ರಂದು ಈ ಕಾರ್ಯಾಚರಣೆ ನಡೆಸಿದ್ದರು.

ಐಜ್ವಾಲ್‌ಗೆ ತೆರಳುತ್ತಿದ್ದ ಲಾರಿಯೊಂದನ್ನು ಒಂದನ್ನು ತಡೆದು ಪರಿಶೀಲಿಸಿದಾಗ ₹300 ಕೋಟಿ ಮೌಲ್ಯದ 20.304 ಕೆಜಿ ಕ್ರಿಸ್ಟಲ್ ಮೆಥಾಂಫೆಟಮೈನ್ ಹಾಗೂ 128 ಸಾಬೂನು ಡಬ್ಬಿಗಳಲ್ಲಿ ತುಂಬಿಸಿದ್ದ ₹49.56 ಕೋಟಿ ಮೌಲ್ಯದ 1.652 ಕೆಜಿ ಹೆರಾಯಿನ್ ಪತ್ತೆಯಾಗಿದೆ.

ಮಾದಕವಸ್ತು ಸಾಗಿಸುತ್ತಿದ್ದ ಆರೋಪದಲ್ಲಿ ಚಾಲಕ ಬಿ. ಲಲ್ರಾಜುವಾಲಾನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಕಾರ್ಯಾಗಾರದಲ್ಲಿ 'ತಾರತಮ್ಯ'ದ ಕೂಗು

ಕೇರಳ ಸಿನಿಮಾ ನೀತಿ ಜಾರಿ ಸಂಬಂಧ ಸರ್ಕಾರ ಆಯೋಜಿಸಿದ್ದ ಸಭೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅನುದಾನ ನೀಡಿದರೂ ಗುಣಮಟ್ಟದಲ್ಲಿ ಕೊರತೆ
- ತಜ್ಞರಿಂದ ತರಬೇತಿ ಬಳಿಕ ಅನುದಾನ ನೀಡಿ
- ಅಡೂರ್ ಸಲಹೆಗೆ ದಲಿತ ಲೇಖಕ ಸನ್ನಿ ಕಾಪಿಕಾಡು ಆಕ್ರೋಶ


ಗೋಪಾಲ ಕೃಷ್ಣನ್

ತಿರುವನಂತಪುರ: ಮಲಯಾಳ ಸಿನಿಮಾ ಕ್ಷೇತ್ರದಲ್ಲಿ ನಡೆಯುತ್ತಿರುವ ತಾರತಮ್ಯವನ್ನು ಹೋಗಲಾಡಿಸಲು ಕೇರಳ ಸರ್ಕಾರ ಇಲ್ಲಿ ಆಯೋಜಿಸಿದ್ದ ಎರಡು ದಿನದ ಕಾರ್ಯಾಗಾರದಲ್ಲೇ 'ತಾರತಮ್ಯ'ದ ಕೂಗು ಕೇಳಿಬಂದು, ಪ್ರತಿಭಟನೆಗೂ ಸಾಕ್ಷಿಯಾಯಿತು.

ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸಿನಿಮಾ ನಿರ್ದೇಶಕ ಹಾಗೂ ನಿರ್ಮಾಪಕ ಅಡೂರ್ ಗೋಪಾಲಕೃಷ್ಣನ್, 'ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ) ಹಾಗೂ ಮಹಿಳೆಯರು ನಿರ್ಮಾಣ ಮಾಡುವ ಸಿನಿಮಾಗಳಿಗೆ ಕೇರಳ ರಾಜ್ಯ ಸಿನಿಮಾ ಅಭಿವೃದ್ಧಿ ನಿಗಮವು ₹1.50 ಕೋಟಿ ನೆರವು ನೀಡುತ್ತಿದೆ. ಆದರೆ, ನಿರೀಕ್ಷಿತ ಫಲಿತಾಂಶ ಬಾರದ ಕಾರಣ ಅದನ್ನು ಪರಿಷ್ಕರಿಸಬೇಕಾಗಿದೆ' ಎಂದು ತಿಳಿಸಿದರು.

'ಸಿನಿಮಾ ನಿರ್ಮಾಣಕ್ಕೆ ಬರುವ ಎಸ್.ಸಿ ಹಾಗೂ ಎಸ್.ಟಿ ಸಮುದಾಯದವರಿಗೆ ತಜ್ಞರಿಂದ ಮೂರು ತಿಂಗಳ ಕಾಲ ತರಬೇತಿ ನೀಡಬೇಕು. ₹1.5 ಕೋಟಿ ಮೊತ್ತವನ್ನು ಮೂವರು ಸಿನಿಮಾ ನಿರ್ಮಾಪಕರಿಗೆ ಸಮಾನವಾಗಿ ತಲಾ ₹50 ಲಕ್ಷದಂತೆ ಹಂಚಬೇಕು. ಅವರಿಗೆ ನೀಡುವ ಹಣ ಸಾರ್ವಜನಿಕರ ಹಣ ಎಂಬುದರ ಅರಿವು ಹೊಂದಿರಬೇಕು, ಹೀಗಾಗಿ ಗುಣಮಟ್ಟದ ಸಿನಿಮಾ ನಿರ್ಮಾಣ ಮಾಡಬೇಕು. ಅದೇ ರೀತಿ, ಸಿನಿಮಾ ನಿರ್ಮಾಣಕ್ಕೆ ಬರುವ ಮಹಿಳೆಯರಿಗೂ ನಿರಂತರ ತರಬೇತಿ ನೀಡಿದ ಬಳಿಕವೇ ಸರ್ಕಾರದ ಅನುದಾನ ನೀಡಬೇಕು' ಎಂದು ಸಲಹೆ ನೀಡಿದರು.

'ಮಲಯಾಳ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಹಿಳೆಯರು ನೀಡಿದ ದೂರು ಆಧರಿಸಿ 'ಹೇಮಾ ಸಮಿತಿ' ರಚಿಸಲಾಯಿತು. ಪೊಲೀಸರು ತನಿಖೆ ಆರಂಭಿಸಿದಾಗ ಕೆಲವರು ದೂರು ಹಿಂಪಡೆದರು, ಇದರಿಂದ ಏನೂ ಪ್ರಯೋಜನವಾಗಿಲ್ಲ' ಎಂದು ಸಂಗೀತ ನಿರ್ದೇಶಕ ಶ್ರೀ ಕುಮಾರ್ ಥಂಪಿ ತಿಳಿಸಿದರು.

ಕಾರ್ಯಾಗಾರದಲ್ಲಿ ಕೇರಳ ಸರ್ಕಾರವು 'ಸಿನಿಮಾ ನೀತಿ'ಯನ್ನು ಪ್ರಕಟಿಸಿತು. ಸಿನಿಮಾ ಕ್ಷೇತ್ರದಲ್ಲಿ ತಾರತಮ್ಯವನ್ನು ಹೋಗಲಾಡಿಸುವ ಗುರಿಯನ್ನು ಈ ನೀತಿ ಹೊಂದಿದೆ.

ಪ್ರೇಕ್ಷಕರಿಂದ ಪ್ರತಿಭಟನೆ–ಆಕ್ರೋಶ

ಅಡೂರ್ ಅವರು ಹೇಳಿಕೆ ನೀಡುತ್ತಿದ್ದಂತೆಯೇ, ಕಾರ್ಯಕ್ರಮದಲ್ಲಿ ಹಾಜರಿದ್ದ ಪ್ರೇಕ್ಷಕರು 'ತಾರತಮ್ಯ'ದ ಆರೋಪ ಮಾಡಿ ಎಂದು ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು.

'ನಿರ್ಲಕ್ಷಿತ ಸಮುದಾಯ ಹಾಗೂ ಮಹಿಳೆಯರು ಸಿನಿಮಾ ನಿರ್ಮಾಣ ಮಾಡಲು ಕಷ್ಟಪಡುತ್ತಿದ್ದಾರೆ. ಈಗಿನ ಸ್ಥಿತಿಗತಿಯಲ್ಲಿ ₹50 ಲಕ್ಷದಲ್ಲಿ ಸಿನಿಮಾ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಅಡೂರ್ ಗೋಪಾಲಕೃಷ್ಣನ್ ಅವರು ಕೂಡಲೇ ಹೇಳಿಕೆಯನ್ನು ಹಿಂದಕ್ಕೆ ಪಡೆಯಬೇಕು' ಎಂದು ದಲಿತ ಲೇಖಕ ಹಾಗೂ ಹೋರಾಟಗಾರ್ತಿ ಸನ್ನಿ ಕಾಪಿಕಾಡು ಒತ್ತಾಯಿಸಿದರು.

ಏರ್‌ಲೈನ್ಸ್ ಸಿಬ್ಬಂದಿ ಮೇಲೆ ಸೇನಾಧಿಕಾರಿ ಹಲ್ಲೆ

ಶ್ರೀನಗರ (ಪಿಟಿಐ, ಪ್ರಜಾವಾಣಿ ವಾರ್ತೆ): ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಲಗೇಜ್ ಕೊಂಡೊಯ್ಯಲು ಶುಲ್ಕ ವಿಧಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀನಗರ ವಿಮಾನ ನಿಲ್ದಾಣದಲ್ಲಿ ಸ್ಪೈಸ್‌ಜೆಟ್ ಏರ್‌ಲೈನ್ಸ್‌ನ ನಾಲ್ವರು ಸಿಬ್ಬಂದಿ ಮೇಲೆ ಸೇನಾಧಿಕಾರಿಯೊಬ್ಬರು ಹಲ್ಲೆನಡೆಸಿದ್ದಾರೆ.

ಜುಲೈ 26ರಂದು ಈ ಘಟನೆ ನಡೆದಿದ್ದು, ಹಲ್ಲೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಹಲ್ಲೆ ನಡೆದಿರುವುದನ್ನು ಏರ್‌ಲೈನ್ಸ್ ಹಾಗೂ ಪೊಲೀಸ್ ಸಿಬ್ಬಂದಿ ಖಚಿತಪಡಿಸಿದ್ದಾರೆ.

ಆಗಿದ್ದೇನು: 'ಶ್ರೀನಗರದಿಂದ ದೆಹಲಿಗೆ ಹೊರಟಿದ್ದ ವಿಮಾನದಲ್ಲಿ ಪ್ರಯಾಣಿಸಲು ಟಿಕೆಟ್ ಬುಕ್ಕಿಂಗ್ ಮಾಡಿದ್ದ ಸೇನಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ರಿತೇಶ್ ಕುಮಾರ್ ಸಿಂಗ್ ತಮ್ಮ ಜೊತೆಗೆ ಎರಡು ಲಗೇಜ್ ಬ್ಯಾಗ್‌ಗಳನ್ನು ತಂದಿದ್ದರು. ಇದು ನಿಗದಿಪಡಿಸಿದ 7 ಕೆ.ಜಿ. ತೂಕಕ್ಕಿಂತ ಹೆಚ್ಚು ತೂಕ (16ಕೆ.ಜಿ) ಹೊಂದಿತ್ತು. ಹೆಚ್ಚುವರಿ ಲಗೇಜ್‌ಗೆ ಶುಲ್ಕ ಪಾವತಿ ಮಾಡುವಂತೆ ಏರ್‌ಲೈನ್ಸ್ ಸಿಬ್ಬಂದಿಯು ಸೇನಾಧಿಕಾರಿಗೆ ಮನವಿ ಮಾಡಿದ್ದಾರೆ. ಇದಕ್ಕೆ ಒಪ್ಪದ ಅವರು, ವಾಯುಯಾನ ಶಿಷ್ಟಾಚಾರಗಳನ್ನು ಉಲ್ಲಂಘಿಸಿ, ಬೋರ್ಡಿಂಗ್ ಕಡ್ಡಾಯ ನಿಯಮಗಳನ್ನೂ ಪಾಲಿಸದೇ, ಬಲವಂತವಾಗಿ ಏರೋಬ್ರಿಡ್ಜ್ ಪ್ರವೇಶಿಸಿದ್ದಾರೆ. ಮಧ್ಯಪ್ರವೇಶಿಸಿದ ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆ ಯೋಧರು (ಸಿಐಎಸ್‌ಎಫ್) ಅವರನ್ನು ಮತ್ತೆ ಬೋರ್ಡಿಂಗ್ ದ್ವಾರದತ್ತ ಕರೆತಂದಿದ್ದಾರೆ.

ಈ ವೇಳೆ ಏರ್‌ಲೈನ್ಸ್ ಸಿಬ್ಬಂದಿ ಮೇಲೆ ಸೇನಾಧಿಕಾರಿಯು ಮಾತಿನ ಚಕಮಕಿ ನಡೆಸಿ, ದೈಹಿಕ ಹಲ್ಲೆ ನಡೆಸಿದ್ದಾರೆ. ಇದರಿಂದ ಒಬ್ಬರಿಗೆ ಬೆನ್ನುಮೂಳೆ ಮುರಿದಿದ್ದು, ಮತ್ತೊಬ್ಬರಿಗೆ ದವಡೆಗೆ ತೀವ್ರ ಗಾಯಗಳಾಗಿವೆ. ಮತ್ತಿಬ್ಬರಿಗೂ ಸಣ್ಣ ಪುಟ್ಟ ಗಾಯಗಳಾಗಿವೆ' ಎಂದು ಸ್ಪೈಸ್‌ಜೆಟ್ ಏರ್‌ಲೈನ್ಸ್ ವಕ್ತಾರರು ತಿಳಿಸಿದ್ದಾರೆ. 'ಸ್ಪೈಸ್‌ಜೆಟ್ ಒಬ್ಬ ಸಿಬ್ಬಂದಿ ಪ್ರಜ್ಞೆ ತಪ್ಪಿ ಕುಸಿದುಬಿದ್ದಿದ್ದರು. ಮತ್ತೊಬ್ಬರ ಮೇಲೆ ಕಾಲಿನಿಂದ ತುಳಿದು, ಹಲ್ಲೆ ನಡೆಸುವುದನ್ನು ಮುಂದುವರಿಸಿದ್ದರು. ಅವರ ಮೂಗು, ಬಾಯಿಯಲ್ಲಿ ರಕ್ತ ಸೋರುತ್ತಿತ್ತು' ಎಂದು ಹೇಳಿದ್ದಾರೆ.


'ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿದ್ದು, ದಾಳಿಯನ್ನು ಏರ್‌ಲೈನ್ಸ್ ಬಲವಾಗಿ ಖಂಡಿಸಿದ್ದು, ಭೀಕರ ಹಿಂಸಾಚಾರದ ಕೃತ್ಯವಾಗಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು' ಎಂದು ಅಧಿಕಾರಿ ತಿಳಿಸಿದ್ದಾರೆ.

ಎಫ್‌ಐಆರ್ ದಾಖಲು: 'ಹಲ್ಲೆ ಮಾಡಿದ ಅಧಿಕಾರಿ ವಿರುದ್ಧ ಕೊಲೆ ಯತ್ನ ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಹುಮ್‌ಹಮಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

'ತನಿಖೆ ಆರಂಭಿಸಿದ್ದು, ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆದಿದ್ದು, ಸಿಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದೆ' ಎಂದು ಹೇಳಿದ್ದಾರೆ. 'ಅಧಿಕಾರಿ ವಿರುದ್ಧ ದೂರು ದಾಖಲಿಸಿದ್ದು, ಸೇನಾಧಿಕಾರಿಯನ್ನು 'ನೋ-ಫ್ಲೈ' ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸ್ಪೈಸ್‌ಜೆಟ್ ತಿಳಿಸಿದೆ. 'ಪ್ರಕರಣದ ಬಗ್ಗೆ ಪರಿಶೀಲಿಸಲಾಗುವುದು' ಎಂದು ಸೇನೆ ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿ ಕುರಿತು ಏರ್‌ಲೈನ್ಸ್ ಸಿಬ್ಬಂದಿ ಆಕ್ರೋಶ ವ್ಯಕ್ತಪಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಶುಕ್ರವಾರ ಮುಂಬೈನಿಂದ ಕೋಲ್ಕತ್ತಕ್ಕೆ ಹೊರಟಿದ್ದ ವಿಮಾನದಲ್ಲಿ ಸಹ ಪ್ರಯಾಣಿಕರೊಬ್ಬರ ಕಪಾಳಕ್ಕೆ ಹೊಡೆದ ಪ್ರಯಾಣಿಕನಿಗೆ 'ವಿಮಾನ ಪ್ರಯಾಣದ ಮೇಲೆ ನಿಷೇಧ' ಹೇರಲಾಗಿದೆ' ಎಂದು ಇಂಡಿಗೊ ಏರ್‌ಲೈನ್ಸ್ ತಿಳಿಸಿದೆ.

'ಎಸ್‌ಐಆರ್': 7ರಂದು 'ಇಂಡಿಯಾ' ಸಭೆ


ರಾಹುಲ್ ಗಾಂಧಿ

ನವದೆಹಲಿ(ಪಿಟಿಐ): ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ವಿರುದ್ಧ ಕೈಗೊಂಡಿರುವ ಹೋರಾಟದ ಕಾರ್ಯತಂತ್ರ ಕುರಿತು ಚರ್ಚಿಸಲು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ನಾಯಕರು ಆಗಸ್ಟ್ 7ರಂದು ಸಭೆ ನಡೆಸುವ ನಿರೀಕ್ಷೆ ಇದೆ ಎಂದು ಮೂಲಗಳು ಭಾನುವಾರ ಹೇಳಿವೆ.

'ಎಸ್‌ಐಆರ್' ಪ್ರಕ್ರಿಯೆ ವಿರೋಧಿಸಿ ಆಗಸ್ಟ್ 8ರಂದು ಚುನಾವಣಾ ಆಯೋಗದ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲು ಯೋಜಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

'ಇಂಡಿಯಾ' ನಾಯಕರು ಆಗಸ್ಟ್ 7ರಂದು ಔತಣಕೂಟ ಹಮ್ಮಿಕೊಂಡಿದ್ದು, ಅದೇ ವೇಳೆ ನಡೆಯುವ ಸಭೆಯಲ್ಲಿ, ಹೋರಾಟದ ರೂಪುರೇಷೆ ಕುರಿತು ಚರ್ಚಿಸುವರು ಎಂದು ಇವೇ ಮೂಲಗಳು ತಿಳಿಸಿವೆ. ಉಪ ರಾಷ್ಟ್ರಪತಿ ಚುನಾವಣೆ ಬಗ್ಗೆಯೂ ಈ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ. ಮೈತ್ರಿಕೂಟದ ಅಭ್ಯರ್ಥಿಯನ್ನು ಕಣಕ್ಕಿಳಿಸಲು ವಿಪಕ್ಷಗಳ ನಾಯಕರು ಒಲವು ಹೊಂದಿದ್ದು, ಸಭೆ ಕುತೂಹಲ ಮೂಡಿಸಿದೆ.

'ಯಾವ ರಾಜಕೀಯ ಪಕ್ಷವೂ ಮನವಿ ಸಲ್ಲಿಸಿಲ್ಲ'

ನವದೆಹಲಿ(ಪಿಟಿಐ): 'ಆಗಸ್ಟ್ 1ರಂದು ಪ್ರಕಟಿಸಿರುವ ಮತದಾರರ ಪಟ್ಟಿಯ ಕರಡುವಿನಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡುವಂತೆ ಇಲ್ಲವೇ ತೆಗೆಯುವ ಕುರಿತಂತೆ ಬಿಹಾರದ ಯಾವುದೇ ರಾಜಕೀಯ ಪಕ್ಷವು ಆಯೋಗವನ್ನು ಸಂಪರ್ಕಿಸಿಲ್ಲ' ಎಂದು ಚುನಾವಣಾ ಆಯೋಗ ಭಾನುವಾರ ಹೇಳಿದೆ.

'ಕರಡು ಪ್ರಕಟಗೊಂಡ ನಂತರ, ಆಗಸ್ಟ್ 1ರ ಮಧ್ಯಾಹ್ನ 3ರಿಂದ ಆಗಸ್ಟ್ 3ರಂದು ಮಧ್ಯಾಹ್ನ 3 ಗಂಟೆ ವರೆಗಿನ ಅವಧಿಯಲ್ಲಿ ಇಂತಹ ಯಾವುದೇ ಬೇಡಿಕೆ ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗಿಲ್ಲ' ಎಂದೂ ಆಯೋಗವು ಹೇಳಿದೆ.

ತಮ್ಮ ಹೆಸರು ಸೇರಿಸುವಂತೆ ಇಲ್ಲವೇ ತಮಗೆ ಅರ್ಹತೆ ಇಲ್ಲದ ಕಾರಣ ಪಟ್ಟಿಯಿಂದ ಹೆಸರು ತೆಗೆದುಹಾಕುವಂತೆ ಕೋರಿ ವ್ಯಕ್ತಿಗತವಾಗಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ 941 ಎಂದು ಹೇಳಿದೆ.


ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಅಥವಾ ತೆಗೆದು ಹಾಕುವುದಕ್ಕೆ ಸೆಪ್ಟೆಂಬರ್ 1ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ತೇಜಸ್ವಿಯಿಂದ ಅಪರಾಧ: ಬಿಜೆಪಿ

ನವದೆಹಲಿ: 'ಎರಡು ಎಪಿಕ್‌ಗಳನ್ನು ಹೊಂದಿದ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅಪರಾಧ ಎಸಗಿದ್ದಾರೆ' ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.


'ಈ ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಆರ್‌ಜೆಡಿ ಮುಖವಾಡ ಕಳಚಿದೆ. ಈ ವಿಷಯ ಗೊತ್ತಿದ್ದೂ ನೀವು ಸುಳ್ಳು ಹೇಳಿದ್ದೀರಾ? ಚುನಾವಣಾ ಆಯೋಗಕ್ಕೂ ನೀವು ತಪ್ಪು ಮಾಹಿತಿ ನೀಡಿದ್ದೀರಾ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದ್ದಾರೆ.

'ಚುನಾವಣಾ ಆಯೋಗ ಸೇರಿ ವಿವಿಧ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಲು ಹಾಗೂ ಅವುಗಳ ಅವಹೇಳನ ಮಾಡಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಳ್ಳು ಹೇಳುತ್ತಿದ್ದಾರೆ' ಎಂದೂ ಟೀಕಿಸಿದ್ದಾರೆ.



ಚುನಾವಣಾ ಆಯೋಗವು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಆಯೋಗದ ಇಂತಹ ನಡೆ ವಿರುದ್ಧ ರಾಜಕೀಯ ಹಾಗೂ ಕಾನೂನು ಹೋರಾಟ ಅಗತ್ಯ

ಪಿ.ಚಿದಂಬರಂ, ಹಿರಿಯ ಕಾಂಗ್ರೆಸ್ ನಾಯಕ



ಚುನಾವಣಾ ಆಯೋಗ ತಟಸ್ಥವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದೇ ಪ್ರಶ್ನಾರ್ಹ. ಹೀಗಾಗಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಚರ್ಚೆ ನಡೆಯಬೇಕು ಎಂಬುದು ವಿಪಕ್ಷಗಳ ಬೇಡಿಕೆ

ಗೌರವ್ ಗೊಗೊಯ್, ಹಿರಿಯ ಕಾಂಗ್ರೆಸ್ ನಾಯಕ

ತೇಜಸ್ವಿಗೆ ಆಯೋಗ ನೋಟಿಸ್

ಒಂದನೇ ಪುಟದಿಂದ...

'ಮತ್ತೊಂದೆಡೆ, ನಿಮ್ಮ ಹೆಸರು ಮತಗಟ್ಟೆ ಸಂಖ್ಯೆ 204ರ (ಬಿಹಾರ ಪಶುವಿಜ್ಞಾನ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿದೆ) ಮತದಾರರ ಪಟ್ಟಿಯಲ್ಲಿ ಇದ್ದು 'ಆರ್‌ಎಬಿ456228' ಸಂಖ್ಯೆ ಹೊಂದಿದೆ ಎಂಬುದು ಕೂಡ ತನಿಖೆಯಿಂದ ತಿಳಿದುಬಂದಿದೆ' ಎಂದು ವಿವರಿಸಲಾಗಿದೆ.

'ಮತ್ತೊಂದು ಎಪಿಕ್ ಅನ್ನು ಕೂಡಲೇ ಸಂಬಂಧಪಟ್ಟ ಅಧಿಕಾರಿ ಹಸ್ತಾಂತರಿಸಬೇಕು' ಎಂದು ಆಯೋಗ ಸೂಚನೆ ನೀಡಿದೆ.

ಮುಜುಗರ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಬಿಹಾರದಲ್ಲಿ ನಡೆಯುತ್ತಿರುವ ಹೋರಾಟದ ಮುಂಚೂಣಿಯಲ್ಲಿರುವ ತೇಜಸ್ವಿ ಯಾದವ್, 'ಚುನಾವಣಾ ಆಯೋಗವು ಬಿಜೆಪಿ ಏಜೆಂಟ್‌ನಂತೆ ವರ್ತಿಸುತ್ತಿದೆ' ಎಂದು ಟೀಕಿಸಿದ್ದರು. ಈಗ, ಎಪಿಕ್ ವಿಚಾರವಾಗಿ ಆಯೋಗವು ನೋಟಿಸ್ ನೀಡಿರುವುದರಿಂದ ತೇಜಸ್ವಿ ಅವರು ಮುಜುಗರಕ್ಕೆ ಒಳಗಾಗಿದ್ದಾರೆ.


ವಿಪಕ್ಷಗಳ ಬೇಡಿಕೆ ನಿರ್ಲಕ್ಷ್ಯ ಸಾಧ್ಯತೆ

ಒಂದನೇ ಪುಟದಿಂದ...

ಮಣಿಪುರದಲ್ಲಿ ಜಾರಿಯಲ್ಲಿರುವ ರಾಷ್ಟ್ರಪತಿ ಆಡಳಿತ ಆಗಸ್ಟ್ 12ಕ್ಕೆ ಕೊನೆಗೊಳ್ಳಲಿದೆ. ಆಗಸ್ಟ್ 13ರಿಂದ ಅನ್ವಯವಾಗುವಂತೆ ರಾಷ್ಟ್ರಪತಿ ಆಡಳಿತ ವಿಸ್ತರಣೆ ಮಾಡುವ ಕುರಿತ ನಿರ್ಣಯವನ್ನು ಕಳೆದ ವಾರ ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ. ಈ ಕುರಿತು ರಾಜ್ಯಸಭೆಯಲ್ಲಿ ಚರ್ಚೆ ನಡೆಯಲಿದೆ.

ಫೆಬ್ರುವರಿ 13ರಂದು ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಲಾಗಿತ್ತು. ಕಳೆದ ಗುರುವಾರ ಮತ್ತು ಶುಕ್ರವಾರ ಈ ನಿರ್ಣಯ ಕುರಿತು ಚರ್ಚೆ ನಡೆಸಲು ಸರ್ಕಾರ ಮುಂದಾಗಿತ್ತು. ಬಿಹಾರದಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿಚಾರ ಮುಂದಿಟ್ಟುಕೊಂಡು ಪ್ರತಿಪಕ್ಷಗಳು ಪ್ರತಿಭಟಿಸಿದ ಪರಿಣಾಮ, ಯಾವುದೇ ಚರ್ಚೆ ನಡೆಯದೇ ಸದನವನ್ನು ಮುಂದೂಡಲಾಗಿತ್ತು.

'ಎಸ್‌ಐಆರ್ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಪ್ರತಿಭಟನೆ ಮುಂದುವರಿಸಿದರೂ ಮಹತ್ವದ ಮಸೂದೆಗಳನ್ನು ಮಂಡಿಸಲಾಗುವುದು' ಎಂದು ಆಡಳಿತಾರೂಢ ಪಕ್ಷದ ಸಂಸದರೊಬ್ಬರು ಹೇಳಿದ್ದಾರೆ.



ಬಿಹಾರದಲ್ಲಿ ನಡೆಯುತ್ತಿರುವ 'ಎಸ್‌ಐಆರ್' ಕುರಿತು ಚರ್ಚೆ ನಡೆಸಲು ಬಿಜೆಪಿಗೆ ಹೆದರಿಕೆ. ಚುನಾವಣಾ ಆಯೋಗ ಕೈಗೊಂಡಿರುವ ಈ ಪ್ರಕ್ರಿಯೆ 'ಅಗೋಚರ ಚುನಾವಣಾ ಅಕ್ರಮ'ವೇ ಆಗಿದೆ

ಡೆರೆಕ್ ಒಬ್ರಯಾನ್, ಟಿಎಂಸಿ ನಾಯಕ


ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಭವನದಲ್ಲಿ ಭಾನುವಾರ ಭೇಟಿ ಮಾಡಿದರು. – ಪಿಟಿಐ ಚಿತ್ರ

'ಯೋಗಿ, ಭಾಗವತ್, ರವಿಶಂಕರ್ ಹೆಸರು ಹೇಳುವಂತೆ ಚಿತ್ರಹಿಂಸೆ'

ಬಲಿಯಾ(ಉತ್ತರ ಪ್ರದೇಶ)(ಪಿಟಿಐ): 'ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಯೋಗಿ ಆದಿತ್ಯನಾಥ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಮುಖಂಡ ಇಂದ್ರೇಶ್ ಕುಮಾರ್ ಅವರನ್ನು ಹೆಸರಿಸುವಂತೆ ಜೈಲಿನಲ್ಲಿದ್ದಾಗ ನನಗೆ ಚಿತ್ರಹಿಂಸೆ ನೀಡಲಾಯಿತು' ಎಂದು ಮೇಜರ್ (ನಿವೃತ್ತ) ರಮೇಶ್ ಉಪಾಧ್ಯಾಯ ಭಾನುವಾರ ಹೇಳಿದ್ದಾರೆ.

ಪ್ರಕರಣದಲ್ಲಿ ಆರೋಪಿಯಾಗಿದ್ದ ಉಪಾಧ್ಯಾಯ ಅವರನ್ನು ಎನ್‌ಐಎ ವಿಶೇಷ ನ್ಯಾಯಾಲಯ ಇತ್ತೀಚೆಗೆ ಖುಲಾಸೆಗೊಳಿಸಿದೆ. ಬಲಿಯಾ ಜಿಲ್ಲೆಯ ರಾಮನಗರದವರಾದ ಉಪಾಧ್ಯಾಯ ಅವರನ್ನು 2008ರ ಅಕ್ಟೋಬರ್ 28ರಂದು ಬಂಧಿಸಲಾಗಿತ್ತು.

'ಯೋಗಿ ಆದಿತ್ಯನಾಥ, ಮೋಹನ್ ಭಾಗವತ್, ಶ್ರೀ ಶ್ರೀ ರವಿಶಂಕರ್ ಹಾಗೂ ಇಂದ್ರೇಶ್ ಕುಮಾರ್ ಅವರ ಹೆಸರನ್ನು ವಿಚಾರಣೆ ವೇಳೆ ಪೊಲೀಸರು ಪದೇಪದೇ ಉಲ್ಲೇಖಿಸುತ್ತಿದ್ದರು' ಎಂದು ಹೇಳಿದ್ದಾರೆ.

'ಪೊಲೀಸರು ಕಸ್ಟಡಿಗೆ ತೆಗೆದುಕೊಂಡ ಕ್ಷಣದಿಂದಲೇ ನನಗೆ ವಿಪರೀತ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಲಾಯಿತು. ನಾನು ನಿರಪರಾಧಿ ಎಂಬುದು ನನಗೆ ಗೊತ್ತಿತ್ತು. ಇದೇ ಕಾರಣಕ್ಕೆ ಸುಳ್ಳುಪತ್ತೆ ಪರೀಕ್ಷೆ ಹಾಗೂ ಮಂಪರು ಪರೀಕ್ಷೆಗಳಿಗೆ ಸ್ವತಃ ನಾನೇ ಒಳಗಾಗಿದ್ದೆ. ಆದರೆ, ಈ ಪರೀಕ್ಷೆಗಳ ವರದಿಗಳನ್ನು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಲೇ ಇಲ್ಲ' ಎಂದು ಉಪಾಧ್ಯಾಯ ಹೇಳಿದ್ದಾರೆ.

'ಮಾಲೇಗಾಂವ್ ಪಟ್ಟಣಕ್ಕೆ ನಾನು ಹೋಗಿಯೇ ಇಲ್ಲ. ನನ್ನ ವಿರುದ್ಧ 25 ಆರೋಪಗಳನ್ನು ಹೊರಿಸಲಾಗಿತ್ತು. ಎಲ್ಲವೂ ಸುಳ್ಳು ಎಂಬುದು ನ್ಯಾಯಾಲಯದಲ್ಲಿ ಸಾಬೀತಾದವು. 17 ವರ್ಷಗಳ ನಂತರ ಕೊನೆಗೂ ನನಗೆ ನ್ಯಾಯ ಸಿಕ್ಕಿದೆ' ಎಂದು ಹೇಳಿದ್ದಾರೆ.

ಸತ್ಯಮೇವ ಜಯತೇ ಎಂಬ ಮಾತು ಸಾಬೀತಾಗಿದೆ. ಕೇಸರಿ ಭಯೋತ್ಪಾದನೆ ಎಂಬ ಪದ ಸೃಷ್ಟಿ ಮಾಡಿದವರಿಗೆ ಕಪಾಳಮೋಕ್ಷ ಮಾಡಿದಂತಾಗಿದೆ

ಪ್ರಜ್ಞಾ ಸಿಂಗ್ ಠಾಕೂರ್, ಮಾಜಿ ಸಂಸದೆ

ಮೂವತ್ತೈದು ರನ್‌ಗಳ ಸುತ್ತ; ಕೌತುಕದ ಹುತ್ತ!

ಬ್ರೂಕ್–ರೂಟ್ ಶತಕದ ಜೊತೆಯಾಟ
- ಪ್ರಸಿದ್ಧ, ಸಿರಾಜ್ ಉತ್ತಮ ಬೌಲಿಂಗ್
- ಭಾರತಕ್ಕೆ ಜಯದ 'ಚುಟುಕು ಆಸೆ'

• ಸಿದ್ಧಿ ಕಿರಣ್



ಲಂಡನ್: ಇಂಗ್ಲೆಂಡ್ ತಂಡದ ಭವಿಷ್ಯ ಮತ್ತು ವರ್ತಮಾನದ ತಾರೆಗಳಾದ ಹ್ಯಾರಿ ಬ್ರೂಕ್ ಹಾಗೂ ಜೋ ರೂಟ್ ಅವರು 'ಬಾಝ್‌ಬಾಲ್' ಆಟದ ಅನಾವರಣ ಮಾಡಿದರು. ಅದರೊಂದಿಗೆ ಟೆಸ್ಟ್ ಸರಣಿಯನ್ನು ತಮ್ಮ ಮಡಿಲಿಗೆ ಹಾಕಿಕೊಳ್ಳುವತ್ತ ದಾಪುಗಾಲಿಟ್ಟರು. ಆದರೆ ಭಾನುವಾರವೇ ಗೆಲುವಿನ ಸಂಭ್ರಮ ಆಚರಿಸುವ ಆತಿಥೇಯ ಬಳಗಕ್ಕೆ ಭಾರತದ ಬೌಲರ್‌ಗಳು ಅಡ್ಡಿಯಾದರು.

ದಿಟ್ಟತನ ಮತ್ತು ಛಲದ ಆಟವಾಡಿದ ಪ್ರವಾಸಿ ಬೌಲರ್‌ಗಳಿಂದಾಗಿ ಈ ಪಂದ್ಯ ಹಾಗೂ ಸರಣಿಯ ಕ್ಲೈಮ್ಯಾಕ್ಸ್ ಸೋಮವಾರಕ್ಕೆ ಮುಂದೂಡಲ್ಪಟ್ಟಿತು. ಸರಣಿಯನ್ನು 2–2ರಿಂದ ಸಮ ಮಾಡಿಕೊಳ್ಳುವ ಗಿಲ್ ಬಳಗದ ಆಸೆ ಇನ್ನೂ 'ಚುಟುಕು ಜೀವ' ಹಿಡಿದುಕೊಂಡಿದೆ. 374 ರನ್‌ಗಳ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡವು ಭಾನುವಾರ ದಿನದಾಟಕ್ಕೆ ಮಳೆ ಮತ್ತು ಮಂದಬೆಳಕಿನ ಕಾರಣದಿಂದ ತೆರೆ ಬೀಳುವ ಮುನ್ನ 76.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 339 ರನ್ ಗಳಿಸಿತು. ಗೆಲುವಿಗೆ ಇನ್ನೂ 35 ರನ್‌ಗಳು ಆತಿಥೇಯರಿಗೆ ಬೇಕು. ಪಂದ್ಯದಲ್ಲಿ ಇನ್ನೊಂದು ದಿನ ಬಾಕಿಯಿದೆ. ನಾಲ್ಕನೇ ದಿನದಾಟದ ಕೊನೆಯ ಹಂತದಲ್ಲಿ ದಿಟ್ಟ ಬೌಲಿಂಗ್ ಮಾಡಿದ ಭಾರತದ ಬೌಲರ್‌ಗಳೂ ಸೋಮವಾರ ಬೆಳಿಗ್ಗೆ ಇಂಗ್ಲೆಂಡ್ ತಂಡಕ್ಕೆ ತಡೆಯೊಡ್ಡಿ ಜಯ ಸಾಧಿಸುವ ಛಲದಲ್ಲಿದ್ದಾರೆ.

ಜೀವದಾನ ಮತ್ತು ಜೊತೆಯಾಟ: ಪಂದ್ಯದ ಮೂರನೇ ದಿನದಾಟದಲ್ಲಿ ಇಂಗ್ಲೆಂಡ್ 50 ರನ್‌ಗಳಿಗೆ 1 ವಿಕೆಟ್ ಕಳೆದುಕೊಂಡಿತ್ತು. ಭಾನುವಾರ ಬೆಳಿಗ್ಗೆ ಸಿರಾಜ್, ಆಕಾಶ್ ದೀಪ್ ಮತ್ತು ಪ್ರಸಿದ್ಧಕೃಷ್ಣ ಅವರು ಅಮೋಘ ಬೌಲಿಂಗ್ ಮಾಡಿದರು. ಇದರ ಫಲವಾಗಿ ಬೆನ್ ಡಕೆಟ್ ಮತ್ತು ಓಲಿ ಪೋಪ್ ಅವರ ವಿಕೆಟ್‌ಗಳನ್ನು ಕ್ರಮವಾಗಿ ಪ್ರಸಿದ್ಧ ಮತ್ತು ಸಿರಾಜ್ ಕಬಳಿಸಿದರು. ಇದರಿಂದಾಗಿ ಇಂಗ್ಲೆಂಡ್ ತಂಡವು 106 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಗಿಲ್ ಬಳಗದ ಉತ್ಸಾಹ ಮುಗಿಲುಮುಟ್ಟಿತು.



ಇಂಗ್ಲೆಂಡ್ ತಂಡದ ಬ್ಯಾಟರ್ ಹ್ಯಾರಿ ಬ್ರೂಕ್ ಶತಕ ಸಂಭ್ರಮ

ಚಿತ್ರಗಳು: ಎಎಫ್‌ಪಿ/ಪಿಟಿಐ

ಆದರೆ ಕ್ರೀಸ್‌ಗೆ ಬಂದ ಬ್ರೂಕ್ (111 ರನ್, 98ಎಸೆತ) ಅಕ್ಷರಶಃ ಟಿ20 ಮಾದರಿಯ ಬ್ಯಾಟಿಂಗ್ ಪ್ರದರ್ಶಿಸಿದರು.

ಇಂಗ್ಲೆಂಡ್ ನಿಗದಿಯ ಓವರ್‌ಗಳ ಕ್ರಿಕೆಟ್ ತಂಡದ ನಾಯಕರಾಗಿರುವ 26 ವರ್ಷದ ಬ್ರೂಕ್ ಹಾಗೂ ಮಾಜಿ ನಾಯಕ ಜೋ ರೂಟ್ (105; 152 ಎಸೆತ) ಅವರಿಬ್ಬರೂ ಶತಕ ದಾಖಲಿಸಿದರು. ಅಲ್ಲದೇ 195 ರನ್‌ಗಳ ಜೊತೆಯಾಟವಾಡಿ ತಂಡದ ಸೋಲಿನ ಆತಂಕವನ್ನು ದೂರ ಮಾಡಿದರು. ಇದಕ್ಕೆ ಕಾರಣವಾಗಿದ್ದು ಮೊಹಮ್ಮದ್ ಸಿರಾಜ್ ಅವರು ಬ್ರೂಕ್‌ಗೆ ನೀಡಿದ 'ಜೀವದಾನ'.

ಪ್ರಸಿದ್ಧ ಹಾಕಿದ 35ನೇ ಓವರ್‌ನ ಮೊದಲ ಎಸೆತವನ್ನು ಬ್ರೂಕ್ ಹುಕ್ ಮಾಡಿದರು. ಆದರೆ ಟೈಮಿಂಗ್ ನಿಖರವಾಗಿರಲಿಲ್ಲ. ಡೀಪ್ ಫೈನ್ ಲೆಗ್‌ನಲ್ಲಿದ್ದ ಸಿರಾಜ್ ಅವರು ಚೆಂಡನ್ನು ಕೈತುಂಬಿಕೊಂಡರು. ಆದರೆ ಸಿರಾಜ್ ತಮ್ಮ ಕಾಲನ್ನು ಬೌಂಡರಿಗೆರೆಯ ಮೇಲೆ ಇಟ್ಟರು. ಅದಾಗಲೇ ಇತ್ತ ಒಂದು ಸುತ್ತು ಸಂಭ್ರಮಿಸಿದ್ದ ಬೌಲರ್ ಪ್ರಸಿದ್ಧ ನಿರಾಶೆಗೊಂಡರು. ಬ್ರೂಕ್ ಆ ಸಂದರ್ಭದಲ್ಲಿ 19 ರನ್ ಮಾತ್ರ ಗಳಿಸಿದ್ದರು. ಜೀವದಾನ ಸಿಕ್ಕ ನಂತರ ಬ್ರೂಕ್ ಎಲ್ಲ ಬೌಲರ್‌ಗಳಿಗೂ ಬೆವರಿಳಿಸಿದರು. ಮೂವರು ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳಿಗೂ ಬ್ರೂಕ್ ಜಗ್ಗಲಿಲ್ಲ. ಇನ್ನೊಂದು ಬದಿಯಲ್ಲಿ ರೂಟ್ ತಮ್ಮ ಎಂದಿನ ಶಾಂತ ಮತ್ತು ಚೆಂದದ ಶೈಲಿಯ ಬ್ಯಾಟಿಂಗ್ ಮಾಡುತ್ತಿದ್ದರು. ಆರಡಿ ಎತ್ತರದ ಬ್ರೂಕ್ ಅವರು ಪ್ರಯೋಗಿಸುತ್ತಿದ್ದ ಪುಲ್, ಹುಕ್, ಡ್ರೈವ್ ಮತ್ತು ಫ್ಲಿಕ್‌ಗಳಿಗೆ ಚೆಂಡು ಬೌಂಡರಿ ಗೆರೆ ದಾಟುತ್ತಿತ್ತು. ಭಾರತದ ಫೀಲ್ಡರ್‌ಗಳ ಕೆಲವು ಲೋಪಗಳೂ ಅವರಿಗೆ ಅನುಕೂಲವಾದವು. ಬ್ರೂಕ್ ಈ ಸರಣಿಯಲ್ಲಿ ಎರಡನೇ ಶತಕ ದಾಖಲಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 224 (69.4 ಓವರುಗಳಲ್ಲಿ)
ಇಂಗ್ಲೆಂಡ್: 247 (51.2 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ: 396 (88 ಓವರುಗಳಲ್ಲಿ)
ಇಂಗ್ಲೆಂಡ್: 6 ವಿಕೆಟ್‌ಗೆ 339 ರನ್ (76.2 ಓವರುಗಳಲ್ಲಿ)

ಡಕೆಟ್ ಸಿ ರಾಹುಲ್ ಬಿ ಪ್ರಸಿದ್ಧ 54 (83ಎ, 4x14)
ಪೋಪ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 27 (34ಎ, 4x5)
ರೂಟ್ ಸಿ ಜುರೆಲ್ 105 (152ಎ, 4x12)
ಬ್ರೂಕ್ ಸಿ ಸಿರಾಜ್ ಬಿ ಆಕಾಶ್‌ದೀಪ್ 111 (98ಎ, 4x14, 6x2)
ಬೆಥೆಲ್ ಬಿ ಪ್ರಸಿದ್ಧ 1 (31ಎ)
ಜೆಮಿ ಸ್ಮಿತ್ ಔಟಾಗದೇ 2 (17ಎ)
ಜೆಮಿ ಓವರ್ಟನ್ 0 (8ಎ)
ಇತರೆ: 21 (ಬೈ 1, ಲೆಗ್‌ಬೈ 8, ನೋಬಾಲ್ 1, ವೈಡ್ 11)
ವಿಕೆಟ್ ಪತನ: 2–82 (ಬೆನ್ ಡಕೆಟ್, 22.4), 3–106 (ಒಲಿ ಪೋಪ್, 27.3), 4–301 (ಹ್ಯಾರಿ ಬ್ರೂಕ್, 62.4), 5–332 (ಜೇಕಬ್ ಬೆಥೆಲ್, 70.4), 6–337 (ಜೋ ರೂಟ್, 72.6)
ಬೌಲಿಂಗ್: ಆಕಾಶ್ ದೀಪ್: 20–4–85–1, ಪ್ರಸಿದ್ಧ ಕೃಷ್ಣ 22.2–3–109–3, ಮೊಹಮ್ಮದ್ ಸಿರಾಜ್ 26–5–95–2, ವಾಷಿಂಗ್ಟನ್ ಸುಂದರ್ 4–0–19–0, ರವೀಂದ್ರ ಜಡೇಜ 4–0–22–0.



ಜೋ ರೂಟ್ ಶತಕ ಸಂಭ್ರಮ

ಚಹಾ ವಿರಾಮಕ್ಕೆ ಸ್ವಲ್ಪ ಹೊತ್ತಿಗೆ ಮುನ್ನ ಆಕಾಶ್ ದೀಪ್ ಎಸೆತವನ್ನು ಮುನ್ನುಗ್ಗಿ ಹೊಡೆಯುವ ಯತ್ನದಲ್ಲಿ ಬ್ರೂಕ್ ಅವರು ಮಿಡ್ ಆಫ್‌ನಲ್ಲಿದ್ದ ಸಿರಾಜ್ ಅವರಿಗೆ ಕ್ಯಾಚ್ ಆದರು. ಇದರ ನಂತರ ರೂಟ್ ಅವರು ಇನಿಂಗ್ಸ್ ಹೊಣೆ ಹೊತ್ತುಕೊಂಡರು. ಜೊತೆಗೆ ತಮ್ಮ ಶತಕದತ್ತಲೂ ಹೆಜ್ಜೆ ಹಾಕಿದರು. ಸಿರಾಜ್ ಅವರ ಒಂದೇ ಓವರ್‌ನಲ್ಲಿ ಎರಡು ಬೌಂಡರಿ ಕೂಡ ಬಾರಿಸಿದರು.

ಚಹಾ ವಿರಾಮದ ನಂತರದ ಆಟದಲ್ಲಿ ಪ್ರಸಿದ್ಧ ನಿಖರ ದಾಳಿಗೆ ಜೋ ರೂಟ್ ಮತ್ತು ಜೇಕಬ್ ಬೆಥೆಲ್ (5 ರನ್) ಔಟಾದರು. ಈ ಹಂತದಲ್ಲಿ ಭಾರತ ತಂಡದಲ್ಲಿ ಮತ್ತೆ ಗೆಲುವಿನ ಆಸೆ ಚಿಗುರಿತು. ಎಲ್ಲರ ಮುಖದಲ್ಲಿಯೂ ಹೊಳಪು ಮರುಕಳಿಸಿತು. ಕ್ರೀಸ್‌ನಲ್ಲಿದ್ದ ಜೆಮಿ ಸ್ಮಿತ್ (ಬ್ಯಾಟಿಂಗ್ 2) ಮತ್ತು ಜೆಮಿ ಓವರ್ಟನ್ ಅವರು ತಾಳ್ಮೆಯ ಆಟಕ್ಕೆ ಮೊರೆಹೋದರು. ಇದೇ ಹೊತ್ತಿನಲ್ಲಿ ಮಳೆ ಆಟ ಆರಂಭವಾಯಿತು.



ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡದ ಆಟಗಾರ್ತಿಯರು ಆಗ್ರಾ ತಂಡದ ದಾಳಿಗಾರ್ತಿಯನ್ನು ನಿಯಂತ್ರಿಸುವ ಪ್ರಯತ್ನ ಮಾಡಿದರು

ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಕಬಡ್ಡಿ: ಡ್ರಾ ಪಂದ್ಯದಲ್ಲಿ ಬೆಂಗಳೂರು ಕೆವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರಿಯ ವಿದ್ಯಾಲಯಗಳ ಬೆಂಗಳೂರು ವಲಯದ ಬಾಲಕಿಯರ ತಂಡವು ಇಲ್ಲಿ ನಡೆಯುತ್ತಿರುವ ಕೇಂದ್ರಿಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದ 14 ವರ್ಷದೊಳಗಿನವರ ವಿಭಾಗದಲ್ಲಿ ಆಗ್ರಾ ತಂಡದ ಎದುರು ರೋಚಕ ಡ್ರಾ ಸಾಧಿಸಿತು.

ಹೆಬ್ಬಾಳದ ಕೇಂದ್ರಿಯ ವಿದ್ಯಾಲಯದ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಸ್ಥಳೀಯ ತಂಡವು 27–27ರಿಂದ ಆಗ್ರಾ ಎದುರು ಸಮಬಲ ಸಾಧಿಸಿತು. ದಿನದ ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ತಂಡ 19–28 ಅಂಕಗಳಿಂದ ರಾಂಚಿ ತಂಡದ ವಿರುದ್ಧ ಸೋತಿತು.

ಫಲಿತಾಂಶಗಳು: ಹೈದರಾಬಾದ್ 38–24 ರಿಂದ ಭುವನೇಶ್ವರ ವಿರುದ್ಧ; ಕೋಲ್ಕತ್ತ 35–18ರಿಂದ ಪಟ್ನಾ ವಿರುದ್ಧ; ಜಮ್ಮು23–15ರಿಂದ ಜೈಪುರ ವಿರುದ್ಧ; ದೆಹಲಿ 33–20ರಿಂದ ಡೆಹ್ರಾಡೂನ್ ವಿರುದ್ಧ; ಅಹಮದಾಬಾದ್ 30–22 ರಿಂದ ವಾರಾಣಸಿ ವಿರುದ್ಧ; ಚಂಡೀಗಢ 34–17 ರಿಂದ ಎರ್ನಾಕುಳಂ ವಿರುದ್ಧ; ಲಖನೌ 24–15ರಿಂದ ಮುಂಬೈ ವಿರುದ್ಧ; ಜಬಲ್‌ಪುರ 29–17ರಿಂದ ಎರ್ನಾಕುಳಂ ವಿರುದ್ಧ; ಚೆನ್ನೈ 31–04ರಿಂದ ಪಟ್ನಾ ವಿರುದ್ಧ; ಗುವಾಹಟಿ 38–34ರಿಂದ ರಾಂಚಿ ವಿರುದ್ಧ; ಜಮ್ಮು24–08ರಿಂದ ಭೋಪಾಲ್ ವಿರುದ್ಧ; ದೆಹಲಿ 36–06ರಿಂದ ಭುವನೇಶ್ವರ ವಿರುದ್ಧ; ಕೋಲ್ಕತ್ತ 35–10ರಿಂದ ವಾರಾಣಸಿ ಎದುರು ಜಯ ಸಾಧಿಸಿದವು.

ಲಾಂಗ್‌ಜಂಪ್: ಶ್ರೀಶಂಕರ್‌ಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಅವರು ಕಜಕಸ್ತಾನದ ಅಲ್ಮಾಟಿಯಲ್ಲಿ ನಡೆದ ಕೊಸನೊವ್ ಸ್ಮರಣಾರ್ಥ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಶಸ್ತಿ ಗೆದ್ದುಕೊಂಡರು.



ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಕಂಚಿನ ಪದಕ ಮಟ್ಟದ ಕೂಟ ಇದಾಗಿದೆ. ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಶ್ರೀಶಂಕರ್ ಅವರು ಶನಿವಾರ ನಡೆದ ಪುರುಷರ ವಿಭಾಗದ ಲಾಂಗ್ ಜಂಪ್‌ನಲ್ಲಿ 7.94 ಮೀಟರ್ಸ್ ದೂರ ಜಿಗಿದು ಪ್ರಶಸ್ತಿ ಗಳಿಸಿದರು.

ಮೊದಲ ಯತ್ನದಲ್ಲೇ (7.94 ಮೀ.) ಪ್ರಶಸ್ತಿ ಖಚಿತಪಡಿಸಿಕೊಂಡ ಶ್ರೀಶಂಕರ್ ಅವರು ಎರಡನೇ ಜಂಪ್‌ನಲ್ಲಿ 7.73 ಮೀ. ಜಿಗಿದರು. ನಂತರದ ಜಂಪ್‌ಗಳಲ್ಲಿ ಕ್ರಮವಾಗಿ 7.58 ಮೀ., 7.57 ಮೀ., 7.80 ಮೀ. ಹಾಗೂ 7.79 ಮೀ. ಜಿಗಿದರು.

ಅವರು ಈಚೆಗೆ ಪೋರ್ಚುಗಲ್‌ನಲ್ಲಿ ನಡೆದ ಮಯಾ ಸಿಡೇಡ್ ಡು ಡೆಸ್ಪೊರ್ಟೊ ಕೂಟದಲ್ಲಿಯೂ ಪ್ರಶಸ್ತಿ ಜಯಿಸಿದ್ದರು.

ಪ್ರಾಬಲ್ಯ ಮೆರೆದ ಮೆಕಿಂಟೋಷ್, ಮರ್ಷಾನ್

ವಿಶ್ವ ಈಜು ಚಾಂಪಿಯನ್‌ಷಿಪ್‌ಗೆ ತೆರೆ: ಅಮೆರಿಕ ರಿಲೇ ತಂಡದಿಂದ ವಿಶ್ವದಾಖಲೆ

ಸಿಂಗಪುರ (ಎಎಫ್‌ಪಿ): ಸೂಪರ್‌ಸ್ಟಾರ್‌ಗಳಾದ ಲಿಯಾನ್ ಮರ್ಷಾನ್ ಮತ್ತು ಸಮ್ಮರ್ ಮೆಕಿಂಟೋಷ್ ಅವರು ವಿಶ್ವ ಈಜು ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಭಾನುವಾರ ತಮ್ಮ ಸ್ಪರ್ಧೆಗಳನ್ನು ಅಧಿಕಾರಯುತವಾಗಿ ಗೆದ್ದುಕೊಂಡರು. ಅಮೆರಿಕ ತಂಡವು ರಿಲೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿತು.

ಮಹಿಳೆಯರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯನ್ನು 18 ವರ್ಷ ವಯಸ್ಸಿನ ಸಮ್ಮರ್ 4 ನಿ.25.7 ಸೆ.ಗಳಲ್ಲಿ ಪೂರೈಸಿದರು. ಇದು ಚಾಂಪಿಯನ್‌ಷಿಪ್‌ನ ದಾಖಲೆಯಾಯಿತು. ಕೆನಡಾದ ತಾರೆ ಎಂಟು ದಿನಗಳ ಈ ಕೂಟದಲ್ಲಿ ಗೆದ್ದ ನಾಲ್ಕನೇ ಸ್ವರ್ಣ ಇದು.

ಆಸ್ಟ್ರೇಲಿಯಾದ ಜೆನ್ನಾ ಫಾರಿಸ್ಟರ್ ಮತ್ತು ಜಪಾನ್‌ನ ಮಿಯೊ ನರಿಟಾ (4ನಿ 33.26 ಸೆ.) ಅವರು ಏಕಕಾಲದಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಹಂಚಿಕೊಂಡರು. ಚೀನಾದ 12 ವರ್ಷ ವಯಸ್ಸಿನ ಪ್ರತಿಭಾನ್ವಿತೆ ಯು ಝಿದಿ (4ನಿ.33.76 ಸೆ.) ಕೂದಲೆಳೆಯಿಂದ ಪದಕ ಕಳೆದುಕೊಂಡರು.

ಇದಕ್ಕೆ ಮೊದಲು 200 ಮೀ. ಮೆಡ್ಲೆ, 200 ಮೀ. ಬಟರ್‌ಫ್ಲೈ ಮತ್ತು 400 ಮೀ. ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಮೊದಲಿಗರಾಗಿದ್ದ ಮೆಕಿಂಟೋಷ್, ಈ ಕೂಟದ ತಮ್ಮ ಕೊನೆಯ ಸ್ಪರ್ಧೆಯಲ್ಲೂ ಯಾವ ಹಂತದಲ್ಲೂ ಹಿನ್ನಡೆ ಕಾಣಲಿಲ್ಲ.



ಪ್ರಶಸ್ತಿಯೊಂದಿಗೆ ಕೆನಡಾದ ಈಜು ತಾರೆ ಸಮ್ಮರ್ ಮೆಕಿಂಟೋಷ್ (ಎಡ) ಹಾಗೂ ಫ್ರಾನ್ಸ್ ಲಿಯಾನ್ ಮರ್ಷಾನ್

ಎಎಫ್‌ಪಿ ಚಿತ್ರ

ಈ ಕೂಟದಲ್ಲಿ ಅವರು ಏಕೈಕ ಹಿನ್ನಡೆ ಅನುಭವಿಸಿದ್ದು 800 ಮೀ. ಫ್ರೀಸ್ಟೈಲ್‌ನಲ್ಲಿ. ಅಮೆರಿಕದ 28 ವರ್ಷ ವಯಸ್ಸಿನ ಕೇಟಿ ಲೆಡೆಕಿ ಆ ಸ್ಪರ್ಧೆಯಲ್ಲಿ ಪ್ರಾಬಲ್ಯ ಸಾಧಿಸಿದ್ದರು.

ಮಿಂಚಿದ ಮರ್ಷಾನ್: 200 ಮೀ. ಮೆಡ್ಲೆಯಲ್ಲಿ ಕಳೆದ ವಾರ ಚಿನ್ನ ಗೆದ್ದಿದ್ದ ಫ್ರಾನ್ಸ್‌ನ ಮರ್ಷಾನ್, 400 ಮೀ. ವೈಯಕ್ತಿಕ ಮೆಡ್ಲೆಯಲ್ಲೂ ಮೊದಲಿಗರಾದರು. 23 ವರ್ಷ ವಯಸ್ಸಿನ ಮರ್ಷಾನ್ 4ನಿ.04.73 ಸೆ.ಗಳಲ್ಲಿ ಈಜಿ, ಜಪಾನ್‌ನ ಟೊಮೊಯುಕಿ ಮಾತ್ಸುಶಿಟಾ (4ನಿ.08.32 ಸೆ.) ಅವರಿಗಿಂತ ಮೂರು ಸೆಕೆಂಡು ಮೊದಲೇ ಗುರಿ ತಲುಪಿದರು. ರಷ್ಯಾದ ಇಲ್ಯಾ ಬೊರೊಡಿನ್ (4ನಿ.09.16 ಸೆ.) ಕಂಚು ಗೆದ್ದರು.

ಈ ಕೂಟದ ಆರಂಭದಲ್ಲಿ ಅಮೆರಿಕ ತಂಡದ ಸ್ಪರ್ಧಿಗಳು ಹೊಟ್ಟೆಕೆಟ್ಟು ಸಮಸ್ಯೆ ಎದುರಿಸಿದ್ದರು. ದಿಗ್ಗಜರಾದ ಮೈಕೆಲ್ ಫೆಲ್ಪ್ಸ್ ಮತ್ತು ಲಾಕ್ಟಿ ಅವರಿಂದ ಟೀಕೆಗೂ ಒಳಗಾಗಿದ್ದರು. ಆದರೆ 4x100 ಮೀ. ಮೆಡ್ಲೆ ರಿಲೆಯಲ್ಲಿ ಮಹಿಳೆಯರ ತಂಡ ತಮ್ಮದೇ ವಿಶ್ವ ದಾಖಲೆ ಸುಧಾರಿಸುವ ಮೂಲಕ ಟೀಕಾಕಾರರ ಬಾಯಿ ಮುಚ್ಚಿಸಿತು.

ಅಮೆರಿಕ ತಂಡವು 3ನಿ.49.34 ಸೆ.ಗಳಲ್ಲಿ ಗುರಿತಲುಪಿ, ವರ್ಷದ ಹಿಂದೆ ಪ್ಯಾರಿಸ್‌ನಲ್ಲಿ ಸ್ಥಾಪಿಸಿದ್ದ ತಮ್ಮದೇ ವಿಶ್ವದಾಖಲೆ (3ನಿ.49.63ಸೆ.) ಮುರಿಯಿತು.

ಅಮೆರಿಕಕ್ಕೆ 9 ಚಿನ್ನ: ಕಾಡಿದ ಆರೋಗ್ಯ ಸಮಸ್ಯೆಗಳ ನಡುವೆಯೂ ಅಮೆರಿಕ ತಂಡ ಈಜುಪಟುಗಳು ಒಟ್ಟು 9 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು. ಆಸ್ಟ್ರೇಲಿಯಾ ಎಂಟು ಚಿನ್ನ, ಫ್ರಾನ್ಸ್ ಮತ್ತು ಕೆನಡಾ ತಲಾ ನಾಲ್ಕು ಚಿನ್ನ ಗಳಿಸಿದವು. ಕೆನಡಾಕ್ಕೆ ಎಲ್ಲ ಚಿನ್ನಗಳನ್ನು ಮೆಕಿಂಟೋಷ್ ಗೆದ್ದುಕೊಟ್ಟಿದ್ದು ವಿಶೇಷ.

ಶಾನ್‌ಗೆ 28ನೇ ಸ್ಥಾನ: ಕೂಟದಲ್ಲಿ ಭಾರತದ ಅಭಿಯಾನ ನಿರಾಶೆಯೊಂದಿಗೆ ಅಂತ್ಯಗೊಂಡಿತು. ಪುರುಷರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಶಾನ್ ಗಂಗೂಲಿ 28ನೇ ಸ್ಥಾನ ಪಡೆದರು.

20 ವರ್ಷ ವಯಸ್ಸಿನ ಗಂಗೂಲಿ ಟ್ರಯಲ್ಸ್‌ನಲ್ಲಿ 4ನಿ.30.40 ಸೆ.ಗಳಲ್ಲಿ ದೂರ ಕ್ರಮಿಸಿದರು. ಆದರೆ ಎಂಟು ಮಂದಿಯ ಅಂತಿಮ ಸುತ್ತಿಗೆ ಅರ್ಹತೆ ಪಡೆಯವಲು ವಿಫಲರಾದರು.

ಒಟ್ಟಾರೆ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಈಜು ಸ್ಪರ್ಧಿಗಳು ಯಾರೂ ಹೀಟ್ಸ್ ಹಂತ ದಾಟಿ ಮೇಲೇರಲಿಲ್ಲ.





ಬಾಲಕರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದ ದರ್ಕ್ಷಣ್ ಎಸ್. (ಎಡ) ಬಾಲಕಿಯರ 4x200 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನದ ಪದಕ ಜಯಿಸಿದ ವಿಹಿತಾ, ಶ್ರೀಚರಣಿ, ಮೀನಾಕ್ಷಿ ಮೆನನ್ ಹಾಗೂ ಹಾಶಿಕಾ ರಾಮಚಂದ್ರ ಅವರನ್ನೊಳಗೊಂಡ ತಂಡ

ಈಜು: ಕರ್ನಾಟಕ ಸ್ಪರ್ಧಿಗಳ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಅಹಮದಾಬಾದ್‌ನಲ್ಲಿ ಭಾನುವಾರ ಆರಂಭಗೊಂಡ 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ತೋರಿದರು.

ಬಾಲಕರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ದರ್ಕ್ಷಣ್ ಎಸ್. ಅವರು 3ನಿ.57.77 ಸೆ.ಗಳಲ್ಲಿ ಗುರಿ ತಲುಪಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ದರ್ಶನ್ ಎಸ್. (4ನಿ.03.03ಸೆ.) ದ್ವಿತೀಯ ಸ್ಥಾನ ಪಡೆದರು.

ತನಿಷಿ ಗುಪ್ತಾ ಅವರು ಬಾಲಕಿಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕೂಟ ದಾಖಲೆಯ (1ನಿ.00.93ಸೆ.) ಜೊತೆಗೆ ಪ್ರಶಸ್ತಿ ತಮ್ಮದಾಗಿಸಿಕೊಂಡರು. 200 ಮೀ. ಫ್ರೀಸ್ಟೈಲ್‌ನಲ್ಲಿ ತ್ರಿಶಾ ಸಿಂಧು ಎಸ್. 2ನಿ.13.47ಸೆ.ಗಳಲ್ಲಿ ಗುರಿ ಮುಟ್ಟುವುದರೊಂದಿಗೆ ಚಿನ್ನದ ಪದಕ ಜಯಿಸಿದರು.

ಬಾಲಕರ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಅದ್ವೈತ ವೆಂಕಟ ಮಧಿರ ಅವರು (28.54ಸೆ.) ಸ್ವರ್ಣಕ್ಕೆ ಮುತ್ತಿಕ್ಕಿದರು. ಬಾಲಕಿಯರ 50 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ವಿಹಿತಾ ನಯನ ಲೋಕನಾಥನ್ 29.84 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆಲ್ಲುವುದರೊಂದಿಗೆ ಕೂಟ ದಾಖಲೆಯನ್ನೂ ನಿರ್ಮಿಸಿದರು.

ವಿಹಿತಾ, ಶ್ರೀಚರಣಿ, ಮೀನಾಕ್ಷಿ ಮೆನನ್ ಹಾಗೂ ಹಾಶಿಕಾ ರಾಮಚಂದ್ರ ಅವರನ್ನೊಳಗೊಂಡ ತಂಡವು ಬಾಲಕಿಯರ 4x200 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು.

ಒಟ್ಟಾರೆ 7 ಚಿನ್ನ, 5 ಬೆಳ್ಳಿ ಹಾಗೂ 4 ಕಂಚಿನ ಪದಕಗಳೊಂದಿಗೆ ಕರ್ನಾಟಕದ ಸ್ಪರ್ಧಿಗಳು ಟೂರ್ನಿಯಲ್ಲಿ ಪಾರಮ್ಯ ಮೆರೆದರು.

ಜೂನಿಯರ್ ರಾಷ್ಟ್ರೀಯ ಈಜು ಇಂದಿನಿಂದ

ಬೆಂಗಳೂರು: ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಸೋಮವಾರದಿಂದ 41ನೇ ಸಬ್ ಜೂನಿಯರ್ ಈಜು ಹಾಗೂ 51ನೇ ರಾಷ್ಟ್ರೀಯ ಜೂನಿಯರ್ ವಾಟರ್ ಪೋಲೊ ಮತ್ತು ಡೈವಿಂಗ್ ಸ್ಪರ್ಧೆಗಳು ನಡೆಯಲಿವೆ.

22 ರಾಜ್ಯಗಳ 600ಕ್ಕೂ ಅಧಿಕ ಈಜುಪಟುಗಳು ಈ ಕೂಟದಲ್ಲಿ ಭಾಗವಹಿಸಲಿದ್ದಾರೆ. ಡೈವಿಂಗ್ ಸ್ಪರ್ಧೆಗಳು ಹಲಸೂರಿನ ಕೆನ್ಸಿಂಗ್‌ಟನ್ ಈಜುಕೊಳದಲ್ಲಿ ನಡೆಯಲಿವೆ. ವಾಟರ್ ಪೋಲೊ ಸ್ಪರ್ಧೆಗಳು ಬಸವನಗುಡಿಯ ಈಜುಕೊಳದಲ್ಲಿ ನಡೆಯಲಿದ್ದು, ಬಾಲಕರ ವಿಭಾಗದಲ್ಲಿ 14 ತಂಡಗಳು ಹಾಗೂ ಬಾಲಕಿಯರ ವಿಭಾಗದಲ್ಲಿ 7 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಸತೀಶ್ ಕುಮಾರ್ ತಿಳಿಸಿದ್ದಾರೆ.

ಇಶಾನ್ ಮೆಹ್ರಾ, ವೇದಾಂತ ವಿ.ಎಂ., ಹಾಶಿಕಾ ಹಾಗೂ ರುಜುಲಾ ಅವರು ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿಗಳು ಎನಿಸಿದ್ದಾರೆ.

ರಾಜ್ಯ ತಂಡ: ಬಾಲಕರು: ಇಶಾನ್ ಮೆಹ್ರಾ, ಆರ್ಯನ್ ಭಟ್, ಆರ್. ನವನೀತ್ ಗೌಡ, ದಕ್ಷಣ್ ಎಸ್., ಮೋನಿಷ್ ಪಿ.ವಿ., ಸೋಹಂ ಮಂಡಲ್, ದರ್ಶನ್ ಎಸ್., ಸ್ವರೂಪ್ ಡಿ., ಆರ್ಯನ್ ಪಾಟೀಲ, ಸಮರ್ಥ ಗೌಡ ಬಿ.ಎಸ್., ಅಮನ್ ಎ.ಎಸ್., ವೇದಾಂತ ವಿ.ಎಂ., ಯಶ್ ಕಾರ್ತಿಕ್, ಆಯುಷ್ ಎಂ.ಎಸ್., ವಿಶಾಖನ್ ಶರವಣನ್, ಯಶ್ ಎಚ್. ಪಾಲ್, ಸಾಯೀಶ್ ಕಿಣಿ, ಹರಿಕಾರ್ತಿಕ್ ವೇಲು, ಅನೀಶ್ ಅನಿರುದ್ಧ ಕೋರೆ, ಸೂರ್ಯ ಜೆ.ಟಿ., ರಾಘವ್ ಎಸ್. ಹಾಗೂ ಪೃಥ್ವಿಜೀತ್ ಮೆನನ್

ಬಾಲಕಿಯರು: ರುಜುಲಾ ಎಸ್., ಚರಿತಾ ಪಿ., ಸುಹಾಸಿನಿ ಘೋಷ್, ಹಾಶಿಕಾ ರಾಮಚಂದ್ರ, ವಿಹಿತಾ ನಯನ, ಶ್ರೀಚರಣಿ ಟಿ., ಮೀನಾಕ್ಷಿ ಮೆನನ್, ತಾನ್ಯಾ ಎಸ್., ಅದಿತಿ ವಿನಾಯಕ್, ಹಿತಶ್ರೀ ಎನ್., ಸಿದ್ಧಿ ಶಾ, ನೈಶಾ, ಇಂಚರಾ ಪಿ., ಮಾನವಿ ವರ್ಮಾ, ಹಿಯಾ ಎಂ., ರಿಯಾನ್ನ ಡಿ. ಫರ್ನಾಂಡೀಸ್, ಸಮನ್ವಿ ಇ.ಎಸ್., ತನಿಷಿ ಗುಪ್ತಾ ಹಾಗೂ ಅಂಜಲಿ ಹೊಸಕೆರೆ.